ಶ್ರೀ ಎಸ್. ಎಂ. ಕೃಷ್ಣ.—ಶನಿವಾರದ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಶ್ರೀ ಕಾಗೋಡು ತಿಮ್ಮಪ್ಪನವರ ಭಾಷಣ ಮುಗಿಯುವತನಕ ಕಡೆವರೆಗೂ ಸಭೆಯಲ್ಲೇ ಇದ್ದರು. ಆವರ ಆ ದಿನ ಮಾತ್ರ ಮಾನ್ಯ ಬಂಗಾರಪ್ಪನವರು ಮಾತ್ರ ಸಭೆಯಲ್ಲಿ ಬಹಳ ಹೊತ್ತು ಇದ್ದಂತೆ ಕಾಣಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹೌದು, ಆ ದಿವಸ ಸಭೆಯಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರ ಜಾತೀಯತೆಯ ಭಾಷಣ ನಡೆಯುತ್ತಿತ್ತು. ಅದನ್ನು ಅವರು ಬಹಳ ಆಸಕ್ತಿಯಿಂದ ಕೇಳಲು ಉಳಿದಿದ್ದರು ಮತ್ತು ಅವರ ಭಾಷಣವನ್ನು ತಮ್ಮ ಅನುಕೂಲಕ್ಕೆ ಹೇಗೆ ಉಪಯೋಗವಾಗುತ್ತದೆ ಎಂಬುದನ್ನು ಅವರ ತಿಳಿದುಕೊಳ್ಳತಕ್ಕ ಉದ್ದೇಶದಿಂದ ಕುಳಿತಿದ್ದರು...

A Question of Privilege
incorrect information given by the Chief Minister on 25-4-1974

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಷಯ : ಮೊನ್ನೆ ಇಲ್ಲಿ ಧರಣ ನಡೆದ ದಿವಸ ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡತಕ್ಕ ಕಾಲದಲ್ಲಿ ಅವರು ಸಭೆಯನ್ನು ತಪ್ಪುದಾರಿಗೆ......

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ : ಆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಏನು ಒಂದು ಪದವನ್ನು ಉಪಯೋಗ ಮಾಡಿದ್ದಾರೆ—ಅದರಿಂದ ಸಭೆಯ ಹಕ್ಕುಬಾಧ್ಯತೆಗೆ ಲೋಪ ಬಂದಿದೆ ಎಂದೇನು ಮಾನ್ಯ ಸದಸ್ಯರಾದ ಬಂಗಾರಪ್ಪನವರು ಒಂದು ನಿರ್ಣಯವನ್ನು ಕಳುಹಿಸಿದ್ದಾರೆ ಅದನ್ನು ಚರ್ಚೆಗೆ ಇಲ್ಲಿ ಅಂಗೀಕರಿಸಬೇಕಾಗಿದ್ದರೆ ಅದಕ್ಕೆ ಕೆಲವು ಶರತ್ತುಗಳಿವೆ. ಆದರೆ ಆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಉದ್ದೇಶಪೂರ್ವಕವಾಗಿ ಸಭೆಗೆ ಒಂದು ತಪ್ಪು ಕಲ್ಪನೆ ಬರಲಿ ಎಂಬ ಅಭಿಪ್ರಾಯವನ್ನು ಇಟ್ಟುಕೊಂಡು ಅವರು ಆ ಪದವನ್ನು ಉಪಯೋಗಮಾಡಲಿಲ್ಲ. ಯಾವ ಒಂದು ದುರುದ್ದೇಶ ಮತ್ತು ತಪ್ಪು ಕಲ್ಪನೆಯೂ ಇಲ್ಲದೆ ಮರವೆಯಲ್ಲಿ ಅವರು ಆ ಪದವನ್ನು ಉಪಯೋಗ ಮಾಡಿದ್ದಾರೆ. ಅವರ ಮನೋಭೂಮಿಕೆಯಲ್ಲಿ ಅಂಥ ಯಾವತಪ್ಪು ಕಲ್ಪನೆಗಳೂ ಇರಲಿಲ್ಲ. ಅದೊಂದು ಬೋನಾಫೈಡಿ ಮಿಸ್ಟೇಕ್. ಆದ್ದರಿಂದ ಅದನ್ನು ಇಷ್ಟಕ್ಕೇ ಮಾನ್ಯ ಸಭೆಯವರು ಕೈಬಿಡಬೇಕೆಂದು ಅತ್ಯಂತವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ ಮತ್ತು ಆ ಘಟನೆಯ ಬಗ್ಗೆ ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

BUDGET ESTIMATES for 1974–75 demands for Grants
Demand Nos. 3 and 31 (*Debate continued*)

† ಶ್ರೀ ಡಿ. ಕೆ. ನಾಯ್ಕರ್ (ನ್ಯಾಯಾಂಗ ಮತ್ತು ನಗರಾಡಳಿತ ಶಾಖೆಗಳ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ. ಈ ಸದನದ ಮುಂದೆ ಮಂಡಿಸಿರತಕ್ಕ ನನ್ನ ಎರಡು ಬೇಡಿಕೆಗಳ ಬಗ್ಗೆ ಮಾನ್ಯ ಸದಸ್ಯರೇನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಹಾಗೂ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅವರೆಲ್ಲರಿಗೂ ನಾನು ನನ್ನ ಕೃತಜ್ಞತೆಗಳನ್ನು ಸಲ್ಲಿಸ ಬಯಸುತ್ತೇನೆ.

ಇನ್ನು ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಬಗ್ಗೆ ಮಾತನಾಡುತ್ತ ಮಾನ್ಯ ನಾಗಣ್ಣನವರು ಬೆಂಗಳೂರಲ್ಲಿರತಕ್ಕ ಕೋರ್ಟುಗಳಲ್ಲಿ ಸರಿಯಾಗಿ ಒಳ್ಳೇ ಹವಾಬರುವುದಕ್ಕೆ ಅವಕಾಶವಿರುವುದಿಲ್ಲವೆಂದೂ ಮತ್ತು ಕಟ್ಟಡಗಳು ಬಹಳ ಇಕ್ಕಟ್ಟಾಗಿ ಅಲ್ಲಿ ಬರತಕ್ಕ ಕಕ್ಷಿಗಾರರಿಗೆ ಕುಳಿತುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲವೆಂದೂ ಹೇಳಿದ್ದಾರೆ. ಅದೇ ರೀತಿಯಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರು ನಗರದಲ್ಲಿರತಕ್ಕ ಕೋರ್ಟ್ ಕಟ್ಟಡಗಳನ್ನು ಕುರಿತು ಅವು ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಕಟ್ಟಿಸಿದ ಕಟ್ಟಡಗಳೆ ಅವುಗಳು ಸರಿಯಾದ ಸ್ಥಿತಿಯಲ್ಲಿ ಇಲ್ಲವಾದ್ದರಿಂದ ಅಲ್ಲಿ ಕೂಡ ಸರಿಯಾದ ಕಟ್ಟಡಗಳೆಂದು ಅವಶ್ಯಕ ಬಹಳವಾಗಿದೆ ಎಂದು ಅವರು ಕೂಡ ಆ ಹಿಂದೆ ಸದಸ್ಯರವಾದವನ್ನು ಎತ್ತಿಹಿಡಿದಿದ್ದಾರೆ. ಅದೇ ರೀತಿ ಶ್ರೀ ಶ್ರೀರಾಮುಲುರವರು ಕೂಡ ಕೋರ್ಟಿಗೆ ಬರತಕ್ಕ ಕಕ್ಷಿಗಾರ ಕುಳಿತುಕೊಳ್ಳುವುದಕ್ಕೆ ಸರಿಯಾಗಿ ಸ್ಥಳವಿಲ್ಲವೆಂದೂ ಮತ್ತು ಕೇಸುಗಳು

(ಶ್ರೀ ಡಿ. ಕೆ. ನಾಯ್ಕರ್)

ತೀರ್ಮಾನವಾಗುತ್ತಿರುವುದರಲ್ಲಿ ನಿಧಾನವಾಗುತ್ತಿರುವುದರಿಂದ ಜನರಿಗೆ ಕೋರ್ಟುಗಳ ಬಗ್ಗೆ ಇದ್ದ ವಿಶ್ವಾಸ ಹೋಗುತ್ತಿದೆಯೆಂದೂ ಜನರಿಗೆ ಬರುವುದಕ್ಕೆ ಬೇಜಾರಾಗಿದ್ದಾರೆ ಎಂದು ಹೇಳಿದರು. ಹೀಗೆ ಇವರೇನು ಹೇಳಿದ್ದಾರೆ ಇವರೆಲ್ಲರ ಮಾತುಗಳಲ್ಲೂ ಸ್ವಲ್ಪ ನಿಜಾಂಶವಿದೆ. ಜನರಿಗೆ ನ್ಯಾಯದಾನ ನೀಡಲು ನಾವೇನು ಈ ಕೋರ್ಟುಗಳನ್ನು ಟೆಂಪಲ್ ಆಫ್ ಜಸ್ಟೀಸ್-ಎಂದು ಹೇಳುತ್ತ ಇದ್ದೇವೆ, ಈ ಕೋರ್ಟುಗಳನ್ನು ಒಂದು ಒಳ್ಳೆಯ ವಾತಾವರಣದಲ್ಲಿ ಇರುವಂತೆ ಕಟ್ಟತಕ್ಕದ್ದು ಸರ್ಕಾರದವರ ಕರ್ತವ್ಯ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 25 ವರ್ಷಗಳು ಕಳೆದಿದ್ದಾಗ್ಯೂ ಈ ಒಂದು ವಿಷಯಕ್ಕೆ ಸರ್ಕಾರ ಹೆಚ್ಚಿನ ಗಮನ ಕೊಡದೆ ಇದ್ದುದಕ್ಕಾಗಿ ನಾನು ತುಂಬಾ ವ್ಯಸನಪಡಬೇಕಾಗಿದೆ. ಆದರೆ ನಾವು ಅಂದರೆ ನಮ್ಮ ಪಕ್ಷ ಅಧಿಕಾರಕ್ಕೆ ಬಂದು ಇನ್ನೂ ಕೇವಲ ಒಂದೆರಡು ವರ್ಷಗಳಾದವು. ಅರ್ಷಗಳಾದವು. ಅಷ್ಟರಲ್ಲಿ ನಮ್ಮ ಸರ್ಕಾರಕ್ಕೆ ಎಂಥ ಆರ್ಥಿಕ ಬಿಕ್ಕಟ್ಟು ಉಂಟಾಯಿತೆಂಬುದು ಎಲ್ಲರಿಗೂ ತಿಳಿದಿರತಕ್ಕ ವಿಷಯ. ಆದಾಗ್ಯೂ ನಮ್ಮ ಸರ್ಕಾರ ಈ ಕೋರ್ಟುಗಳ ಕಟ್ಟಡಗಳಿಗಾಗಿ 8 ಲಕ್ಷ ರೂಪಾಯಿಗಳನ್ನು ಮುಡುಪಾಗಿಟ್ಟಿದೆ. ಈ ಹಣದಲ್ಲಿ ಎಷ್ಟು ಕಟ್ಟಡಗಳನ್ನು ಕಟ್ಟಿಸಲು ಸಾಧ್ಯವೋ ಅಷ್ಟನ್ನು ಮಾತ್ರ ಈ ಸಾಲಿನಲ್ಲಿ ಕಟ್ಟಿಸುವುದಕ್ಕೆ ಅವಕಾಶ ಇರುತ್ತದೆ.

ಇನ್ನು ಮಾನ್ಯ ಮಾದೇಗೌಡರು ಮಾತನಾಡುತ್ತ ಜಿಲ್ಲೆಗೊಂದು ಕೋರ್ಟಿದ್ದರೆ ಸಾಕೆಂದೂ ತಾಲ್ಲೂಕಿಗೊಂದು ಕೋರ್ಟನ್ನು ಮಾಡತಕ್ಕದ್ದು ಅನಗತ್ಯವೆಂದೂ ಹೇಳಿದರು, ಅವರು ಹಾಗೆ ಹೇಳುತ್ತ ಕೊಟ್ಟ ಒಂದು ಕಾರಣವೆಂದರೆ ತಾಲ್ಲೂಕಿನಲ್ಲಿ ಕೋರ್ಟನ್ನು ಸ್ಥಾಪನೆ ಮಾಡಿದಾಗ ಅಲ್ಲಿಗೆ ವಕೀಲರನ್ನು ಜಿಲ್ಲಾಮಟ್ಟದಲ್ಲೇ ಹೋಗಿ ಕರೆದುಕೊಂಡು ಬರಬೇಕಾಗುತ್ತದೆ ಅದಕ್ಕಾಗಿ ತಾಲ್ಲೂಕ್ ಮಟ್ಟದಲ್ಲಿ ಕೋರ್ಟುಗಳು ಅನಗತ್ಯ ಎಂದು ವಾದಿಸಿದ್ದರೆ ಅದೇ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತ ತಾಲ್ಲೂಕಿಗೊಂದು ಕೋರ್ಟು ಇರಬೇಕೆಂದು, ಎಲ್ಲಿ 75 ಸಾವಿರ ಜನ ಸಂಖ್ಯೆ ಇದೆ ಆ ತಾಲ್ಲೂಕಿಗೆ ಕೋರ್ಟನ್ನು ಕೊಟ್ಟು ಒಂದೂವರೆ ಲಕ್ಷ ಜನ ಸಂಖ್ಯೆ ಇರತಕ್ಕ ತಾಲ್ಲೂಕಿಗೆ ಕೋರ್ಟನ್ನು ಕೊಟ್ಟಿಲ್ಲವೆಂದು ಆಕ್ಷೇಪಣೆ ಮಾಡಿದರು. ಆದರೆ ಈ ಕೋರ್ಟುಗಳನ್ನು ಕೊಡತಕ್ಕ ವಿಚಾರದಲ್ಲಿ ಸರ್ಕಾರದವರ ನೀತಿ ಏನಾಗಿದೆ ಎಂದರೆ ಸಾಮಾನ್ಯವಾಗಿ ಈ ಲಿಟಿಗೆಂಟ್ ಪಬ್ಲಿಕ್ಕಿಗೆ ನ್ಯಾಯವು ಸರಳವಾಗಿ ಮತ್ತು ಸರಾಗವಾಗಿ ಸುಲಭ ವೆಚ್ಚದಲ್ಲಿ ಸಿಗಬೇಕು ಅನ್ನುವಂಥಾದ್ದಾಗಿದೆ. ಆ ದೃಷ್ಟಿಯಿಂದ ಹೇಳುವುದಾದರೆ ಕೋರ್ಟುಗಳನ್ನು ತಾಲ್ಲೂಕಿಗೊಂದು ಕೊಡತಕ್ಕ ಅಗತ್ಯವಿದೆ ಎಂಬುದನ್ನು ಮಾನ್ಯ ಮಾದೇಗೌಡರೂ ಕೂಡ ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ಆದರೆ ಇದರಲ್ಲಿ ಜನಸಂಖ್ಯೆ ಆಧಾರವೊಂದೇ ಅಲ್ಲ, ಅಲ್ಲಿ ಖಟ್ಲೆಗಳ ಸಂಖ್ಯೆ ಎಷ್ಟಿರಬೇಕು ಎಂಬುದೂ ಒಂದು ಕಂಡೀಷನ್ನಿದೆ. ಇದನ್ನೆಲ್ಲಾ ಪರಿಶೀಲನೆ ಮಾಡಿ ಹೈಕೋರ್ಟಿನವರು ಶಿಫಾರಸ್ಸು ಮಾಡುತ್ತಾರೆ. ಅವರ ಶಿಫಾರ್ಸಿನಂತೆ ಸರ್ಕಾರ ಕೋರ್ಟುಗಳನ್ನು ಮಂಜೂರು ಮಾಡುತ್ತದೆ.

ಇನ್ನು ಶ್ರೀ ಭಂಗಿಯವರು ತಮ್ಮದೇ ಆದ ಶೈಲಿಯಲ್ಲಿ ಮಾತನಾಡುತ್ತ ಕೆಲವು ಕೋರ್ಟುಗಳಲ್ಲಿ ಖಟ್ಲೆಗಳು ಬಹಳ ಕಡಮೆ ಇದ್ದರೆ ಇನ್ನು ಕೆಲವು ಕೋರ್ಟುಗಳಲ್ಲಿ ಖಟ್ಲೆಗಳು ಸಂಖ್ಯೆ ಬಹಳವಾಗಿರುತ್ತದೆಂದು ಹೇಳಿದ್ದಾರೆ......

ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದು ಎಲ್ಲೆಲ್ಲಿ ಖಟ್ಲೆಗಳ ಸಂಖ್ಯೆಯು ಹೆಚ್ಚಾಗಿದೆ ಎಲ್ಲೆಲ್ಲಿ ಖಟ್ಲೆಗಳು ತೀವ್ರತೆಯಿಂದ ನಿಕಾಲೆಯಾಗುತ್ತಿಲ್ಲ ಅಂಥ ಕಡೆ ಹೈಕೋರ್ಟಿನ ಶಿಪರಸಿನ ಪ್ರಕಾರ ಅಡೀಷನಲ್ ಕೋರ್ಟುಗಳನ್ನು ಕೊಡಲಾಗುತ್ತಿದೆ. ಎಲ್ಲೆಲ್ಲಿ ಖಟ್ಲೆಗಳ ಸಂಖ್ಯೆ ಕಡಮೆಯಾಗಿದೆ, ಎಲ್ಲೆಲ್ಲಿ ಖಟ್ಲೆಗಳು ಸಾಕಷ್ಟು ನಿಕಾಲೆಯಾಗಿವೆ ಅಲ್ಲಿ ಕೋರ್ಟುಗಳ ಸಂಖ್ಯೆಯನ್ನು ಕಡಮೆಮಾಡಲ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಶ್ರೀ ಭಂಗಿಯವರಿಗೆ ತಿಳಿಸುತ್ತೇನೆ.

ಇನ್ನು ಶೀರಾಳಿ ಚಂದ್ರಶೇಖರ್ ತಮ್ಮ ಭಾಷಣದಲ್ಲಿ ಕನ್ನಡ ಕೋರ್ಟುಗಳಲ್ಲ ಮೂಲಭಾಷೆಯಾಗಿರಬೇಕು ಎಂದು ಪ್ರತಿಪಾದಿಸಿದ್ದಾರೆ. ಕನ್ನಡಭಾಷೆ ಕೋರ್ಟುಭಾಷೆ ಮಾಡಬೇಕೆಂಬ ತತ್ತ್ವವನ್ನು ಒಪ್ಪಿ ಸರಕಾರ ಇದಕ್ಕಾಗಿ ಡೈರೆಕ್ಟೋರೇಟ್ ಅಫ್ ಟ್ರಾನ್ಸ್‌ಲೇಷನ್ ಒಂದನ್ನು ಮಾಡಿದೆ, ಈಗಾಗಲೇ ಅದು ಭರದಿಂದ ಕೆಲಸಮಾಡುತ್ತಿದೆ. ಬಹುಶಃ ವರ್ಷ-ಎರಡು ವರ್ಷದಲ್ಲ ಕನ್ನಡ ಭಾಷೆ, ಹೈಕೋರ್ಟು ಬಿಟ್ಟು ಕೆಳಕೋರ್ಟುಗಳಲ್ಲಿ ಬಳಕೆಗೆ ಬರಬಹುದು ಎಂಬ ನಂಬಿಕೆ ಸರಕಾರಕ್ಕಿದೆ.

ಇನ್ನೊಂದು ವಿಷಯವನ್ನು ಭಂಗಿಯವರು ಹೇಳಿದರು. ಜಡ್ಜುಗಳನ್ನು ನೇಮಕಮಾಡುವಾಗ ಹೆಂಗಸರಿಗೆ ಅವಕಾಶ ಕೊಡುತ್ತಿಲ್ಲ, ಅವರಿಗೆ ಪ್ರಾಶಸ್ತ್ಯ ಕೊಟ್ಟಿಲ್ಲ ಎಂದು ಹೇಳಿದರು. ಜಡ್ಜು ಗಳನ್ನು ನೇಮಕ ಮಾಡುವಾಗ ರೂಲ್ಸ್ ಪ್ರಕಾರ ಗಂಡಸರು ಮತ್ತು ಹೆಂಗಸರು ಎಂಬ ಬೇಧ ಭಾವವಿಲ್ಲ. ರೂಲ್ಸ್ ಪ್ರಕಾರ ಹೆಣ್ಣುಮಕ್ಕಳು ಕಾಂಪಿಟಿಟಿವ್ ಎಗ್ಸಾಮಿನೇಷನ್ನಿಗೆ ಕುಳಿತು ಜುಡಿಷಿಯರಿಗೆ ಸೇರಲು ಅವಕಾಶವಿದೆ. ಆದುದರಿಂದ ಇದಕ್ಕಾಗಿ ಪ್ರತ್ಯೇಕವಾಗಿ ಅವಕಾಶ ಮಾಡಬೇಕಾಗಿಲ್ಲ. ಇದನ್ನು ಮಾನ್ಯ ಸದಸ್ಯರ ಲಕ್ಷಕ್ಕೆ ತರುತ್ತೇನೆ.

ಇದೇ ರೀತಿಯಲ್ಲಿ ಕಾಗೋಡು ತಿಮ್ಮಪ್ಪನವರು 12 ಜಿಲ್ಲೆಗಳಲ್ಲಿ ಜಡ್ಜಸ್ ನೇಮಕಮಾಡು ವಾಗ ನಿಜಲಿಂಗಪ್ಪನವರು ಬ್ಯಾಕ್‌ವರ್ಡ್‌ಕ್ಲಾಸುಗಳವರಿಗೆ ಅವಕಾಶ ಕೊಟ್ಟಿಲ್ಲ, ಅವರಿಗೆ ಅಗತ್ಯ ವಾಗಿ ಸರಕಾರ ಪ್ರಾಶಸ್ತ್ಯ ಕೊಡಬೇಕು ಎಂದು ತಿಳಿಸಿದ್ದಾರೆ. ಹಾಗೆಯೇ ಕೋಣಂದೂರು ಲಿಂಗಪ್ಪನವರು ಹೈಕೋರ್ಟು ಜಡ್ಜುಗಳನ್ನು ನೇಮಕಮಾಡುವಾಗ ಬ್ಯಾಕ್‌ವರ್ಡ್ ಕ್ಲಾಸುಗಳಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ರಿಕ್ರೂಟ್‌ಮೆಂಟ್ ವಿಷಯದಲ್ಲಿ ಒಂದು ಮಾತು ಹೇಳುವುದಾದರೆ ಸರಕಾರಕ್ಕೆ ನೇಮಕದ ವಿಚಾರದಲ್ಲಿ ಅಧಿಕಾರ ಸ್ವಲ್ಪ ಕಡಮೆ ಇದೆ. ಡಿಸ್ಟ್ರಿಕ್ಟ್ ಜಡ್ಜುಗಳನ್ನು ನೇಮಕಮಾಡುವ ವಿಚಾರದಲ್ಲಿ ರಾಜ್ಯಾಂಗದಲ್ಲಿ ಇನ್ ಕನ್‌ಸಲ್ಟೇಷನ್ ವಿತ್ ದಿ ಹೈಕೋರ್ಟ್ ಎಂದಿದೆ. ಇದನ್ನು ಸುಪ್ರೀಂಕೋರ್ಟ್‌ನಲ್ಲಿ ಇಂಟರ್‌ಪ್ರಿಟೇಷನ್ ಮಾಡುತ್ತಾ ಇದು ಮ್ಯಾನೆನ್‌ಡೇಟರಿಯಾಗಿದೆಯೇ ಹೊರತು ಅಬ್ಲಿಗೇಟರಿಯಾಗಿಲ್ಲ. ಎಂದು ತಿಳಿಸಿದ್ದಾರೆ. ಆದುದರಿಂದ ಡಿಸ್ಟ್ರಿಕ್ಟ್ ಜಡ್ಜುಗಳನ್ನು ನೇಮಕಮಾಡಲು ಹೈಕೋರ್ಟಿಗೆ ಹೆಚ್ಚು ಅವಕಾಶವಿರಬೇಕು. ಅದರಂತೆ ಪೇನಲ್ ಹೈಕೋರ್ಟ ಕಳಿಸುವುದು ಅದರಂತೆ ನೇಮಕಮಾಡುವುದು ರೂಢಿಯಾಗಿದೆ. ಆದುದರಿಂದ ಸರಕಾರ ತನಗಿರುವ ಸ್ವಲ್ಪ ಅಧಿಕಾರದಲ್ಲಿ ಇಂಥವುಗಳ ಬಗ್ಗೆ ರಿಸರ್ವೇಷನ್ ಮಾಡುವಂತಿಲ್ಲ.

ಅಧ್ಯಕ್ಷರು.—ಹೆಣ್ಣುಮಕ್ಕಳು ನಿಮ್ಮ ಅಭಿಪ್ರಾಯದಲ್ಲಿ ಬ್ಯಾಕ್‌ವರ್ಡೋ ಫಾರ್ವರ್ಡೋ ?

ಶ್ರೀ ಡಿ. ಕೆ. ನಾಯ್ಕರ್.—ಎರಡೂ ಹೌದು. ಹೈಕೋರ್ಟಿನ ಜಡ್ಜುಗಳ ನೇಮಕ ಹೈಕೋರ್ಟಿನ ಚೀಫ್ ಜಸ್ಟಿಸ್‌ರವರ ರೆಕಮೆಂಡೇಷನ್ನಿನಮೇಲೆ ಆಗುವ ಕೆಲಸ. ಇದು ಅವರಿಗೆ ಬಿಟ್ಟಿರುವ ವಿಷಯ. ಇದರ ಬಗ್ಗೆ ಸರಕಾರಕ್ಕೆ ಅಧಿಕಾರ ಹೆಚ್ಚಾಗಿಲ್ಲ. ವೆಂಕಟಲಿಂಗಯ್ಯನವರು ಮತ್ತು ಭಂಗಿಯವರು ಜುಡಿಷಿಯಲ್ ಆಫೀಸರುಗಳ ಸಂಬಳವನ್ನು ಈಗಿನ ಪರಿಸ್ಥಿತಿಯಲ್ಲಿ ಹೆಚ್ಚಿಸುವುದು ಅವಶ್ಯಕ ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ನಾನು ಹೇಳುವುದಾದರೆ ನಿಜವಾಗಿಯೂ ಇದು ಬಹಳ ಸಮಂಜಸವಾದ ವಿಷಯ, ಈ ವಿಷಯವನ್ನು ಸರಕಾರದವರು ಪರಿಶೀಲಿಸುವರು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಹೈಕೋರ್ಟಿನ ಜಡ್ಜುಗಳನ್ನು ವರ್ಗಮಾಡಬೇಕೆಂದು ಕೋಣಂದೂರು ಲಿಂಗಪ್ಪನವರು ತಿಳಿಸಿದ್ದಾರೆ. ಇದು ನಮ್ಮ ಕೈಯಲ್ಲಿಲ್ಲ, ಇದಕ್ಕೆ ಕೇಂದ್ರ ಸರಕಾರ ಅವಕಾಶಮಾಡಬೇಕು. ರಾಜ್ಯಾಂಗದ ಪ್ರಕಾರ ಅವರನ್ನು ವರ್ಗಮಾಡುವುದಕ್ಕಾಗಲೀ ಅವರಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗಲಿ ಈ ಸರಕಾರಕ್ಕೆ ಅಧಿಕಾರವಿಲ್ಲ ಎಂದು ಅವರಿಗೆ ತಿಳಿಯಬಯಸುತ್ತೇನೆ.

ಸ್ಪೈನಕ್‌ರವರು ಜಡ್ಜಸ್ ಆರ್ ಅಂಡರ್ ದಿ ಥಂಬ್ ಆಫ್ ಪೋಲೀಸ್ ಎಂದು ಆಪಾದನೆ ಮಾಡಿದ್ದಾರೆ. ಈ ರೀತಿ ಅವರು ಟೀಕೆ ಮಾಡಬಾರದು. ಏಕೆಂದರೆ ಜಡ್ಜುಗಳು ತಮ್ಮ ಕರ್ತವ್ಯ ವನ್ನು ಕಾನೂನಿನ ಪರಿಮಿತಿಯಲ್ಲಿ ನಿರ್ವಹಿಸುತ್ತಿದ್ದಾರೆ. ಒಂದುವೇಳೆ ಕಾನೂನಿಗೆ ಚ್ಯುತಿ ಇರುವಂತೆ ಕಾರ್ಯ ನಿರ್ವಹಿಸಿದ್ದರೆ ಅವರಮೇಲೆ ಯೋಗ್ಯ ಕ್ರಮ ಕೈಗೊಳ್ಳುವುದಕ್ಕೆ ಯಾವ ಅತಂಕವೂ ಇಲ್ಲ. ಇಂಥ ಕಟು ಟೀಕೆಯನ್ನು ಅಲ್ಲಸಲ್ಲದ ಟೀಕೆಯನ್ನು ಮಾನ್ಯಸದಸ್ಯರು ಮಾಡಬಾರದು ಎಂದು ತಿಳಿಸಿ ಅವರ ಟೀಕೆಯ ಬಗ್ಗೆ ನಿಜವಾಗಿಯೂ ವಿಷಾದವನ್ನು ವ್ಯಕ್ತಮಾಡಬೇಕಾಗಿದೆ. ಅದಲ್ಲದೆ ಅವರು ಒಂದು ಘಟನೆಯನ್ನು ಹೇಳುತ್ತಾ ಕೋರ್ಟಿಗೆ ಒಬ್ಬ ವಯಸ್ಸಾದವರು ಬಂದರೆ ಅವರಿಗೆ ಕುರ್ಚಿ ಕೊಡಲಿಲ್ಲ ಎಂದು ಉದಾಹರಣೆ ಹೇಳಿದರು. ಮಾನ್ಯ ಸದಸ್ಯರಿಗೆ ತಿಳಿದಹಾಗೆ ಆಲ್ ಆರ್ ಈಕ್ವಲ್ ಬಿಫೋರ್ ಲಾ. ಛೇರ್ ಕೊಡುವ ವಿಚಾರದಲ್ಲಿ ಆಗಲಿ ಬೇರೆ ವಿಚಾರ ದಲ್ಲಾಗಲಿ ವ್ಯತ್ಯಾಸಮಾಡುವುದಕ್ಕೆ ಅವಕಾಶವಿಲ್ಲ. ಇದನ್ನು ನಿಜವಾಗಿ ಮಾನ್ಯ ಸದಸ್ಯರು ಅರಿತಿದ್ದರೆ ಈ ರೀತಿ ಟೀಕೆ ಮಾಡುತ್ತಿರಲಿಲ್ಲ ಎಂದು ಭಾವಿಸುತ್ತೇನೆ.

ಇನ್ನು ಫ್ರೀ ಲೀಗಲ್ ಏಡ್ ಟು ಪೂರ್ ಕೊಡಬೇಕೆಂದು ಗುರುಸಿದ್ದಪ್ಪನವರು ಹೇಳಿದ್ದಾರೆ ಇದಲ್ಲದೆ ಕಾನೂನು ಮಾಡುವಾಗ ಸರಿಯಾಗಿ ಜಾರಿಗೆ ಬರುವಂತೆ ಮಾಡಬೇಕೆಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಹೇಳುವುದಾದರೆ ಕಾನೂನನ್ನು ಮಾಡುವಾಗ ಸಮಾಜಕ್ಕೆ ಹೊಂದಿಕೊಳ್ಳುವಂತೆ ಮಾಡಲಾಗುವುದು. ಕೇವಲ ಕೋರ್ಟಿನಿಂದ ಕಾನೂನನ್ನು ಇಂಪ್ಲಿಮೆಂಟ್ ಮಾಡುವುದು

(ಶ್ರೀ ಡಿ. ಕೆ. ನಾಯಕರ್)

ಸುಲಭವಲ್ಲ, ಜನರಲ್ಲೂ ಕೂಡ ಮಾರಲ್ ಕಾನ್ಷೆನ್ಸ್ ಇದ್ದರೆ ಸಮರ್ಪಕವಾದ ರೀತಿಯಲ್ಲಿ ಜಾರಿಗೆ ಕೊಡಬಹುದು. ಕೋರ್ಟಿನವರು ಡಾಕ್ಯುಮೆಂಟ್ ಆಧಾರವನ್ನು ತೆಗೆದುಕೊಳ್ಳುವುದಲ್ಲದೆ ಸ್ಪಾಟ್ ಇನ್‌ಸ್ಪೆಕ್ಷನ್ ಸಹ ಮಾಡಬೇಕೆಂದು ಗುರುಸಿದಪ್ಪನವರು ಹೇಳಿದ್ದಾರೆ. ಈಗಲೂ ಕೂಡ ಕಕ್ಷಿಗಾರರು ಅರ್ಜಿ ಕೊಟ್ಟರೆ ಕೇಳಿದರೆ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಲು ಕೋರ್ಟಿಗೆ ಅಧಿಕಾರವಿದೆ. ಹೊಸದಾಗಿ ಈ ಸಂಬಂಧದಲ್ಲಿ ಅವಕಾಶ ಮಾಡಬೇಕಾದ ಅವಶ್ಯಕತೆಯಿಲ್ಲ.

ಪ್ರಾಸಿಕ್ಯೂಟರುಗಳ ನೇಮಕ ಸರಿಯಾಗಿ ಆಗುತ್ತಿಲ್ಲವೆಂದು ಶೀರನಾಳಿ ಚಂದ್ರಶೇಖರ್ ಮತ್ತು ನಾಯ್ಡುರವರು ವಾದಿಸಿದ್ದಾರೆ. ಅವರನ್ನು ನೇಮಕ ಮಾಡಲು ಕೆಲವು ರೂಲ್ಸ್ ಇವೆ. ಅವುಗಳ ಪ್ರಕಾರ ಅಪ್ಲಿಕೇಷನ್ ಕರೆದು ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಜಡ್ಜ್ ಶಿಫಾರಸಿನ ಪ್ರಕಾರ ನೇಮಕ ಮಾಡುವುದರಿಂದ ಸರಕಾರದ ಯಾವುದೇ ಒಂದು ಕೈವಾಡಕ್ಕೆ ಅವಕಾಶವಿಲ್ಲ ಎಂಬುದನ್ನು ಅವರು ಮನವರಿಕೆ ಮಾಡಿಕೊಳ್ಳಬೇಕು. ಒಂದುವೇಳೆ ಯಾವುದೇ ಪ್ರಾಸಿಕ್ಯೂಟರ್ ಬೇಡ, ಸ್ಪೆಷಲ್ ಪ್ರಾಸಿಕ್ಯೂಟರ್ ನೇಮಕ ಮಾಡಬೇಕು ಎಂದು ಸಂಬಂಧಪಟ್ಟವರು ಹೇಳಿದಾಗ ಅರ್ಜಿ ಹಾಕಿದರೆ ಅದಕ್ಕೆ ಅವಕಾಶವಿದೆ ಎಂದು ಒಂದು ಸಂದರ್ಭದಲ್ಲಿ ಸರಕಾರ ಹೇಳಿದೆ.

ಶ್ರೀಮಾನ್ ಶೀರನಾಳಿ ಚಂದ್ರಶೇಖರ್ ಅವರು ಶಿವಮೊಗ್ಗದಲ್ಲಿ ದೊಡ್ಡ ಕಟ್ಟಡವಿದೆ, ಅಲ್ಲಿ ಒಂದು ಹೈಕೋರ್ಟ್ ಬೆಂಚ್ ಕೊಡಬೇಕೆಂದು ಕೇಳಿದ್ದಾರೆ ಮತ್ತು ಶ್ರೀಮಾನ್ ಬಾಂಗಿ ಅವರು ಉತ್ತರ ಕರ್ನಾಟಕದಲ್ಲಿ ಒಂದು ಬೆಂಚ್ ತೆಗೆಯಬೇಕೆಂದು ಕೇಳಿದ್ದಾರೆ. ಈಗ ಒಂದು ಹೈಕೋರ್ಟ್ ಬೆಂಚ್ ಉತ್ತರ ಕರ್ನಾಟಕಕ್ಕೆ ಕೊಡಬೇಕೋ ಕೊಡಬಾರದೋ ಎನ್ನುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ.

ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಶ್ರೀಯುತರಾದ ನಾಗಣ್ಣನವರು, ಕಾಗೋಡು ತಿಮ್ಮಪ್ಪನವರು ಇವರೆಲ್ಲ ಸರ್ಕಾರದವರು ಮುನಿಸಿಪಾಲಿಟಿಗಳಿಗೆ ಚುನಾವಣೆಗಳನ್ನು ಮಾಡುತ್ತಿಲ್ಲ, ಅಡ್ಮಿನಿಸ್ಟ್ರೇಟರನ್ನು ನೇಮಿಸುವ ರೂಢಿಯನ್ನು ಇಟ್ಟುಕೊಂಡಿದ್ದಾರೆ ಎನ್ನುವ ಟೀಕೆಯನ್ನು ಮಾಡಿದ್ದಾರೆ. ಅದೇ ರೀತಿ ಈ ಹೊತ್ತಿನ ಸಂದರ್ಭದಲ್ಲಿ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಮುನಿಸಿಪಾಲಿಟಿಗಳಿಗೆ ಬುದ್ಧಿಪೂರ್ವಕವಾಗಿ ಚುನಾವಣೆಗಳನ್ನು ಮಾಡುತ್ತಿಲ್ಲ ಎಂದು ಟೀಕೆ ಮಾಡಿದ್ದಾರೆ. ಈ ಟೀಕೆಗಳು ನಿಜವಾಗಿಯೂ ಸಲ್ಲತಕ್ಕ ಟೀಕೆಗಳಲ್ಲ. ಏಕೆಂದರೆ ನಾವು ಈಗಾಗಲೇ ಡಿವಿಜನಲ್ ಕಮಿಷನರುಗಳಿಗೆ ಯಾವತ್ತೂ ಮುನಿಸಿಪಾಲಟಿಗಳಲ್ಲಿ ಚುನಾವಣೆಗಳನ್ನು ಕಾನೂನುಬದ್ಧವಾಗಿ ಮಾಡಬೇಕೆಂದು ಸೂಚನೆಗಳನ್ನು ಕೊಟ್ಟಿದ್ದೇವೆ. ಈಗಾಗಲೇ ಕೆಲವು ಕಡೆ ಚುನಾವಣೆಗಳು ನಡೆಯುತ್ತಿವೆ, ಕೆಲವು ಕಡೆ ಚುನಾವಣೆಗಳು ಮುಗಿದಿವೆ. ಶ್ರೀ ನಾಗಣ್ಣನವರು ಬೆಂಗಳೂರು ನಗರ ಕಾರ್ಪೊರೇಷನ್ ಆಡಳಿತವನ್ನು ಯಾವ ರೀತಿ ನಡೆಸುತ್ತಿದೆ ಎಂಬುದನ್ನು ಹೇಳಿ ಕಾರ್ಪೊರೇಷನ್ ಚುನಾವಣೆಗಳನ್ನು ಮುಂದೂಡುವ ಲಕ್ಷಣಗಳಿವೆ ಎಂದು ಸಂಶಯಪಟ್ಟಿದ್ದಾರೆ. ಹಾಗೇನೂ ಇಲ್ಲ. ಯಾವ ಲಕ್ಷಣಗಳನ್ನು ಕಂಡು ಈ ಹಂತದಲ್ಲಿ ಅವರು ಸಂಶಯಪಟ್ಟಿದ್ದಾರೆ ಎನುವುದು ಮಾತ್ರ ನನಗೆ ಅರ್ಥವಾಗುತ್ತಿಲ್ಲ. ಈ ಹಂತದಲ್ಲಿ ಆ ತರಹ ಅನುಮಾನ ಪಡುವ ಕಾರಣವಿಲ್ಲ ಎಂದು ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಶ್ರೀ ತಿಮ್ಮಪ್ಪನವರು ಮುನಿಸಿಪಾಲಿಟಿಗಳಿಗೆ ಚುನಾವಣೆಗಳನ್ನು ನಡೆಸದೆ ಸಲಹಾ ಸಮಿತಿಗಳನ್ನು ನೇಮಕ ಮಾಡುತ್ತಾ ಬಂದಿದ್ದಾರೆ, ಮತ್ತು ಅದರಲ್ಲಿ ಇತರ ಪಕ್ಷಗಳವರಿಗೆ ಅವಕಾಶವನ್ನು ಕೊಟ್ಟಿಲ್ಲ ಎನ್ನುವ ಅಪವಾದವನ್ನು ಹೊರಿಸಿದ್ದಾರೆ. ಶ್ರೀ ತಿಮ್ಮಪ್ಪನವರು ಶಿವಮೊಗ್ಗ ಜಿಲ್ಲೆಯಿಂದ ಬಂದಿದ್ದಾರೆ. ಶಿವಮೊಗ್ಗ ಮುನಿಸಿಪಾಲಿಟಿಯಲ್ಲಿ ನೇಮಕ ಮಾಡಿರುವಂಥ ಸಲಹಾ ಸಮಿತಿಯ ರಚನೆಯನ್ನು ಅವರೇ ಪರಿಶೀಲನೆ ಮಾಡಿ ನೋಡಿದಾಗ ಎಲ್ಲ ಪಕ್ಷದ ಜನರೂ ಅದರಲ್ಲಿದ್ದಾರೆಂದು ನಂಬುತ್ತಾರೆಂದು ಮಾತ್ರ ಹೇಳುತ್ತೇನೆ. ಅದರಲ್ಲಿ ಯಾವುದೇ ವ್ಯತ್ಯಾಸವನ್ನು ಅಥವಾ ಪಕ್ಷಪಾತವನ್ನು ಸರ್ಕಾರ ಮಾಡಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ನಯನಕ್ ಅವರು ಬೆಳಗಾಂ ಮತ್ತು ನಿಪ್ಪಾಣಿ ಮುನಿಸಿಪಾಲಿಟಿಗಳ ಚುನಾವಣೆಗಳನ್ನು ಮಾಡಲಿಲ್ಲ, ಮಂತ್ರಿಗಳು ಪ್ರಾಂಪ್ಟ್ ಮಾಡುತ್ತಿದ್ದಾರೆ ಎನ್ನುವ ಮಟ್ಟದ ಟೀಕೆಯನ್ನು ಮಾಡಿದ್ದಾರೆ. ಬೆಳಗಾಂನಲ್ಲಿ ಜೂನ್ ನಾಲ್ಕನೇ ತಾರೀಖಿನ ಒಳಗಾಗಿ ಚುನಾವಣೆಗಳನ್ನು ಮಾಡಬೇಕೆಂದು ಹೈಕೋರ್ಟಿನಿಂದ ಬಂದ ಆದೇಶದ ಪ್ರಕಾರ ತ್ವರಿತ ಗತಿಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡು ಜೂನ್ ನಾಲ್ಕನೇ ತಾರೀಖಿನ ಒಳಗಾಗಿ ಚುನಾವಣೆ ಮಾಡುವುದಕ್ಕೆ ಡೈರೆಕ್ಷನ್

ಕೊಟ್ಟಿದ್ದೆವು ಕ್ಯಾಲೆಂಡರ್ ಆಫ್ ಈವೆಂಟ್ಸ್ ಪಬ್ಲಿಷ್ ಆದ ನಂತರ ಅಲ್ಲಿಯ ಒಬ್ಬ ಮತದಾರರು ಅದನ್ನು ಹೈ ಕೋರ್ಟಿನಲ್ಲಿ ಛಾಲೆಂಜ್ ಮಾಡಿ ಸ್ಟೇ ತಂದಿದ್ದಾರೆ. ನಿಪ್ಪಾಣಿಯಲ್ಲಿ ಕೂಡ ಚುನಾವಣೆಗಳನ್ನು ಮಾಡುವ ಬಗ್ಗೆ ಸರ್ಕಾರ ಕಾರ್ಯಕ್ರಮ ತೆಗೆದುಕೊಂಡು ಈವಾಗ ಫೈನಲ್ ನೋಟಿಫಿಕೇಷನ್ ಸಹಿತ ಇಷ್ಯೂ ಮಾಡಿದೆ ಮತ್ತು ಕ್ಯಾಲೆಂಡರ್ ಆಫ್ ಈವೆಂಟ್ಸ್ ಹಾಕುವಂಥ ಕೆಲಸವನ್ನು ಕೆಳಗಿನ ಅಧಿಕಾರಿಗಳು ಮಾಡುತ್ತಿದ್ದಾರೆ. ಅದರಲ್ಲಿ ಯಾವ ರೀತಿಯೂ ಸರ್ಕಾರದ ರಾಜಕೀಯವಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರಿಗೆ ವ್ಯಕ್ತಪಡಿಸುತ್ತೇನೆ.

ಶ್ರೀ ಕೆ. ಮಾದೇಗೌಡರು ಮಾತನಾಡುವಾಗ 30—1-1974ಕ್ಕೆ ಬನ್ನೂರು ಯಜಮಾನರು ಒಂದು ಅರ್ಜಿಯನ್ನು ಕೊಟ್ಟರು. ಆ ಅರ್ಜಿಯ ಮೇಲೆ ಬನ್ನೂರು ಮುನಿಸಿಪಾಲಿಟಿಯ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್ ಚುನಾವಣೆಗಳನ್ನು ಸರ್ಕಾರ ಬುದ್ಧಿಪೂರ್ವಕವಾಗಿ ಮುಂದೂಡಿದೆ ಎನ್ನುವ ಟೀಕೆಯನ್ನು ಮಾಡಿದ್ದಾರೆ. ಆ ಟೀಕೆ ಸರಿಯಾದ ಟೀಕೆಯಲ್ಲ. ಆ ಊರಿನ ಕೆಲವು ಯಜಮಾನರು ಒಂದು ಅರ್ಜಿಯನ್ನು 30—1—1974ಕ್ಕೆ ಕೊಟ್ಟಿದ್ದಾರೆ. 3—2—1974ಕ್ಕೆ ಚುನಾವಣೆಯನ್ನು ಇಟ್ಟುಕೊಳ್ಳಲಾಗಿತ್ತು. ಆದರೆ ಆ ಊರಿನ ಯಜಮಾನರು ಕೊಟ್ಟ ಅರ್ಜಿಯಲ್ಲಿ ಒಬ್ಬ ಸದಸ್ಯರನ್ನು ಕಿಡ್‌ನ್ಯಾಪ್ ಮಾಡಿಕೊಂಡು ಹೋಗಿದ್ದಾರೆ, ಚುನಾವಣೆಗಳು ಫೆಬ್ರವರಿ ಮೂರನೇ ತಾರೀಖು ನಡೆಯಬೇಕಾಗಿದೆ, ಅದೇ ದಿವಸ ಅಲ್ಲಿ ಒಂದು ಜಾತ್ರೆಯಾಗುತ್ತದೆ. ಹಿಂದಿನ ಜಾತ್ರೆ ದಿವಸ ಬ್ರೀಚ್ ಆಫ್ ಪೀಸ್ ಆಗಿ ಕ್ರಿಮಿನಲ್ ಕೇಸುಗಳಾಗಿವೆ ಎನ್ನುವುದನ್ನು ತಿಳಿಸಿದ್ದರು. ಹಿಂದಿನ ಜಾತ್ರೆಯಲ್ಲಿ ಆದ ಕೇಸುಗಳು ಮುಸಲ್ಮಾನ್ ಮತ್ತು ಹರಿಜನರಿಗೆ ಬಡಿದಾಟವಾದವುಗಳಾಗಿದ್ದು ಅವು ಇನ್ನೂ ತೀರ್ಮಾನವಾಗದೆ ಇವೆ ಎಂದು ತಿಳಿಸಿದ್ದರು. ಈ ತರಹ ಪರಿಸ್ಥಿತಿ ಇದೆ ಎಂದು ಅವರು ಅರ್ಜಿಯನ್ನು ಕೊಟ್ಟಾಗ ಕಾನೂನುಬದ್ಧವಾಗಿ ಅಂಥ ಸಂದರ್ಭದಲ್ಲಿ ಯಾವುದೇ ಡೆಪ್ಯುಟಿ ಕಮಿಷನರ ಒಪಿನಿಯನ್ ಕೇಳದೆ ಸ್ವಂತ ಸರ್ಕಾರವೇ ಕೈ ಹಾಕಿ ಚುನಾವಣೆಗಳನ್ನು ಪೋಸ್ಟ್‌ಪೋನ್ ಮಾಡುವಂಥ ಅಧಿಕಾರವಿದೆ. ಅಂಥ ಪೋಸ್ಟ್‌ಪೋನ್ ಮಾಡುವಂಥ ಆರ್ಡರ್ ಮಾಡುವಾಗ ಸರ್ಕಾರದ ಕ್ರಮ ಜಸ್ಟಿಫೈಯಬಲ್ ಇದೆ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ಈಗ ಅರ್ಜಿ ಬಂದ ನಂತರ ಬನ್ನೂರು ಮುನಿಸಿಪಾಲಿಟಿಯ ಪ್ರೆಸಿಡೆಂಟ್ ಹಾಗೂ ವೈಸ್ ಪ್ರೆಸಿಡೆಂಟ್ ಚುನಾವಣೆ ಮಾಡಲಿಕ್ಕೆ ಯಾವುದೇ ತರಹ ಅಭ್ಯಂತರವಿಲ್ಲ ಎನ್ನುವುದನ್ನು ಹೇಳಿದ್ದೇನೆ.

ಶ್ರೀ ಎಂ. ವೆಂಕಟಲಿಂಗಯ್ಯನವರು ಮೈಸೂರು ಮುನಿಸಿಪಾಲಿಟಿ ಬಗ್ಗೆ ಕೇಳಿದ್ದಕ್ಕೆ ಈಗಾಗಲೇ ಹೇಳಿದ್ದೇನೆ. ಮೈಸೂರಿನಲ್ಲಿರುವ ನೀರಿನ ತೊಂದರೆ ಬಗ್ಗೆ ನಾನು ಈಗಾಗಲೇ ಒಂದು ಹೇಳಿಕೆಯನ್ನು ಸಹಿತ ಮಾಡಿದ್ದೇನೆ.

ಶ್ರೀ ನಾಗಣ್ಣನವರು ಟ್ರಸ್ಟ್‌ಬೋರ್ಡ್ ಆಡಳಿತದ ಬಗ್ಗೆ ಕೆಲವೊಂದು ಟೀಕೆ ಮಾಡಿದ್ದಾರೆ. ನ್ಯಾಯವಂತ ಜನರನ್ನು ಟ್ರಸ್ಟ್‌ಬೋರ್ಡಿಗೆ ಹಾಕುತ್ತಿಲ್ಲ, ಸೈಟುಗಳು ಸರಿಯಾಗಿ ಹಂಚಿಕೆಯಾಗುತ್ತಿಲ್ಲ ಎಂದು ಹೇಳಿದ್ದಾರೆ ಮತ್ತು ಮಾನ್ಯ ಕೃಷ್ಣನ್ ಅವರು ಟ್ರಸ್ಟ್‌ಬೋರ್ಡಿನಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹೇಳಿದ್ದಾರೆ. ಈ ಟೀಕೆಗಳು ನಿಜವಾಗಿ ಸರಿಯಲ್ಲ. ನಾನು ಇದರ ಆಡಳಿತವನ್ನು ತೆಗೆದುಕೊಂಡ ನಂತರ ಯಾವುದೇ ಸೈಟುಗಳ ಹಂಚಿಕೆಯಾಗಿಲ್ಲ. ಈಗ ಅಲ್ಲಿಗೆ ನೇಮಕವಾಗಿರುವಂಥ ಚೇರ್‌ಮನ್ ಅವರು ಉತ್ತಮ ಮನುಷ್ಯರು ಎನ್ನುವುದನ್ನು ಸಾರ್ವಜನಿಕರೇ ಹೇಳುತ್ತಿದ್ದಾರೆ. ಸೈಟುಗಳನ್ನು ಹಂಚುವಾಗ ಯಾವುದೇ ಪಕ್ಷಪಾತ ಮಾಡದೆ ಬಡಜನರಿಗೆ ಹೆಚ್ಚು ಹೋಗಬೇಕೆಂಬ ನೀತಿಯನ್ನು ಸರ್ಕಾರ ಹಾಕಿಕೊಂಡಿದ್ದು ಅದರಲ್ಲಿ ಯಾವ ರೀತಿಯ ಹೆಚ್ಚುಕಡಮೆಯಾಗುವುದಕ್ಕೆ, ಭ್ರಷ್ಟಾಚಾರಕ್ಕೆ ಆಸ್ಪದ ಕೊಡುತ್ತ ಇಲ್ಲ. ಆದುದರಿಂದ ಭ್ರಷ್ಟಾಚಾರದ ಬಗ್ಗೆ ಕೇವಲ ಹೀಗೆ ಟೀಕೆಗಳನ್ನು ಮಾಡದೆ ಒಂದು ವೇಳೆ ಅಂಥ ಉದಾಹರಣೆಗಳು ಮಾನ್ಯ ಸದಸ್ಯರ ನಜರಿಗೆ ಬಂದಿದ್ದರೆ ಅವುಗಳನ್ನು ಸರ್ಕಾರದ ಗಮನಕ್ಕೆ ತಂದುಕೊಟ್ಟರೆ ಸರ್ಕಾರ ಯೋಗ್ಯ ಕ್ರಮ ಕೈಗೊಳ್ಳುವುದಕ್ಕೆ ಸಿದ್ಧವಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಯಪಡಿಸುತ್ತೇನೆ.

ಕೆಲವು ಸದಸ್ಯರು ಕುಡಿಯುವ ನೀರಿನ ಬಗ್ಗೆ ಸರಿಯಾದ ವ್ಯವಸ್ಥೆ ಮುನಿಸಿಪಾಲಿಟಿಗಳಲ್ಲಿ ಆಗಿಲ್ಲ ಎಂದು ಹೇಳಿದ್ದಾರೆ. ಕರ್ನಾಟಕ ಸ್ಟೇಟ್ ವಾಟರ್ ಸಪ್ಲೈ ಅಂಡ್ ಡ್ರೇನೇಜ್ ಬೋರ್ಡ್ ಬಿಲ್ ಪಾಸಾಗಿದ್ದು ಅದು ಇಂದು ನಾಳೆ ಕಾನೂನಾಗುತ್ತವೆ. ಅದರ ಪ್ರಕಾರ ಬೋರ್ಡಿನವರು ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಯನ್ನು ಕೈಕೊಳ್ಳುತ್ತಾರೆ. ಅದಕ್ಕೆ ಸರ್ಕಾರ ಸಾಲದ ರೂಪದಲ್ಲಿ ಹಣ ಕೊಟ್ಟು ಮತ್ತು ಎಲ್. ಐ. ಸಿ. ಅಥವಾ ಯಾವುವೇ ಫೈನಾನ್ಸಿಂಗ್ ಕಾರ್ಪೊರೇಷನ್‌ನಿಂದ ಹಣವನ್ನು ಪಡೆದು ಜನತೆಗೆ ನೀರಿನ ಪೂರೈಕೆಯಾಗುವಂತೆ ಮಾಡುತ್ತದೆ. ಅದರಲ್ಲಿ ಯಾವುದೇ ಸಂದೇಹವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

(ಶ್ರೀ ಡಿ. ಕೆ. ನಾಯ್ಕರ್)

ಭಂಗಿ ಜನರು ಇರುವ ಕಡೆ ಹಾಗೂ ಕೊಳಚೆ ಪ್ರದೇಶದಲ್ಲಿ ಯಾವ ರೀತಿಯ ಕ್ರಮವನ್ನೂ ಕೈಕೊಂಡಿಲ್ಲ ಎಂದು ಶ್ರೀಮಾನ್ ನಾಯುಡು ಅವರು ಮತ್ತು ಕೃಷ್ಣನ್ ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಕೂಡ ಸ್ಟೇಟ್ ಕ್ಲಿಯರೆನ್ಸ್ ಬೋರ್ಡ್ ಮಾಡಿದ್ದೇವೆ. ಆ ಬೋರ್ಡುಗಳ ಮೂಲಕ ಉತ್ತಮ ತರಗತಿಯಲ್ಲಿ ಕೆಲಸ ನಡೆಯಲಿಕ್ಕೆ ಸಾಧ್ಯವಾಗುತ್ತದೆ. ಈ ಒಳಗಾಗಿ ಬೆಂಗಳೂರು ನಗರದಲ್ಲಿ ಎಷ್ಟು ಕೊಳಚೆ ಪ್ರದೇಶಗಳಿವೆಯೋ ಅವುಗಳಲ್ಲಿ 73 ಕೊಳಚೆ ಪ್ರದೇಶಗಳ ನಿರ್ಮೂಲನಕ್ಕೆ ಮಾತ್ರ ಹೆಚ್ಚಾಗಿ ಸರ್ಕಾರದ ನೆರವಿನಿಂದ ಕಾರ್ಯಕ್ರಮವನ್ನು ತೆಗೆದುಕೊಂಡು ಅದರೊಳಗೆ ಸಿವಿಕ್ ಅಮೆನಿಟೀಸ್ ಅವರಿಗೂ ಕೊಡುವುದಕ್ಕೆ ಅದಂಥ ಪ್ರಯತ್ನಗಳನ್ನು ನೋಡಿದಾಗ ಮಾನ್ಯ ಸದಸ್ಯರಿಗೂ ವ್ಯಕ್ತವಾಗುತ್ತದೆ.

ಇನ್ನು ಕಾರ್ಪೊರೇಷನ್‌ನಲ್ಲಿ ಲಂಚಗುಳಿತನ ನಡೆಯುತ್ತಿವೆ ಇಲ್ಲಿ ಕೋಟಿಗಟ್ಟಲೆ ಹಣ ದುರುಪಯೋಗವಾಗುತ್ತಿದೆ ಇದರ ಆಡಳಿತದ ಮೇಲೆ ಸರಕಾರಕ್ಕೆ ಸರಿಯಾದ ಹತೋಟಿ ಇಲ್ಲ ಎಂದು ಮಾನ್ಯ ಸದಸ್ಯರಾದ ಶ್ರೀ ನಾಗಣ್ಣನವರು ಟೀಕೆ ಮಾಡಿದರು. ಮಾನ್ಯ ಸದಸ್ಯರಿಗೆ ನಾನು ಹೇಳುವುದು ಸರಕಾರದ ಹತೋಟಿ ಸರಿಯಾಗಿಯೇ ಇದೆ. ಇದರಲ್ಲಿ ಯಾವ ಸಂಶಯವನ್ನೂ ಇಟ್ಟುಕೊಳ್ಳಕೂಡದ ಎಂದು ಹೇಳುತ್ತೇನೆ. ಆದರೆ ನಿರ್ದಿಷ್ಟವಾಗಿ ಯಾವುದಾದರೂ ಲಂಚಗುಳಿತನದ ಬಗ್ಗೆ ದೂರುಗಳಿವೆ ಎಂದು ಸರಕಾರದ ನಜರಿಗೆ ತಂದುಕೊಟ್ಟರೆ ಅಂತಹ ದೂರುಗಳ ಬಗ್ಗೆ ಖಂಡಿತ ತಕ್ಕ ಕ್ರಮ ಸರಕಾರ ತೆಗೆದುಕೊಳ್ಳಲು ಸಿದ್ಧವಾಗಿದೆ ಎಂದು ಇಲ್ಲಿ ಹೇಳಬಯಸುತ್ತೇನೆ.

2-00 P. M.

ಶ್ರೀ ಹೆಚ್. ಡಿ. ದೇವೇಗೌಡ.—ಲಂಚವನ್ನು ಶೇಖರಣೆ ಮಾಡಿಕೊಂಡು ಅದನ್ನು ಹಂಚುವುದರಲ್ಲಿ ಒಂದು ಕಂಪನಿಗಳಂತೆ ಮಾಡಿಕೊಂಡಿದ್ದಾರೆ. ಇದನ್ನು ನೀವು ಸರಿಯಾಗಿ ತಿಳಿಯದೆ ಇಲ್ಲಿ ಹೇಳುತ್ತಿದ್ದೀರಿ.

ಶ್ರೀ ಡಿ. ಕೆ. ನಾಯಕರ್.—ನಾನು ಮಾನ್ಯ ದೇವೇಗೌಡರಿಗೆ ಹೇಳುವುದು ನಮಗೆ ಸರಕಾರದ ಹೊಣೆ ಎಷ್ಟು ಇದೆಯೋ ಅಷ್ಟೇ ಹೊಣೆ ತಮಗೂ ಇದೆ ಎನ್ನುವುದನ್ನು ಮರೆಯಬಾರದು. ಇದರಲ್ಲಿ ನಾವು ಹಾಗೂ ನೀವು ಎಲ್ಲರೂ ಸೇರಿ ಕೆಲಸ ಮಾಡಬೇಕಾಗುತ್ತದೆ ಎಂದು ಇಲ್ಲಿ ಕಳಕಳಿಯಿಂದ ಇಷ್ಟು ಮಾತ್ರ ಹೇಳುತ್ತೇನೆ.

ಕೊನೆಯದಾಗಿ ಶ್ರೀಮಾನ್ ಕೃಷ್ಣನ್‌ರವರು ಮೇಯರಾಗಿ ಎಲೆಕ್ಷನ್ ಮಾಡುವಾಗ ಇದರಲ್ಲಿ ನಾಲ್ಕು ಸಾವಿರದಷ್ಟು ಲಂಚ ಕೊಟ್ಟು ಆರಿಸಿ ಬರುತ್ತಾರೆಂದು ಟೀಕೆ ಮಾಡಿದರು. ಇದೇ ರೀತಿ ಇಲ್ಲಿ ಮೇಯರು ಹಾಗೂ ಡೆಪ್ಯೂಟಿ ಮೇಯರುಗಳೂ ಆರಿಸಿಬರುತ್ತಾರೆ ಎಂದು ಹೇಳಿದರು. ಸಾಮಾನ್ಯವಾಗಿ ಎಲೆಕ್ಷನ್ ಮಾಡುವುದು ಪಾರ್ಟಿ ಬೇಸಿಸ್ ಮೇಲೆ ಮಾಡುತ್ತಿರುವುದರಿಂದ ಇದರಲ್ಲಿ ಮೆಜಾರಿಟಿ ವೋಟು ಯಾರಿಗೆ ಬರುತ್ತದೋ ಅಂತಹವರು ಮೇಯರು ಹಾಗೂ ಡೆಪ್ಯೂಟಿ ಮೇಯರುಗಳಾಗಿ ಆರಿಸಿ ಬರುತ್ತಾರೆ. ಇದರಲ್ಲಿ ಯಾವ ರೀತಿಯಾದ ಲಂಚಗುಳಿತನವಿದೆ ಎಂದು ಹೇಳಿದರೂ ಅದು ನನಗಂತೂ ಅರ್ಥವಾಗುತ್ತಿಲ್ಲ.

ಇನ್ನು ಆಕ್ಟ್ರಾಯ್ ಲೆವಿ ಹಾಕುವುದು ಇಲ್ಲವೇ ಬಿಡುವುದು ಎನ್ನುವುದರ ಬಗ್ಗೆ ಅನೇಕ ಸದಸ್ಯರು ಇಲ್ಲಿ ಟೀಕೆಗಳನ್ನು ಮಾಡಿದ್ದಾರೆ. ಇದಲ್ಲದೆ ಮೋಟಾರು ವೆಹಿಕಲ್ಸ್ ಟ್ಯಾಕ್ಸು ಹೆಚ್ಚು ಮಾಡಿದ್ದರೂ ಇದರಿಂದ ಕಾರ್ಪೊರೇಷನ್ ಹಾಗೂ ಮುನಿಸಿಪಾಲಿಟಿಗಳಿಗೆ ಎಷ್ಟು ಪಾಲು ಬರಬೇಕೋ ಅದು ಬರುತ್ತಿಲ್ಲ ಎಂದೂ ಹೇಳಿದ್ದಾರೆ. ಇವನ್ನೆಲ್ಲಾ ಪರಿಶೀಲನೆ ಮಾಡಲು ಸರಕಾರ ಒಂದು ಕಮಿಟಿ ನೇಮಕ ಮಾಡಿದೆ. ಈ ಕಮಿಟಿಯವರ ರಿಪೋರ್ಟು ಬಂದ ನಂತರ ಸರಕಾರ ಪರಿಶೀಲನೆ ಮಾಡಿ ಇದರ ಬಗ್ಗೆ ಯೋಗ್ಯವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಮತ್ತು ಮಾನ್ಯ ಸದಸ್ಯರು ಕೆಲವು ಉತ್ತಮವಾದ ಸಲಹೆಗಳನ್ನು ಕೊಟ್ಟಿರುತ್ತಾರೆ. ಅವುಗಳನ್ನೆಲ್ಲಾ ಸರಕಾರ ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡಿ ಯೋಗ್ಯ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಎಂದು ಇಲ್ಲಿ ಹೇಳುತ್ತೇನೆ ಮತ್ತು ನಾನು ಇಲ್ಲಿ ಮಂಡಿಸಿರುವ ಎರಡು ಡಿಮ್ಯಾಂಡುಗಳಿಗೆ ಸಭೆ ಮನ್ನಣೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪನವರು ಸೆಕ್ಷನ್ 14 ಮತ್ತು 72ರ ಬಗ್ಗೆ ಅಮೆಂಡುಮೆಂಟು ತರಬೇಕೆಂದು ಸಲಹೆ ಮಾಡಿದರು. ನನ್ನ ಮಟ್ಟಿಗೆ ಹೇಳುವದಾದರೆ ಈಗಿರುವ 64ರ ಮುನಿಸಿಪಾಲಿಟಿ

ಆಕ್ಟ್ ಎಂದಿರುವುದರಲ್ಲಿ ಅನೇಕ ಅನಾನುಕೂಲಗಳಿವೆ ಎಂದು ನಾವು ಕಂಡುಕೊಂಡಿದ್ದೇವೆ. ಇದಕ್ಕಾಗಿ ಇವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಲು ಒಂದು ಕಮಿಟಿಯನ್ನು ನೇಮಕ ಮಾಡಲಾಗಿದೆ. ಆ ಕಮಿಟಿ ಪರಿಶೀಲನೆ ಮಾಡಿ ಸರಕಾರಕ್ಕೆ ಕಳುಹಿಸಿದ ಮೇಲೆ ಇದನ್ನು ಸರಿಯಾದ ರೀತಿಯಲ್ಲಿ ಇರುವ ಒಂದು ತಿದ್ದುಪಡಿ ಮಾಡಿದ ಬಿಲ್ಲನ್ನೇ ತರುವುದರಲ್ಲಿದ್ದೇವೆ ಎನ್ನುವ ಆಶ್ವಾಸನೆಯನ್ನು ಇಲ್ಲಿ ಕೊಡಬಯಸುತ್ತೇನೆ.

ಶ್ರೀ ದೇವೇಗೌಡರು ಕಳೆದ ಅಸೆಂಬ್ಲಿ ಅಧಿವೇಶನದಲ್ಲಿ ನನ್ನ ಪ್ರಿಡಿಸೆಸರ್ ಆದ ಶ್ರೀಮಾನ್ ಬಸವಲಿಂಗಪ್ಪನವರು ಒಂದು ಹೇಳಿಕೆ ಕೊಟ್ಟು ಅದರಲ್ಲಿ ಅಡ್ಮಿನಿಸ್ಟ್ರೇಟರುಗಳನ್ನು ಎಲ್ಲೆಲ್ಲಿ ನೇಮಿಸಲಾಗಿದೆಯೋ ಅಲ್ಲೆಲ್ಲಾ ಅರಿಯರ್ಸ್ ಟ್ಯಾಕ್ಸ್‌ಗಳ ವಸೂಲಿ ಹೆಚ್ಚಾಗಿದೆ ಎಂದು ಸಮರ್ಥನೆ ಮಾಡಿಕೊಂಡಿದ್ದರು ಮತ್ತು ಇದು ಯಾವ ಯಾವ ರೀತಿಯಲ್ಲಿ ಹೆಚ್ಚು ಆಗಿದೆ ಇದರ ವಿವರಗಳನ್ನು ಕೊಡಬೇಕೆಂದು ಅವರು ಕೇಳಿದರು. ಅಡ್ಮಿನಿಸ್ಟ್ರೇಟರನ್ನು ನೇಮಿಸಿದ ನಂತರ ಆಕ್ಟ್ರಾಯಿ ತೆರಿಗೆ ಹೆಚ್ಚಿಗೆಯಾಗಿದೆ ಎಂದು ನನ್ನ ಪ್ರಿಡಿಸೆಸರ್ ಹೇಳಿದಂತೆ ಕೆಲವಾರು ಅಂಕೆ ಅಂಶಗಳನ್ನು ಇಲ್ಲಿ ಹೇಳಿದರೆ ಅವರಿಂದಲೇ ಗೊತ್ತಾಗುತ್ತದೆ ವಸೂಲಿ ಹೆಚ್ಚಾಗಿದೆ ಎನ್ನುವುದು. ಮಾನ್ಯ ಸದಸ್ಯರಿಗೆ ಹೇಳುವುದು ಹೆಚ್ಚು ಆಕ್ಟ್ರಾಯಿ ವಸೂಲಿ ಎಲ್ಲ ಕಡೆಗಳಲ್ಲೂ ಆಗಿವೆ. ಬೆಂಗಳೂರು ಕಾರ್ಪೊರೇಷನಲ್ಲಿ ಅಡ್ಮಿನಿಸ್ಟ್ರೇಟರು ಇದ್ದಾಗ ಎಂದರೆ 1970—1971 ರಲ್ಲಿ 13,000 ಚಿಲ್ಲರೆ ರೂಪಾಯಿ ವಸೂಲಾಯಿತು, ಇದೇ ರೀತಿ 1971—1972ರಲ್ಲಿ 13 ಸಾವಿರ ಚಿಲ್ಲರೆ ರೂಪಾಯಿ ವಸೂಲಾಗಿದೆ, 1972—1973 ರಲ್ಲೂ 13,000 ಚಿಲ್ಲರೆ ರೂಪಾಯಿ ವಸೂಲಾಗಿದೆ 1973—1974ರಲ್ಲಿ 14,022 ರೂಪಾಯಿ ವಸೂಲಾಗಿದೆ. ಇದೇ ರೀತಿ ಬಾಗಲಕೋಟೆ ಮುನಿಸಿಪಾಲಿಟಿಯಲ್ಲಿ ಕೂಡ ಹೆಚ್ಚಾಗಿ ಬಂದಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಗುಲ್ಬರ್ಗಾದಲ್ಲಿರುವ ಮುನಿಸಿಪಾಲಿಟಿಯಲ್ಲಿ ಸುಮಾರು ಆರು ಲಕ್ಷ ರೂಪಾಯಿಗಳಷ್ಟು ಲೂಟಿ ಮಾಡಿದ್ದಾರೆ ನಿಮ್ಮ ಅಡ್ಮಿನಿಸ್ಟ್ರೇಟರುಗಳು ಬಂದ ಮೇಲೆ ಎಂದು ದೂರಿದೆ. ಇದನ್ನು ತನಿಖೆ ಮಾಡಬೇಕೆಂದು ಸರಕಾರಕ್ಕೆ ವರದಿ ಕೂಡ ಬಂದಿದೆ. ಇದು ಇನ್ನೂ ಸರಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಡಿ. ಕೆ. ನಾಯಕರ್.—ಈ ವಿಷಯ ಬೇರೆ ಆಯಿತು. ಆದರೆ ನಮ್ಮ ಅಡ್ಮಿನಿಸ್ಟ್ರೇಟರುಗಳು ಎಲ್ಲೆಲ್ಲಿದ್ದಾರೆ ಅಲ್ಲೆಲ್ಲಾ ವಸೂಲಿ ಹೆಚ್ಚಾಗಿಯೇ ಆಗಿರುವುದು ಕಂಡುಬರುತ್ತದೆ. ಇದರ ವಿವರಗಳನ್ನು ತಮಗೆ ಇಲ್ಲಿ ಹೇಳಿದರೆ ಗೊತ್ತಾಗುತ್ತದೆ, ಬಾಗಲಕೋಟೆಯಲ್ಲಿ 1972—1973ರಲ್ಲಿ 7,14,525 ರೂಪಾಯಿಗಳು ಬಂದಿವೆ, 1973—1974ರಲ್ಲಿ 8,50,933 ರೂಪಾಯಿಗಳು ಬಂದಿವೆ. ಇದೇ ರೀತಿ ಶ್ರೀರಂಗಪಟ್ಟಣದಲ್ಲಿ 1972—1973ರಲ್ಲಿ 40,506 ರೂಪಾಯಿ ಬಂದಿದೆ. 1973-1974 ರಲ್ಲಿ 55,811 ರೂಪಾಯಿಗಳು ಬಂದಿವೆ. ಇದೇ ರೀತಿ ರಾಣಿಬೆನ್ನೂರು, ಚಿತ್ರದುರ್ಗ, ಅಥಣಿ ಇವೆಲ್ಲಾ ಮುನಿಸಿಪಾಲಿಟಿಗಳಲ್ಲಿ ಬಂದಿವೆ. ಬೆಂಗಳೂರಿನ ಬಗ್ಗೆ ಯಾವ ರೀತಿಯಾಗಿದೆ ಎಂದರೆ ಅದು ಹೆಚ್ಚಾಗಿದಯೇ ವಿನಾ ಕಡಿಮೆಯಾಗಿಲ್ಲ ಇದರ ವಿವರಗಳು ಈಗಿಲ್ಲ. ಬೇಕಾದರೆ ಆಮೇಲೆ ತರಿಸಿಕೊಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ—ನಾನು ಮೊಟ್ಟ ಮೊದಲನೆಯದಾಗಿ ಕೋರ್ಟುಗಳ ಬಗ್ಗೆ ಕೆಲವು ಆಕ್ಷೇಪಣೆಗಳನ್ನು ಎತ್ತಿದ್ದೆ. ಅದು ಎಂದರೆ ಕೆಲವು ಕಡೆ ಇರುವ ಕೋರ್ಟುಗಳಲ್ಲಿ ಕುಳಿತುಕೊಳ್ಳುವವರಿಗೆ ಕುರ್ಚಿಗಳು ಹಾಗೂ ಬೆಂಚುಗಳು ಇಲ್ಲ. ಕಕ್ಷಿಗಾರರುಗಳು ಬಂದರೆ ಎಲ್ಲಿ ಕೂತುಕೊಳ್ಳಬೇಕು? ಕುರ್ಚಿ ಬೆಂಚುಗಳನ್ನು ಒದಗಿಸುವುದು ಸರಕಾರದ ಜವಾಬುದಾರಿಯಲ್ಲವೇ?

ಶ್ರೀ ಡಿ. ಕೆ. ನಾಯಕರ್.—ಅದನ್ನು ಆರ್ಥಿಕ ಸ್ಥಿತಿ ನೋಡಿಕೊಂಡು ಮಾಡಬೇಕಾಗಿ ಬರುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಇಂದು ಕೋರ್ಟುಗಳಿಂದಲೇ ಬೇಕಾದಷ್ಟು ದುಡ್ಡು ಬರುತ್ತದೆ ಅಲ್ಲಿ ಬರುವ ದುಡ್ಡನ್ನೇ ಉಪಯೋಗಿಸಿದರೆ ಇಂತಹ ಕುರ್ಚಿ ಬೆಂಚುಗಳನ್ನು ಒದಗಿಸಿಕೊಡಬಹುದು. ಅದೇನೂ ಅಂತಹ ಕಷ್ಟದ ವಿಷಯಗಳಲ್ಲ.

ಇನ್ನು ನಾನು ನಿರ್ದಿಷ್ಟವಾಗಿ ಬೆಂಗಳೂರು ಕಾರ್ಪೊರೇಷನ್ ಎಲೆಕ್ಷನ್ನು ಈ ವರ್ಷದ ಆಖೈರು ಎಂದರೆ ಡಿಸೆಂಬರು ಒಳಗೆ ಮಾಡದೇ ಮುಂದೂಡುತ್ತೀರಿ ಎಂದು ಹೇಳಿದುದಕ್ಕೆ ಇದರ ಬಗ್ಗೆ ಸೂಚನೆಗಳನ್ನು ಕೊಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದು ಸರಿಯಲ್ಲ. ನಾನು ಸರಕಾರದ ಮೇಲೆ ನಿರ್ದಿಷ್ಟವಾದ ಆಪಾದನೆ ಮಾಡುತ್ತೇನೆ. ಇದಕ್ಕಾಗಿ ಮಾನ್ಯ ಮಂತ್ರಿಗಳು ನಿರ್ದಿಷ್ಟವಾಗಿ ಇದೇ ಡಿಸೆಂಬರೊಳಗೆ ಬೆಂಗಳೂರು ನಗರ ಕಾರ್ಪೊರೇಷನ್‌ಗಳ ಚುನಾವಣೆ

(ಶ್ರೀ ಕೆ. ಎಂ. ನಾಗಣ್ಣ)

ನಡೆಸುತ್ತೇನೆಂದು ಹೇಳಿದರೆ ನಾನು ಆಗ ಒಪ್ಪಿಕೊಳ್ಳುತ್ತೇನೆ. ಇಲ್ಲದೇ ಹೋದರೆ ಅದು ಸರಿಯಲ್ಲ ಎಂದು ಹೇಳುತ್ತೇನೆ. ಇದರಲ್ಲಿ ನಿರ್ದಿಷ್ಟವಾದ ಜವಾಬುದಾರಿ ಸರಕಾರಕ್ಕೆ ಇದೆ. ಅದಕ್ಕಾಗಿ ನಾನು ನೇರವಾದ ಆಪಾದನೆ ಮಾಡುತ್ತಿರುವುದರಿಂದ ಮಂತ್ರಿಗಳೂ ಕೂಡ ನೇರವಾದ ಉತ್ತರ ಕೊಡಲೇಬೇಕು.

ಎರಡನೇದು, ನಾನು ಹೇಳಿದ್ದು ಟ್ರಸ್ಟು ಬೋರ್ಡುಗಳಿಗೆ ಟ್ರಸ್ಟಿ ಮೆಂಬರುಗಳಾಗಿ ಸರಕಾರ ನೇಮಕ ಮಾಡುವಾಗ ಸರಿಯಾಗಿ ಮಾಡುತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾಗಿ ತಿಳಿದುಕೊಳ್ಳಲಿಲ್ಲ ಎಂದು ತೋರುತ್ತೆ. ಇದರಲ್ಲಿ ನಾಮಿನೇಷನ್ ಮಾಡುವಾಗ ಇದರ ಅಧಿಕಾರ ಸರಕಾರಕ್ಕಿದೆ. ಇಂತಹ ನಾಮಿನೇಷನ್ ಮಾಡುವಾಗ ಸ್ವಲ್ಪ ಯೋಗ್ಯರು ಹಾಗೂ ಬುದ್ಧಿವಂತರು ಆಗಿರುವವರನ್ನು ಇಲ್ಲಿ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಮುನಿಸಿಪಾಲಿಟಿಗಳ ವಿಷಯಗಳು ಹಾಗೂ ರೂಲ್ಸುಗಳನ್ನು ತಿಳಿದಿರುವವರು ಎಂದರೆ ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯರಂತಹವರನ್ನು ಇಂತಹ ಬೋರ್ಡುಗಳಲ್ಲಿ ಟ್ರಸ್ಟಿ ಮೆಂಬರುಗಳನ್ನಾಗಿ ನೇಮಕ ಮಾಡಿದರೆ ಸರಿಯಾಗಿರುತ್ತದೆ. ಯಾರು ಲಂಚ ತೆಗೆದುಕೊಳ್ಳದೆ ದಯಾದಾಕ್ಷಿಣ್ಯಗಳಿಲ್ಲದೆ ಚೆನ್ನಾಗಿ ಕೆಲಸ ಮಾಡುತ್ತಾರೋ ಅಂತಹವರನ್ನು ನೋಡಿ ಟ್ರಸ್ಟು ಬೋರ್ಡುಗಳಿಗೆ ನೇಮಕ ಮಾಡಬೇಕು. ತಾವು ಬೆಂಗಳೂರು ನಗರಕ್ಕೆ ಹೊಸದಾಗಿ ಬಂದಿರುವವರು. ತಮಗೆ ಬೆಂಗಳೂರು ನಗರದ ಪರಿಶ್ರಮ ಚೆನ್ನಾಗಿ ಗೊತ್ತಿಲ್ಲ. ಇನ್ನೂ ಬೆಂಗಳೂರು ನಗರದ ಬಗ್ಗೆ ತಾವು ಇನ್ನೂ ಸರಿಯಾಗಿ ತಿಳಿದುಕೊಳ್ಳಬೇಕಾಗಿದೆ. ಇದಕ್ಕಾಗಿ ಬೆಂಗಳೂರಿನಲ್ಲಿ ಪರಿಶ್ರಮ ಹೊಂದಿರುವ ಬೆಂಗಳೂರು ನಗರದ ಜನರೊಡನೆ ಹಾಗೂ ಕೌನ್ಸಿಲರುಗಳಾಗಿರುವ ನಮ್ಮಂತಹವರುಗಳೊಡನೆ ಕಲೆತು ಚರ್ಚೆ ಮಾಡಿ ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡರೆ ಅದರಿಂದ ಅನುಕೂಲವಾಗುತ್ತದೆ. ದಯವಿಟ್ಟು ಇಲ್ಲ ಲಂಚ ಇಲ್ಲ ಎಂದು ಹೇಳುವುದಕ್ಕೆ ಮಾತ್ರ ಹೋಗಬೇಡಿ. ಆ ಜವಾಬುದಾರಿಯನ್ನು ತೆಗೆದುಕೊಂಡು ಇಲ್ಲಿ ಲಂಚವಿಲ್ಲವೆಂದು ಹೇಳಬೇಡಿ.

ಅಕಸ್ಮಾಯಿ ಕೆಲವು ಊರುಗಳಲ್ಲಿ ಅಧಿಕಾರಿಗಳನ್ನು ನೇಮಿಸಿದ ಮೇಲೆ ಜಾಸ್ತಿ ಬಂತು ಎಂದು ಹೇಳಿದ್ದೀರಿ, ಇದು ವಾಸ್ತವಾಂಶಕ್ಕೆ ಬಹಳ ದೂರವಾದುದು. ಏನಾದರೂ ಜಾಸ್ತಿ ಬಂದಿದ್ದರೆ 1970-71 ರಲ್ಲಿ ಬೆಲೆಗಳು ಏನು ಇದ್ದವು ಅವು 1972–73ರಲ್ಲಿ ಒಂದಕ್ಕೆ ಎರಡು ಆಗಿರುವುದರಿಂದ ಜಾಸ್ತಿ ಬಂದಿದೆಯೇ ಹೊರತು ಅಧಿಕಾರಿಗಳ ಸಾಹಸದಿಂದ ಅಲ್ಲ ಎನ್ನುವುದನ್ನು ತಾವು ಒಪ್ಪಿಕೊಳ್ಳಬೇಕು. 1972—73 ಮತ್ತು 1973–74ರಲ್ಲಿ ಬೆಲೆಗಳು ಡಬ್ಬಲ್ ಆಗಿದ್ದರೂ ಕೇವಲ 50 ಸಾವಿರ ರೂಪಾಯಿಗಳು ಅಕಸ್ಮಾಯಿ ಜಾಸ್ತಿ ಎಂದು ಹೇಳಿದರೆ ವ್ಯಥೆ ಪಡಬೇಕು. ಕಡಿಮೆ ಬಂದಿದೆ ಎಂದು ಒಪ್ಪಿಕೊಳ್ಳುವುದು ಬಿಟ್ಟು, ಜಾಸ್ತಿ ಬಂದಿದೆ ಎಂದರೆ ಒಪ್ಪುವುದಕ್ಕೆ ತಯಾರು ಇಲ್ಲ. ಲಂಚಗುಳಿತನ ನನ್ನ ಜನರಿಗೆ ಬಂದಿಲ್ಲ, ಬಂದರೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದಿರಿ. ಒಂದು ವರ್ಷದ ಕೆಳಗೆ ಎರಡು ಲಕ್ಷ ರೂಪಾಯಿಗಳ ಲಂಚ ಹೊಡೆದಿದ್ದಾರೆ ಎಂದು ಕಾಗದ ಬರೆದು ಪ್ರೂಫ್ ಮಾಡುತ್ತೇನೆ. ಸಿ.ಓ.ಐ. ರಿಪೋರ್ಟ್ ತರಿಸಿಕೊಳ್ಳಿ ಎಂದು ಸರ್ಕಾರವನ್ನು ಕೇಳಿಕೊಂಡರೂ ಕೂಡ, ಮಾನ್ಯ ಚನ್ನಬಸಪ್ಪನವರು ವಿಚಾರಣೆ ಮಾಡುತ್ತೇವೆ ಎಂದು ಹೇಳಿದರು ಇದುವರೆವಿಗೂ ಮಾಡಿಲ್ಲ. ಲಂಚ ತೆಗೆದುಕೊಂಡಿದ್ದಾರೆ ಎಂಬುದನ್ನು ಘಂಟಾಘೋಷವಾಗಿ ಹೇಳುತ್ತೇನೆ, ರುಜುವಾತು ಮಾಡುತ್ತೇನೆ ಎಂದು ಹೇಳುವಾಗ ಸರ್ಕಾರದ ಗಮನಕ್ಕೆ ತಂದರೆ ವಿಚಾರ ಮಾಡುತ್ತೇವೆ ಎಂದು ಹೇಳುವುದು ಶೋಚನೀಯವಾದುದು. ತಾವು ಇಂತಹ ಹೇಳಿಕೆ ಕೊಡಬೇಡಿ ಇದ್ದ ತಪ್ಪನ್ನು ಒಪ್ಪಿಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಎನ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ಮಾತನಾಡುವಾಗ ಅಗ್ರಿಕಲ್ಚರ್ ಡೆಟರ್ಸ್ ರಿಲೀಫ್ ಆಕ್ಟ್ ಬಗ್ಗೆ ಪ್ರಸ್ತಾಪ ಮಾಡಿದೆ. ಅದಕ್ಕೆ ಉತ್ತರ ಬರಲಿಲ್ಲ. ಅಗ್ರಿಕಲ್ಚರ್ ಡೆಟರ್ಸ್ ರಿಲೀಫ್ ಆಕ್ಟ್ ಸಹ ಅಸೆಂಬ್ಲಿಯಲ್ಲಿ ತಂದು ಪಾಸು ಆದ ಮೇಲೆ ಕೆಲವು ಹಿತಾಸಕ್ತಿಗಳು ಹೈಕೋರ್ಟಿಗೆ ಹೋಗಿ ಅದನ್ನು ಕ್ವಾಷ್ ಮಾಡಿಸಿದರು. ಸೂಕ್ತ ಕಂಡ ಬದಲಾವಣೆ ತಂದು ಕಾನೂನು ಮಾಡುವುದು ಶಾಸಕಾಂಗಕ್ಕೆ ಬಿಟ್ಟಿದ್ದು ಎಂದು ಜಡ್ಜ್‌ಗಳು ಆ ಜಡ್ಜ್‌ಮೆಂಟಿನಲ್ಲಿ ಅಬ್ಸರ್ವ್ ಮಾಡಿದರು. ಮತ್ತೆ ಸರ್ಕಾರ ಸುಪ್ರೀಂಕೋರ್ಟಿಗೆ ಹೋಯಿತು ಅಲ್ಲಿ ಕೂಡ ಸರ್ಕಾರದ ಪರವಾಗಿ ಆಗಲಿಲ್ಲ. ಆದುದರಿಂದ ಈಗ ಯಾವುದಾದರೂ ಸರಿಯಾದ ಕಾನೂನು ತರುತ್ತೀರಾ ?

ಶ್ರೀ ಕೆ. ಶ್ರೀರಾಮುಲು.—ಪ್ರತಿ 5 ಸಾವಿರ ಜನಸಂಖ್ಯೆ ಇರುವಂಥ ತಾಲ್ಲೂಕು ಬೋರ್ಡುಗಳಿಗಾಗಲೀ ಮುನಿಸಿಪಾಲಿಟಿಗಳಿಗಾಗಲೀ, ಟೌನ್ ಪ್ಲಾನಿಂಗ್ ಕಮಿಷನರ್ ನೇಮಕ ಮಾಡಬೇಕು

ಎಂದು ಹೇಳಿದೆ. ಇದರ ಬಗ್ಗೆ ಕಾರ್ಪೊರೇಷನ್ ಮತ್ತು ಟ್ರಸ್ಟ್ ಬೋರ್ಡ್ ರೂಲ್ಸ್ ಒಂದೇ ಯೂನಿಫಾರಂ ಇರಬೇಕು. ಜನ ಸಂಖ್ಯೆ ಜಾಸ್ತಿ ಆದ ಮೇಲೆ ಕಟ್ಟಿರುವ ಮನೆಗಳನ್ನು ಉರುಳಿಸುವುದಕ್ಕೆ ಮತ್ತು ಅಕ್ವಿಜಿಷನ್ ಖರ್ಚು ಜಾಸ್ತಿ ಆಗುತ್ತದೆ, ಹಾಗೆ ಮಾಡಬಾರದು, ಟೌನ್ ಪ್ಲಾನಿಂಗ್ ದೃಷ್ಟಿಯಿಂದ ಸರಿಯಾಗಿ ಮಾಡಬೇಕೆಂದು ಹೇಳಿದೆ. ಉತ್ತರ ಸಿಕ್ಕಲಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ನಾನು ಸಹ ರೆವಿನ್ಯೂ, ಕೋ-ಆಪರೇಷನ್ ಮತ್ತು ಕೈಗಾರಿಕೆಗಳಿಗೆ ಸಂಬಂಧಪಟ್ಟ ಹಾಗೆ ಏನು ಟ್ರಿಬ್ಯುನಲ್ ಇವೆ, ಅದೇ ತರಹ ಸರ್ವೀಸ್ ಟ್ರಿಬ್ಯುನಲ್ ಮಾಡಬೇಕೆಂದು ಕೇಳಿಕೊಂಡಿದ್ದೆ ಅದಕ್ಕೆ ಉತ್ತರ ಇಲ್ಲ. ಬೆಂಗಳೂರು ಸಿಟಿ ಕಾರ್ಪೊರೇಷನ್ನಿನಲ್ಲಿ ಹಿಂದೆ ಪ್ರೀ ಆಡಿಟ್ ಸಿಸ್ಟಮ್ ಇತ್ತು. ಈಗ ಪೋಸ್ಟ್ ಆಡಿಟ್ ಸಿಸ್ಟಮ್ ಬಂದಿದೆ. ಇದರಿಂದ ಕೋಟ್ಯಾಂತರ ರೂಪಾಯಿ ಬಾಕಿ ನಿಂತಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ನನಗೆ ವಿವರಣೆ ಹೇಳುತ್ತಾರೆಯೇ ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ಡೆಟರ್ಸ್ ರಿಲೀಫ್ ಆಕ್ಟ್ ಬಗ್ಗೆ ಶ್ರೀ ನರ್ಲಿ ಚಂದ್ರಶೇಖರ್‌ರವರು ಏನು ಹೇಳಿದರು ಅವನ್ನು ಪರಿಶೀಲನೆ ಮಾಡಿ, ಮಾನ್ಯ ಸದಸ್ಯರ ಜೊತೆಗೆ ವಿಚಾರ ವಿನಿಮಯ ಮಾಡಿ ಯೋಗ್ಯವಾದ, ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಅರ್ಹವಾದಂಥ ಸಲಹೆ ಎಂದು ಹೇಳುತ್ತೇನೆ. ಅಲ್ಲದೆ ಶ್ರೀ ನಾಗಣ್ಣನವರು ಕಾರ್ಪೊರೇಷನ್ ಎಲೆಕ್ಷನ್ ಬಗ್ಗೆ ಸಂಶಯ ಬರುವುದನ್ನು ಹೇಳಿದರು. ಈಗ ಇದ್ದ ಪರಿಸ್ಥಿತಿಯಲ್ಲಿ ಈ ಸ್ಟೇಜಿನಲ್ಲಿ 1974ರ ಡಿಸೆಂಬರ್‌ಗೆ ಆಗುವಂಥ ಚುನಾವಣೆ ಬಗ್ಗೆ ಯಾವ ರೀತಿ ಸಂಶಯ ತಾಳಿದರೋ ಎಂದು ಅರ್ಥವಾಗುತ್ತಾ ಇಲ್ಲ ಎಂದು ನಾನು ಹೇಳಿದೆ. ಚುನಾವಣೆ ಮಾಡುತ್ತೀರೋ, ಮಾಡುವುದಿಲ್ಲವೋ ಎಂದು ಕಟುವಾಗಿ ಉತ್ತರ ಕೊಡಬೇಕೆಂದು ಅವರು ಕೇಳುತ್ತಾರೆ. 1974ರ ಡಿಸೆಂಬರ್‌ನಲ್ಲಿ ಏನು ಆಗುತ್ತದೆ ಎನ್ನುವುದನ್ನು ನಾನು ಈಗಲೇ ಹೇಳಬೇಕೇ ?

ಶ್ರೀ ಕೋಣಂದೂರು ಲಿಂಗಪ್ಪ.—ಇನ್ನು 6 ತಿಂಗಳು ಇರುವುದು.

ಶ್ರೀ ಡಿ. ಕೆ. ನಾಯ್ಕರ್.—ಪ್ರೊಸೀಜರ್ ಪ್ರಕಾರ ಎಲೆಕ್ಷನ್ ಮಾಡುವುದು ಇದೆ. ಪ್ರೊಸೀಜರ್‌ನಲ್ಲಿ ಏನಾದರೂ ಹೆಚ್ಚು ಕಡಿಮೆ ಆದಾಗ ಸಂಶಯ ಪಟ್ಟು ಕೇಳಿದರೆ ಮಾತ್ರ ಆಗ ಸರ್ಕಾರದ ಮೇಲೆ ಮಾಡುವ ಟೀಕೆ ಸರಿ.

ಶ್ರೀ ಹೆಚ್. ಡಿ. ದೇವೇಗೌಡ.—ಸದ್ಯಕ್ಕೆ ಮಾಡುವುದಕ್ಕೆ ಆಗುವುದಿಲ್ಲ ಅಂತ ಕಾಣುತ್ತದೆ ಎಂದು ಹೇಳಿ.

ಶ್ರೀ ಡಿ. ಕೆ. ನಾಯ್ಕರ್.—ಅದು ಹೇಗೆ ಹೇಳುವುದಕ್ಕೆ ಆಗುತ್ತದೆ ?

ಶ್ರೀ ಕೆ. ಎಂ. ನಾಗಣ್ಣ.—ಕಾರ್ಪೊರೇಷನ್ನಿನವರು ಸಿಟಿಯನ್ನು 75 ಡಿವಿಷನ್‌ಗಳಾಗಿ ವಿಂಗಡಿಸಿ ತಮಗೆ ಕಳುಹಿಸಿದ್ದಾರೆ. ಅದನ್ನು ಒಪ್ಪದೆ 100 ಡಿವಿಷನ್ನುಗಳನ್ನು ಮಾಡಬಾರದು ಎಂದು ಹೇಳಿದ್ದೀರಿ. ತಮ್ಮ ಉದ್ದೇಶ 1974ಕ್ಕೆ ಚುನಾವಣೆ ನಡೆಸಕೂಡದು. 1975ಕ್ಕೆ ನಡೆಸಬೇಕು ಎನ್ನುವುದು, ಹೊಸ ಮೇಯರ್ ಚುನಾವಣೆ ಮುಂದಿನ ವರ್ಷ ಮಾಡುತ್ತೇವೆಂದು ಮಾತು ಕೊಟ್ಟಿದ್ದೀರಿ. ಏನಾದರೂ ನೆಪ ಒಡ್ಡಿ ಕಾರ್ಪೊರೇಷನ್ ಚುನಾವಣೆ 1974ಕ್ಕೆ ನಡೆಸುವುದಿಲ್ಲ. 1975ರ ಕೊನೆಗೆ ನಡೆಸಿದರೆ ಪುಣ್ಯ ಎಂದು ಹೇಳಿದೆ.

ಶ್ರೀ ಡಿ. ಕೆ. ನಾಯ್ಕರ್.—ಅದು ನಿಜವಾದ ಸಕಾರಣವಲ್ಲ. ಡಿವಿಷನ್ ಮಾಡುವಾಗ ಮತದಾರರ ಸಂಖ್ಯೆ, ಜನಸಂಖ್ಯೆ ಮತ್ತು ಅಲ್ಲಿನ ಪರಿಮಿತಿಗೆ ಅನುಗುಣವಾಗಿ ಮಾಡುವ ಪರಿಸ್ಥಿತಿ ಇದೆ. ಚುನಾವಣೆ ಮುಂದೆ ಹಾಕುವಂಥ ಧೋರಣೆಯನ್ನು ಇಟ್ಟುಕೊಂಡು ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಏನು ಅಪಾದನೆ ಮಾಡಿದರು ಅದು ಸರಿಯಲ್ಲವೆಂದು ಮಾತ್ರ ಹೇಳುತ್ತೇನೆ ಅದೂ ಅಲ್ಲದೆ ಬೆಲೆಗಳ ಆಧಾರದ ಮೇಲೆ ಆಕ್ಟ್ರಾಯಿ ಹೆಚ್ಚಿಗೆ ಆಗಿದೆಯೇ ಹೊರತು ವಸೂಲಿಯಿಂದ ಅಲ್ಲ ಎಂದು ಹೇಳಿದರು, ಮಾನ್ಯ ಸದಸ್ಯರನ್ನು ಕೇಳುತ್ತೇನೆ ಒಂದು ವೇಳೆ ಬೆಲೆಗಳು ಏರಿದ್ದಾಗ್ಯೂ ಕೂಡ ವಸೂಲಿ ಮಾಡದೆ ಇದ್ದರೆ ಯಾವ ರೀತಿ ಆಕ್ಟ್ರಾಯಿ ಏರುತ್ತದೆ ? ರಿಕವರಿ ಮಾಡುವ ಆಫೀಸರ್ ಇಲ್ಲದೆ ಇದ್ದರೆ ಬೆಲೆಗಳು ಏರಿದರೆ ಏನು, ಏರದಿದ್ದರೆ ಏನು ? ಬೆಲೆಗಳು ಏರುವುದಕ್ಕೂ, ವಸೂಲಿಗೂ ಸಂಬಂಧವಿದೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಎಂದು ಅಲ್ಲ. ಅದಾದನಂತರ ಟ್ರಸ್ಟ್ ಬೋರ್ಡಿಗೆ ಯೋಗ್ಯರಾದವರನ್ನು ನಾಮಿನೇಟ ಮಾಡಬೇಕು ಎಂದು ಉತ್ತಮವಾದ ಸಲಹೆ ಕೊಟ್ಟಿದ್ದಾರೆ. ನಾನು ಇವನ್ನು ನಿಜವಾಗಿಯೂ ಒಪ್ಪಿಕೊಂಡಿದ್ದೇನೆ. ಯೋಗ್ಯರಾದವರನ್ನು ತಾವು ಯಾವರೀತಿ ಅಪೇಕ್ಷೆ ಮಾಡುತ್ತೀರೋ ಅದೇ ರೀತಿ ಸರ್ಕಾರ ಅಪೇಕ್ಷೆ ಮಾಡಿ ನಾಮಿನೇಷನ್ ಮಾಡುತ್ತದೆ. ಟೌನ್ ಪ್ಲಾನಿಂಗ್ ಕಮಿಷನ್ ಬಗ್ಗೆ ಶ್ರೀ ರಾಮುಲುರವರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು

(ಶ್ರೀ ಡಿ. ಕೆ. ನಾಯ್ಕರ್)

ಕೂಡ ಗಮನದಲ್ಲಿಟ್ಟುಕೊಂಡಿರುತ್ತೇನೆ. ರಸ್ತೆಗಳಲ್ಲಿ ಮನೆಗಳು ಆಗಬೇಕು ಎನ್ನುವ ಇಚ್ಛೆ ಸರ್ಕಾರಕ್ಕೆ ಇಲ್ಲ. ಟೌನ್ ಪ್ಲಾನಿಂಗ್‌ನಲ್ಲಿ ಬಹಳ ಉತ್ತಮ ದರ್ಜೆಯಲ್ಲಿ ಕೆಲಸಮಾಡುವ ಪ್ಲಾನಿಂಗ್ ಡೈರೆಕ್ಟರ್‌ನ್ನು ನೇಮಿಸಿಕೊಂಡಿದ್ದೇವೆ. ಅವರ ಕೆಳಗೆ ಎಲ್ಲಾ ಆಫೀಸರುಗಳು ಚಾರ್ಜ್ ಮಾಡಿದ್ದೇವೆ. ಸರ್ವೀಸ್ ಟ್ರಿಬ್ಯೂನಲ್ ಬಗ್ಗೆ ಶ್ರೀಮಾನ್ ನಾಯ್ಡುರವರು ಹೇಳಿದರು. ಮುನಿಸಿಪಾಲಿಟಿ ಅಡ್ಮಿನಿಸ್ಟ್ರೇಷನ್ ಸರ್ವಿಸನ್ನು ಕಾಮನ್ ಕೇಡರ್ ಮಾಡುವಂಥ ಯೋಚನೆ ಸರ್ಕಾರ ಇಟ್ಟುಕೊಂಡಿದೆ. ಮುಂದಕ್ಕೆ ಅವಶ್ಯಕತೆ ಕಂಡುಬಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ. ಶ್ರೀಮಾನ್ ನಾಗಣ್ಣನವರು ಎರಡು ಲಕ್ಷ ರೂಪಾಯಿಗಳ ಅಪರಪರ ಆದ ಬಗ್ಗೆ ರಿಪೋರ್ಟ್ ಕಳುಹಿಸಿದ್ದಾಗಿ ಎಂದು ಹೇಳಿದರು. ಆ ರಿಪೋರ್ಟ್‌ನ್ನು ತರಿಸಿ ಯೋಗ್ಯ ಪರಿಶೀಲನೆ ಮಾಡುತ್ತೇನೆ. ತಮಗೆ ಏನಾದರೂ ಟೈಮ್ ಸಿಕ್ಕಿದರೆ ಬಂದು ನನ್ನನ್ನು ಕೇಳಲು ಬಹುದು. ಯೋಗ್ಯ ಪರಿಹಾರವನ್ನು ನಾವು ನೀವು ಕೂಡಿ ಕಂಡುಹಿಡಿಯುವ ಹಾಗೆ ಮಾಡೋಣ.

Madam SPEAKER.—I will now put the Demands to the vote of the House.

The question is:

> "That the respective sums not exceeding the amounts mentioned in the list of Demands be granted to the Government to defray the charges which will come in the course of payment during the financial year for the period ending 31st day of March, 1975 in respect of Demand Nos. 3 and 31."

The motion is adopted and the Demands are granted.

As ordered by the chair the motion for Demands for grants adopted by the chair, are reproduced below.

Minister for Law and Municipal Administration—

Demand No. 3—Administration of Justice

> "That a sum not exceeding Rs. 3,43,55,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Administration of Justice."

Demand No. 31—Urban Development

> "That a sum not exceeding Rs. 1,50,51,000 inclusive of the sum granted 'on account' be granted to the Government to defray the charges which will come in course of payment during the financial year ending 31st of March 1975 in respect of "Urban Development."

DEMAND Nos. 4, 8, 11, 14, 22, 23, 32 and 61.

Sri M. Y. GHORPADE.—Sir, on the recommendation of the Governor I beg to move:

"That a sum not exceeding Rs. 12,98,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 4 "Collection of Taxes on Income and Expenditure."

"That a sum not exceeding Rs. 1,85,98,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 8 "Sales Tax".

"That a sum not exceeding Rs. 16,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 11 "Small Savings".

"That a sum not exceeding Rs. 1,25,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 14 "Treasury and Accounts Administration".

"That a sum not exceeding Rs. 2,84,65,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 22 "Other Administrative and General Services".

"That a sum not exceeding Rs. 9,26,72,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 23 "Pension and Other Retirement benefits".

"That a sum not exceeding Rs. 1,21,16,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 32 "Information and Publicity".

(SRI M. Y. GHORPADE)

"That a sum not exceeding Rs. 1,00,25,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 61 "Loans to Government Servants and Miscellaneous Loans".

Madam SPEAKER.—*Motion Moved*:

"That a sum not exceeding Rs. 12,98,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 4 "Collection of Taxes on Income and Expenditure".

Along with this Demand the other Demands, *viz.*, Nos. 8, 11, 14, 22, 23, 32 and 61 are deemed to have been moved and opened for discussion.

† ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಸನ್ಮಾನ್ಯ ಸಭಾಧ್ಯಕ್ಷರೆ ನಮ್ಮ ರಾಜ್ಯದ ಅರ್ಥ ಮಂತ್ರಿಗಳು ಇಟ್ಟಿರತಕ್ಕ 4,8,11,14,22,23,32,61 ಈ ಬೇಡಿಕೆಗಳ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಾ ನಾಲ್ಕು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಯಾವುದೇ ಒಂದು ರಾಜ್ಯ ತೆರಿಗೆಯನ್ನು ಹಾಕಬೇಕಾದರೆ ತೆರಿಗೆಯ ಮೂಲ ಉದ್ದೇಶವನ್ನು ತಿಳಿದುಕೊಳ್ಳಬೇಕಾದುದು ಪ್ರಾಮುಖ್ಯವಾದುದು. ಸಾಮಾನ್ಯವಾಗಿ ದೇಶದ ಪ್ರಾಮುಖ್ಯತೆಯನ್ನು ದೇಶದ ಪ್ರಗತಿಯನ್ನು ಹೆಚ್ಚು ಮಾಡುವುದು ತೆರಿಗೆಯನ್ನು ಹಾಕತಕ್ಕ ಮೂಲಉದ್ದೇಶ. ಈ ಒಂದು ಪ್ರಜಾಪ್ರಭುತ್ವದಲ್ಲಿ ಮೂಲ ಉದ್ದೇಶ ಎಂದು ನಾನು ತಿಳಿದುಕೊಂಡಿದ್ದೇನೆ. ತೆರಿಗೆಯನ್ನು ಹಾಕಿ, ತನ್ನ ಉತ್ಪನ್ನದ ಪ್ರಮಾಣವನ್ನು ಹೆಚ್ಚಿಸುವುದರ ಮುಖಾಂತರ, ಅದನ್ನು ಆರ್ಥಿಕ ದೃಷ್ಟಿಯಿಂದ ನಾನಾ ಭಾಗಗಳ ಜನತೆಯಲ್ಲಿ ಸಮಸಮಾನವಾಗಿ ಉಪಯೋಗಿಸತಕ್ಕ ಅವಕಾಶ ಈ ತೆರಿಗೆಯನ್ನು ಹಾಕುವುದರಿಂದ ಇರುತ್ತದೆ ಎಂದು ನಾನಾದರೂ ಭಾವಿಸುತ್ತೇನೆ. ತೆರಿಗೆಯನ್ನು ಹಾಕುವುದಕ್ಕೆ ಮುಂಚೆ ಆ ದೇಶದ ಜನತೆಯು ಆ ತೆರಿಗೆಯನ್ನು ಹೊರತಕ್ಕಂಥ ಸಾಮರ್ಥ್ಯವನ್ನು ಹೊಂದಿದ್ದಾರೆಯೇ ಅಥವಾ ಇಲ್ಲವೇ ಮತ್ತು ಆ ತೆರಿಗೆಯನ್ನು ಹಾಕುವುದರಿಂದ ಜನಸಾಮಾನ್ಯರ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಉಂಟಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾದುದು ಬಹಳ ಪ್ರಾಮುಖ್ಯವಾದುದು. ನಮ್ಮ ದೇಶದಲ್ಲಿ 1948ನೇ ಇಸವಿಯಿಂದ ಜಾರಿಗೆ ಬಂದಂಥ ಈ ಮಾರಾಟ ತೆರಿಗೆ ಒಂದಲ್ಲ ಒಂದು ರೀತಿಯಲ್ಲಿ ಇದುವರೆಗೂ ಆಗಿನಿಂದ ಈಗಿನವರೆಗೂ ಸರಾಸರಿ 25 ಪರ್ಸೆಂಟ್ ಹೆಚ್ಚು ಆಗಿರಬಹುದು. ಹಿಂದೆ 1.7 ಕೋಟಿ ರೂಪಾಯಿ ಆದಾಯ ಇದ್ದುದು ಇಂಟಿಗ್ರೇಷನ್ ಆದ ಮೇಲೆ ಮೊದಲನೇ ವರ್ಷದಲ್ಲಿ 7 ಕೋಟಿ ಬಂದು ಹೋಗುತ್ತಾ ಹೋಗುತ್ತಾ 7 ರಿಂದ 75 ಕೋಟಿಗೆ ಬಂದಿದೆ. ಈ ಒಂದು ಹೆಚ್ಚಿನ ಪ್ರಮಾಣದ ತೆರಿಗೆಯನ್ನು ಸರ್ಕಾರ ಗಳಿಸುತ್ತಿದ್ದರೂ ಸಹ ಇದರಿಂದ ಜನಸಾಮಾನ್ಯರಿಗೆ ಆಗಿರತಕ್ಕ ಪ್ರಯೋಜನಗಳಾದರೂ ಏನು ? ತೆರಿಗೆಯನ್ನು ಕೊಡ ತಕ್ಕ ಜನಗಳಿಗೆ ಇದು ಎಷ್ಟರಮಟ್ಟಿಗೆ ಹೊರೆಯಾಗಿದೆ ಎಂಬುದನ್ನು ಮೂಲಕಃ ತಿಳಿದುಕೊಳ್ಳ ಬೇಕಾದುದು ಸರ್ಕಾರದ ಮೂಲ ಕರ್ತವ್ಯ. 1948ರಲ್ಲಿ ಮಾಡಿದಂಥ ಸೇಲ್ಸ್‌ಟ್ಯಾಕ್ಸ್ ಕಾನೂನು ಏನು ಇದೆ ಅದರಲ್ಲಿ ಅನೇಕ ಪದಾರ್ಥಗಳಿಗೆ ರಿಯಾಯತಿ ತೋರಿಸಿದ್ದೀರಿ. ಕೆಲವು ಪದಾರ್ಥಗಳಿಗೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಮಾಡಿ ಕೊಟ್ಟಿದ್ದೀರಿ. ದೇಶದ ಪರಿಸ್ಥಿತಿಯನ್ನು ಅನುಸರಿಸಿಕೊಂಡು ಸರ್ಕಾರ ಆಗಾಗ್ಗೆ ತೆರಿಗೆಯ ದರವನ್ನು ಹೆಚ್ಚು ಮಾಡುವುದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ತಾವು ಏನು ಮಾರಾಟ ತೆರಿಗೆಯನ್ನು ವಸೂಲು ಮಾಡುತ್ತಾ ಇದ್ದೀರಿ ಆ ಒಂದು ಉತ್ಪಾದನೆಯ ಪ್ರಮಾಣವನ್ನು ನೋಡಿದಾಗ ಅದು ತಾವು ಹೆಚ್ಚಿಗೆ ತೆರಿಗೆಯನ್ನು ಹಾಕಿರುವುದರಿಂದ ಹೆಚ್ಚಾಗಲಿಲ್ಲ ಎಂದು ಗೊತ್ತಾಗುತ್ತದೆ. ಉದಾಹರಣೆಗಾಗಿ ಯಾವ ಒಂದು ಪದಾರ್ಥದ ಬೆಲೆಯನ್ನು ತೆಗೆದು

ಕೊಂಡರೂ ಆಗಿನ ಒಂದು ಕಾಲದಲ್ಲಿ ಎಷ್ಟು ಧಾರಣೆ ಇತ್ತು, ಈಗ ಎಷ್ಟು ಏರಿದೆ, ಅಷ್ಟೇ ಪ್ರಮಾಣ ದಲ್ಲಿ ತೆರಿಗೆ ಈಗ ಹೆಚ್ಚಾಗಿ ಬರಲಿಲ್ಲ ಎನ್ನುವ ವಿಚಾರವನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬಹುದು. ತೆಂಗಿನಕಾಯಿ ಕೊಬ್ಬರಿ ತೆಗೆದುಕೊಂಡರೆ 1948ನೇ ಇಸವಿಯಲ್ಲಿ ಎಷ್ಟು ಪ್ರಮಾಣದಲ್ಲಿ ಬೆಲೆ ಕಡಿಮೆ ಇತ್ತು, 1974ರಲ್ಲಿ ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ. ಎಷ್ಟು ಹೆಚ್ಚಾಗಿದೆ, ಎಷ್ಟು ಹೆಚ್ಚಾಯಿತು, ಹೆಚ್ಚು ತೆರಿಗೆಯನ್ನು ಎಷ್ಟು ಪ್ರಮಾಣದಲ್ಲಿ ಬರಬೇಕಿತ್ತು, ಅಷ್ಟು ಪ್ರಮಾಣದಲ್ಲಿ ಈ ಒಂದು ತೆರಿಗೆ ಬರುತ್ತಾ ಇಲ್ಲ, ಅದು ಎಲ್ಲಿ ಹೋಗುತ್ತಾ ಇದೆ ಎನ್ನತಕ್ಕದನ್ನು ವಿಚಾರ ಮಾಡಬೇಕಾಗಿದೆ. ಏತಕ್ಕೆ ಕೊಬ್ಬರಿ ಮತ್ತು ತೆಂಗಿನಕಾಯಿಯ ವಿಚಾರ ಹೇಳಿದೆ ಎಂದರೆ, ತೆಂಗಿನಕಾಯಿ ಮತ್ತು ಕೊಬ್ಬರಿಯಿಂದ ಹೆಚ್ಚು ತೆರಿಗೆ ಬರತಕ್ಕ ಪ್ರಮಾಣದಲ್ಲಿ ಬೇರೆ ಪದಾರ್ಥ ಗಳಿಂದ ಅಷ್ಟು ಪ್ರಮಾಣಿಕವಾಗಿ ಬರುತ್ತಾ ಇಲ್ಲ. ಇದಕ್ಕೆ ಕಾರಣ ಏನು ? ಯಾವ ಯಾವ ಪದಾರ್ಥಗಳ ಮೇಲೆ ತೆರಿಗೆ ಹಾಕಿದ್ದೀರಿ ಎಂದು ಅದನ್ನು ಓದಿದಾಗ ನನಗೆ ಅನಿಸುತ್ತದೆ, ಸಾರ್ವ ಜನಿಕರು ಉಪಯೋಗ ಮಾಡತಕ್ಕ ದಿನವಹೀ ಪದಾರ್ಥಗಳ ಮೇಲೆ ಯಾವ ತೆರಿಗೆಯನ್ನು ಬಿಟ್ಟಿಲ್ಲ ಎಂದು, ಇದಲ್ಲದೆ ಒಂದೊಂದು ಪದಾರ್ಥಕ್ಕೂ ಅನೇಕ ವಿಧವಾದ ತೆರಿಗೆಗಳನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸರ್ಕಾರದವರು ಹಾಕಿದ್ದಾರೆ. ಒಂದು ರಾ ಮೆಟೀರಿಯಲ್ ಮೇಲೆ ತೆರಿಗೆಯನ್ನು ಹಾಕಿ ನಂತರ ಅದು ಉಪಯೋಗಿಸಿದ ಪದಾರ್ಥಕ್ಕೆ ಮತ್ತೊಂದು ತೆರಿಗೆಯನ್ನು ಹಾಕಿದ್ದೀರಿ. ಒಂದೊಂದು ಹಂತದಲ್ಲೂ ತೆರಿಗೆಯನ್ನು ಹಾಕುತ್ತಾ ಹೋದರೆ ಜನಸಾಮಾನ್ಯರಿಗೆ ಎಷ್ಟು ತೊಂದರೆ ಯಾಗುತ್ತದೆ ಎನ್ನುವ ವಿಚಾರ ತಾವು ಪರಿಗಣನೆ ಮಾಡಬೇಕು. ಉದಾಹರಣೆಗೆ ಹೇಳುವುದು ಕೆಲವು ಪದಾರ್ಥಗಳ ಬೆಲೆ ಒಂದಕ್ಕೆ 4 ರಷ್ಟು ಇದೆ. ಪದಾರ್ಥದ ಪ್ರಮಾಣವು ಅಷ್ಟೇ ಇದೆ. ಆದರೆ ತೆರಿಗೆ ಮಾತ್ರ ವಸೂಲಾದುದು ಕಡಿಮೆ ಇದೆ. ಇದಕ್ಕೆ ಕಾರಣ ಏನು ? ಯಾರು ತೆರಿಗೆಯನ್ನು ಸರ್ಕಾರಕ್ಕೆ ಕೊಡುತ್ತಾ ಇಲ್ಲವೇ ? ತೆರಿಗೆ ಎಲ್ಲ ಹೋಗುತ್ತಾ ಇದೆ ? ಯಾರು ಕೈ ಸೇರುತ್ತಾ ಇದೆ, ಅದನ್ನು ಯೋಚನೆ ಮಾಡಬೇಕು. ದೇಶದ ಪ್ರಗತಿಗೋಸ್ಕರ ಹಾಕಿದಂತ ತೆರಿಗೆ ಸರ್ಕಾರಕ್ಕೆ ಸರಿಯಾದ ರೀತಿಯಲ್ಲಿ ಬಾರದೆ ಹೋದರೆ ಅದು ಯಾರ ಜವಾಬ್ದಾರಿ ? ಉತ್ತಮವಾದ ಅಧಿಕಾರಿಗಳು ಇರ ಬಹುದು. ವ್ಯಾಪಾರಸ್ತರು ಮತ್ತು ಅಧಿಕಾರಿಗಳು ಶಾಮೀಲು ಆಗಿ ಸರ್ಕಾರಕ್ಕೆ ಬರುವಂಥ ಅನೇಕ ಕೋಟಿ ಕೋಟಿ ರೂಪಾಯಿಗಳ ತೆರಿಗೆ ಮಾಯವಾಗಿ ಕೆಲವೇ ಜನರ ಕೈಯಲ್ಲಿ ಸೇರುವ ಸಂದರ್ಭ ಬಂದಿದೆ ಎಂದು ಜನಸಾಮಾನ್ಯರು ಮಾತನಾಡಿಕೊಳ್ಳುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ ಅನೇಕ ಪದಾರ್ಥಗಳು ತೆರಿಗೆಯನ್ನು ಕೊಡದೆ ಮಾರಾಟ ಆಗುತ್ತಾ ಇರುವುದು ಗೊತ್ತಿದೆ. ಇದು ಯಾರ ಪ್ರೋತ್ಸಾಹದ ಮೇಲೆ ಆಗುತ್ತಿದೆ ಎಂದು ನಾವು ತಿಳಿಯಬೇಕು. ಇದು ಹಿಂದಿನಿಂದ ಬಂದಿದೆ. ಈಗ ಬಿಡಬಹುದು ಎಂದು ಅಲ್ಲ. ಸರ್ಕಾರಕ್ಕೆ ಬರಬೇಕಾದ ಹಣವನ್ನು ಬಾರದಿರುವಂತೆ ಯಾರು ಕಾನೂನಿಗೆ ವಿರುದ್ಧವಾಗಿ ಪ್ರೋತ್ಸಾಹ ಕೊಡುತ್ತಾರೋ ಎಲ್ಲಿ ಕುಂಠಿತವಾಗಿದೆಯೋ ಅದನ್ನು ಕಂಡುಹಿಡಿದು ಸರಿಮಾಡಬೇಕಾದುದು ಸರ್ಕಾರದ ಮೂಲ ಕರ್ತವ್ಯ. ತಾವು ಹಾಕಿರತಕ್ಕ ತೆರಿಗೆಯನ್ನು ಬಳಕೆದಾರರಿಂದ ತೆಗೆದುಕೊಳ್ಳದೆ ಕೊಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಬಳಕೆದಾರ ರಿಂದ ತೆಗೆದುಕೊಂಡಮೇಲೆ ಸರ್ಕಾರಕ್ಕೆ ಬರದೆಹೋದರೆ ಯಾರದು ತಪ್ಪು, ಯಾರು ಕೊಡಬೇಕು ಎನ್ನುವ ಬಗ್ಗೆ ಎಚ್ಚರಿಕೆ ವಹಿಸಬೇಕು ಎನ್ನುವ ಮಾತುಗಳನ್ನು ಹೇಳಬಯಸುತ್ತೇನೆ. ತಾವು ಹೇಳಿ ದ್ದೀರಿ 1969ರಲ್ಲಿ 46.3 ಕೋಟಿ ಇದ್ದದ್ದು 1972—73ರಲ್ಲಿ 69.9 ಕೋಟಿ ಬಂದಿದೆ ಎಂದು. ಅಷ್ಟು ಬಂದರೆ ಸಾಲದು. ತಾವು ಹಾಕಿರತಕ್ಕಂಥ ತೆರಿಗೆ ಪ್ರಮಾಣದ ಮೇಲೆ ಲೆಕ್ಕ ಹಾಕುವು ದಾದರೆ ಸುಮಾರು 120 ಕೋಟಿ ರೂಪಾಯಿ ತೆರಿಗೆ ನಮ್ಮ ಸರ್ಕಾರಕ್ಕೆ ಬರಬೇಕಿತ್ತು, ಇದನ್ನು ನೋಡಿದರೆ ಶೇಕಡ 50 ಭಾಗದ ತೆರಿಗೆ ಲೋಪವಾಗಿ ಅನೇಕ ಜನ ಹಂಚಿಕೆ ಮಾಡಿಕೊಳ್ಳುತ್ತಿದ್ದಾರೆ. ಎನ್ನುವುದು ನಿರ್ವಿವಾದ. ತೆರಿಗೆಯನ್ನು ಹೆಚ್ಚು ಮಾಡಲೇಬೇಕಾಗಿರಲಿಲ್ಲ. ಪದಾರ್ಥಗಳ ಬೆಲೆ ಜಾಸ್ತಿ ಆಗಿರುವುದರಿಂದ; ಉತ್ಪತ್ತಿ ಅಷ್ಟೇ ಪ್ರಮಾಣದಲ್ಲಿ ಇರುವುದರಿಂದ ತೆರಿಗೆಯನ್ನು ಹೆಚ್ಚು ಮಾಡಬೇಕಾಗಿರಲಿಲ್ಲ. ಈಗ ಇರತಕ್ಕ ಪದಾರ್ಥಗಳ ಮೇಲೆ ಸರಿಯಾದ ರೀತಿಯಲ್ಲಿ ತೆರಿಗೆ ಯನ್ನು ವಸೂಲು ಮಾಡಿದರೆ ಬಹುಶಃ 100 ಕೋಟಿಗೆ ಮಿಗಿಲಾದ ಆದಾಯ ಬರಬಹುದಾಗಿತ್ತು. ಈ ಹಣ ಸೋರಿ ಹೋಗಲು ಬಿಟ್ಟು, ಸರ್ಕಾರದವರು ಸರಿಯಾದ ರೀತಿಯಲ್ಲಿ ತೆರಿಗೆಯನ್ನು ವಸೂಲು ಮಾಡದೆ ಪದೇ ಪದೇ ತೆರಿಗೆಯನ್ನು ಹೆಚ್ಚು ಮಾಡುವುದು ಬಹಳ ಶೋಚನೀಯವಾದುದು. ಸರ್ಕಾರದ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿಲ್ಲ ಎನ್ನುವ ಅಂಶ ಕಂಡು ಬರುತ್ತದೆ. ಮಾನ್ಯ ಮಂತ್ರಿಗಳು ಪ್ರಮಾಣಿಕವಾಗಿ ಇರಬಹುದು. ಉನ್ನತ ಮಟ್ಟದಲ್ಲಿ ಪ್ರಾಮಾಣಿಕತೆ ಇರ ಬಹುದು ಇದರ ಬಗ್ಗೆ ಸಂಶಯವಿಲ್ಲ. ತೆರಿಗೆಯನ್ನು ವಸೂಲು ಮಾಡತಕ್ಕ ಜವಾಬ್ದಾರಿ ಕೆಳ ಮಟ್ಟದಲ್ಲಿ ಯಾರಿಗೆ ರಕ್ಷಣೆ ಇದೆಯೋ ಅವರು ದಕ್ಷರು ಆಗಿಲ್ಲ, ಪ್ರಾಮಾಣವಾಗಿ ಸರ್ಕಾರದವರು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳುವುದಾದರೆ ಇನ್ನು ಹೆಚ್ಚಿನ ತೆರಿಗೆ ಸರ್ಕಾರಕ್ಕೆ ಬರುತ್ತದೆ ಎನ್ನುವ ಅಂಶ ನಿರ್ವಿವಾದವಾದುದು, ಇದರ ಬಗ್ಗೆ ಹೆಚ್ಚಿಗೆ ಗಮನವನ್ನು ತೆಗೆದುಕೊಳ್ಳಬೇಕೆಂದು

(ಶ್ರೀ ಟಿ. ಎಂ. ಮಂಜುನಾಥ್)

ನಾನಾದರೂ ಬಾವನೆ ಮಾಡಿದ್ದೇನೆ. ಆಹಾರ ಪದಾರ್ಥಗಳ ಮೇಲೆ ತಾವು ತೆರಿಗೆಯನ್ನು ಹಾಕಿದ್ದೀರಿ.

2–30 P.M.

ಆಹಾರಪದಾರ್ಥಗಳ ಮೇಲೆ ಮಲ್ಟಿ ಪಸಯಿಂಟ್ ಟ್ಯಾಕ್ಸ್ ಹಾಕಿದ್ದೀರಿ. ನಾನು ಕೇಳಿಕೊಳುತ್ತೇನೆ. ಇದರಿಂದ ಜನತೆಗೆ ಬಹಳ ತೊಂದರೆಯಾಗುತ್ತದೆ. ತೆರತಕ್ಕವರು ಸರಿಯಾಗಿ ಸರ್ಕಾರಕ್ಕೆ ಲೆಕ್ಕ ಕೊಡುತ್ತಾ ಇಲ್ಲ. ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನು ಹಾಕಿ. ಫುಡ್‌ಗ್ರೈನ್ಸ್ ಮೇಲೆ ಹಾಕುತಿದ್ದಾರೆ, ಅದನ್ನು ರದ್ದುಮಾಡಿ. ಇಷ್ಟು ಹೆಚ್ಚಿಗೆ ಇವತ್ತು ಧಾರಣೆವಾಸಿಗಳು ಆಗಿರಬೇಕಾದರೆ, ಆಹಾರ ಪಧಾರ್ಥಗಳ ಮೇಲೆ ತೆರಿಗೆಯನ್ನು ಹಾಕಿರತಕ್ಕದು, ಇದು ಸಮಾಜದಲ್ಲಿ ಅಷ್ಟು ಒಳ್ಳೆಯುದಲ್ಲಿ ಎನ್ನತಕ್ಕ ಭಾವನೆ ನನ್ನಲ್ಲಿ ಮೂಡಿಬರುತ್ತಿದೆ. ಈ ಒಂದು ಮಾರಾಟ ತೆರಿಗೆಯಲ್ಲಿ ತಾವು ಅನೇಕ ವಿಧವಾದಂಥ ವಿವಿಧ ಹಂತಗಳನ್ನು ಕಂಡುಹಿಡಿದಿದ್ದೀರಿ. ಎಲ್ಲೆಲ್ಲಿ ತೆರಿಗೆಯಿಂದ ತಪ್ಪಿಸಿಕೊಂಡು ಹೋಗುತ್ತಾರೆ, ಸಮಾಜ ದ್ರೋಹಿಗಳು ಮೋಸಮಾಡುತ್ತಾರೆ, ಅದನ್ನು ಹಂತಹಂತವಾಗಿ ಕಂಡುಹಿಡಿಯುವುದಕ್ಕೆ ಚೆಕ್‌ಪೋಸ್ಟ್ ನಿರ್ಮಾಣಮಾಡಿದ್ದೀರಿ ಅದರಲ್ಲಿ ಯಾರು ನಿಗಾವಹಿಸುತ್ತಾರೆ ಎನ್ನುತಕ್ಕಂಥಾದ್ದು ಬಹಳ ಪ್ರಾಮುಖ್ಯವಾದುದು. ಚೆಕ್‌ಪೋಸ್ಟ್‌ನಲ್ಲಿರತಕ್ಕ ಅಧಿಕಾರಿಗಳು ಒಬ್ಬ ಒಂದು ಕೋಟಿ ರೂಪಾಯಿ ಬಂಡವಾಳ ಹಾಕಿ ವ್ಯಾಪಾರ ಮಾಡಿ ಎಷ್ಟು ಆದಾಯ ಪಡೆಯುತ್ತಾನೊ ಅದಕ್ಕಿಂತಲ್ಲೂ ಹೆಚ್ಚು ಆದಾಯ ಪಡೆಯುತ್ತಾರೆ ಎಂದು ಜನಸಾಮಾನ್ಯರು ಆಡಿಕೊಳ್ಳತಕ್ಕ ಮಾತು ಚೆಕ್‌ಪೋಸ್ಟ್‌ಗೆ ಬರತಕ್ಕಂಥ ಪದಾರ್ಥಗಳನ್ನು ತೆರಿಗೆ ಕೊಡತಕ್ಕ ಪದಾರ್ಥಗಳನ್ನು ಅಧಿಕಾರಿಗಳು ಮತ್ತು ತರತಕ್ಕ ವರ್ತಕರು ಶಾಮೀಲಾಗಿ, ಜೊತೆಗೂಡಿ ಸರ್ಕಾರಕ್ಕೆ ಬರತಕ್ಕ ತೆರಿಗೆಯನ್ನು ಇವತ್ತು ಮೋಸಮಾಡುತ್ತಿದ್ದಾರೆ. ವಂಚನೆ ಮಾಡುತ್ತಿದ್ದಾರೆ. ತಮ್ಮ ಇಲಾಖೆಯಲ್ಲಿ ಇಂತಹ ಅಧಿಕಾರಿಗಳು ಬಹುತೇಕ ಇದ್ದಾರೆ. ಆದುದರಿಂದ ಈ ಒಂದು ಚೆಕ್‌ಪೋಸ್ಟ್‌ನಲ್ಲಿ ಆಗತಕ್ಕಂಥ ಅವ್ಯವಹಾರವನ್ನು, ಅನ್ಯಾಯವನ್ನು ತಡೆಗಟ್ಟಲು ತಾವು ಕೂಡಲೇ ಬಿಗಿಯಾದ ಕ್ರಮವನ್ನು ತೆಗೆದುಕೊಂಡು, ಅದನ್ನು ಸರಿಪಡಿಸಿ, ಅವರಲ್ಲಿ ಬರತಕ್ಕ ತೆರಿಗೆ ಹಣ ಸರ್ಕಾರದ ಖಜಾನೆಗೆ ಸರಿಯಾದ ರೀತಿಯಲ್ಲಿ ತಲುಪುವಂತೆ ತಾವು ಕೂಡಲೇ ಮಾಡಬೇಕು ಎಂದು ನಾನು ಈ ಮೂಲಕವಾಗಿ ಕೇಳಿಕೊಳ್ಳುತ್ತೇನೆ. ಮತ್ತು ಸರ್ವೇಸಾಮಾನ್ಯವಾಗಿ ಹೆಚ್ಚು ಜನ ಉಪಯೋಗಿಸತಕ್ಕ ಸಣ್ಣ ಸಣ್ಣ ಬಡ ಜನತೆ ಉಪಯೋಗಿಸತಕ್ಕ ಅನೇಕ ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕಿರುತ್ತೀರಿ. ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕಿದ್ದೀರಿ. ಈಗಾಗಲೇ ಒಂದೆರಡು ಪದಾರ್ಥಗಳ ಮೇಲೆ ತೆರಿಗೆಯನ್ನು ತೆಗೆದ್ದೀರಿ. ಆದರೆ ಇನ್ನೂ ಒಂದೆರಡು ಪದಾರ್ಥಗಳ ಮೇಲೆ ಹಾಕಿರುವ ತೆಗೆಯಬೇಕು. ಉದಾರಣೆಗಾಗಿ ಒಂದು ಅಂಶವನ್ನು ತಿಳಿಯಪಡಿಸುತ್ತೇನೆ. ಹೆಣ್ಣು ಮಕ್ಕಳು ಹಾಕಿಕೊಳ್ಳತಕ್ಕ ಪ್ಲಾಸ್ಟಿಕ್ಸ್ ಬ್ಯಾಂಗಲ್ಸ್ ಮೇಲೆ ತೆರಿಗೆಯನ್ನು ಹಾಕಿದ್ದೀರಿ. ನೆರೆ ರಾಜ್ಯವಾದ ತಮಿಳುನಾಡು ಸರ್ಕಾರದಲ್ಲಿ ಈ ತೆರಿಗೆಯನ್ನು ಮನ್ನಾ ಮಾಡಿದ್ದಾರೆ. ಈ ತೆರಿಗೆ ಹಾಕಿರುವುದರಿಂದ ಬಳೆ ಮಾಡತಕ್ಕ ಉದ್ಯಮಕ್ಕೆ ಬಹಳ ಪೆಟ್ಟು ಬೀಳುತ್ತದೆ.

ಶ್ರೀ ಎಂ. ವೈ ಘೋರ್ಪಡೆ.—ಗ್ಲಾಸ್ ಬ್ಯಾಂಗಲ್ಸ್ ಮೇಲೆ ತೆರಿಗೆ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಪ್ಲಾಸ್ಟಿಕ್ ಬ್ಯಾಂಗಲ್ಸ್ ಮೇಲೆ ತೆರಿಗೆ ಇದೆ. ತಮಿಳುನಾಡಿನಲ್ಲಿ ಎಕ್ಸಂಪಷನ್ ಮಾಡಿದ್ದಾರೆ ಒಂದು ಇಂಡಸ್ಟ್ರಿ ಮೇಲೆ ಎಫೆಕ್ಟಾಗುವುದು, ಮತ್ತೊಂದು ಸ್ಮಾಲ್ ಟ್ರೇಡರ್ಸ್, ಕನ್‌ಸ್ಯೂಮರ್ಸ್‌ಗೆ ಡಿಫಿಷಿಯನ್ಸಿ ಆಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಗ್ಲಾಸ್ ಬ್ಯಾಂಗಲ್ಸ್ ಮೇಲೆ ತೆರಿಗೆ ಇಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಈ ತರಹ ಸಣ್ಣ ಸಣ್ಣ ಕೈಗಾರಿಕೋದ್ಯಮಿಗಳಿಗೆ ತೊಂದರೆಯಾಗತಕ್ಕ ಅನೇಕ ವಿಧವಾದ ತೆರಿಗೆಯನ್ನು ಹಾಕಿರುವುದರಿಂದ, ಈ ತೆರಿಗೆಯನ್ನು ಕೂಡಲೇ ರದ್ದು ಮಾಡಿ, ಕೈಗಾರಿಕೆಗಳನ್ನು ಹೆಚ್ಚು ಬೆಳೆಸುವ ಮುಖಾಂತರ ಸರ್ವಜನಿಕರಿಗೆ ಅನುಕೂಲವನ್ನು ಮಾಡಿಕೊಡುತ್ತೀರಿ ಎಂದು ನಾನಾದರೂ ಭಾವಿಸಿದ್ದೇನೆ. ಮತ್ತು ತಾವು ಸ್ಮಾಲ್ ಸೇವಿಂಗ್ಸ್ ಬಗ್ಗೆ ಹೇಳಿದ್ದೀರಿ. ಜನತೆಯನ್ನು ಹಿಂಸೆಮಾಡಿ ವಸೂಲು ಮಾಡತಕ್ಕಂಥಾದ್ದು ಈ ಇಲಾಖೆ. ಸನ್ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುವುದೇನೆಂದರೆ, ಗ್ರಾಮಾಂತರ ಪ್ರದೇಶದಲ್ಲಿ ಸ್ಮಾಲ್ ಸೇವಿಂಗ್ಸ್

ಸ್ಕೀಮನ್ನು ತಂದಿದ್ದೀರಿ, ಬಹಳ ಸಂತೋಷ. ಇದರ ಬಗ್ಗೆ ಆಕ್ಷೇಪಣೆ ಇಲ್ಲ. ಬಹಳ ಪ್ರೋಗ್ರೆಸಿವಾಗಿ ಕಲೆಕ್ಷನ್ ಮಾಡುತ್ತಿದ್ದಾರೆ. ದೇಶಕ್ಕೋಸ್ಕರ ಸ್ಮಾಲ್ ಸೇವಿಂಗ್ಸ್‌ನ್ನು ಹೆಚ್ಚಾಗಿ ಪಡೆಯುತ್ತಿದ್ದಾರೆ. ಆದರೆ ಕೊಟ್ಟಿರತಕ್ಕವರು ಗ್ರಾಮಾಂತರ ಪ್ರದೇಶದ ಜನ. ಗ್ರಾಮಾಂತರ ಪ್ರದೇಶದ ಬಡ ಜನತೆಯ ಮೇಲೆ ಒತ್ತಾಯ ಹೇರಿ, ಅವರಿಂದ ಬಿಗಿಮುಷ್ಟಿಯಿಂದ ವಸೂಲು ಮಾಡುತ್ತಿದ್ದಾರೆ. ಇಂತಹ ಅನೇಕ ನಿದರ್ಶನಗಳನ್ನು ನಾನೇ ಕೊಡುತ್ತೇನೆ. ಉದಾಹರಣೆಗೆ ತಾಲ್ಲೂಕು ಆಫೀಸಿನಲ್ಲಿ 5 ಮೂಟೆ ಸಿಮೆಂಟ್ ಬೇಕು ಎಂದು ಎಂದರೆ, 50 ರೂಪಾಯಿ ನ್ಯಾಷನಲ್ ಸೇವಿಂಗ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಹಣವನ್ನೇನೋ ಸರ್ಕಾರ ಆಮೇಲೆ ವಾಪಸ್ ಕೊಡುತ್ತದೆ. 5 ಮೂಟೆ ಸಿಮೆಂಟ್ ತೆಗೆದುಕೊಳ್ಳಲು ದುಡ್ಡು ಇಲ್ಲದಿರುವವನ್ನು 50 ರೂಪಾಯಿ ಡಿಪಾಸಿಟ್ ಮಾಡುವುದಕ್ಕೆ ಹೇಗೆ ಆಗುತ್ತದೆ ? ಗೊಬ್ಬರ ಕೇಳುವುದಕ್ಕೆ ಹೋದರೆ, ಒಂದು ಮೂಟೆಗೆ 10 ರೂಪಾಯಿ ನ್ಯಾಷನಲ್ ಸೇವಿಂಗ್ಸ್ ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ಅವನ ಹತ್ತಿರ ಹಣ ಇರುವುದಿಲ್ಲ. ಸೇವಿಂಗ್ಸ್ ಮಾಡುವುದಕ್ಕೆ ಶಕ್ತಿ ಇಲ್ಲ. ಅಂಥವರಿಂದ ವಸೂಲು ಮಾಡುವುದು ಬೇಡ. ತಮಗೆ ಗೊತ್ತಿದೆ, ಬಂಡವಾಳಗಾರರು ಇದ್ದಾರೆ, ವ್ಯಾಪಾರ ಮಾಡತಕ್ಕವರು ಇದ್ದಾರೆ. 2000, 3000 ರೂಪಾಯಿ ಸಂಬಳ ಪಡೆಯುತಕ್ಕ ಅಧಿಕಾರಿಗಳಿದ್ದಾರೆ. ತಾವು ಒಂದು ಕಾನೂನು ಮಾಡಿ ಇಷ್ಟಿಷ್ಟು ವರಮಾನ ಬರತಕ್ಕವರು ಇಷ್ಟು ನ್ಯಾಷನಲ್ ಸೇವಿಂಗ್ಸ್ ತೆಗೆದುಕೊಳ್ಳಬೇಕು ಎಂದು ಹೇಳಿ. ದೇಶಕ್ಕೋಸ್ಕರ ಹಣವನ್ನು ಮುಡುಪಾಗಿಡಬೇಕು ಎಂದು ಹೇಳಿ ; ಅದನ್ನು ಬಿಟ್ಟು ಹಳ್ಳಿಗಳಲ್ಲಿ ರೈತರ ಹತ್ತಿರ ಹಣವಿಲ್ಲದೇ ಹೋದರೂ ಬಲಾತ್ಕಾರವಾಗಿ ವಸೂಲು ಮಾಡತಕ್ಕ ಒಂದು ಅವಕಾಶವನ್ನು ಮಾಡಿಕೊಡಬೇಡಿ ಎಂದು ಈ ಮೂಲಕ ಕೇಳಿಕೊಳ್ಳುತ್ತೇನೆ ಈಗ ಒಂದು ಪರ್ಸೆಂಟ್ ಟ್ಯಾಕ್ಸ್ ಹೆಚ್ಚು ಮಾಡಿದ್ದೀರಿ. ಉದಾಹರಣೆಗೆ ಹೇಳುವುದಾದರೆ ತಿಪಟೂರಿನ ರೆಗ್ಯುಲೇಟೆಡ್ ಮಾರ್ಕೆಟ್‌ನವರು ಒಂದು ಪರ್ಸೆಂಟ್ ಟ್ಯಾಕ್ಸ್ ವಸೂಲು ಮಾಡುತ್ತಾರೆ. ಅವರಿಗೆ 10 ಲಕ್ಷ ರೂಪಾಯಿ ವರಮಾನ ಬರುತ್ತದೆ. ಅಂಥ ಕಡೆ ಸೂಚನೆ ಕೊಡಿ. ಅಲ್ಲಿಗೆ ಬರತಕ್ಕವರಿಗೆ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು ಎಂದು ಹೇಳಿ. ತಮ್ಮಲ್ಲಿ ಹೆಚ್ಚು ಹೆಚ್ಚು ರೆಗುಲೇಟೆಡ್ ಮಾರ್ಕೆಟುಗಳು ಇವೆ. ಸರ್ಕಾರಿ ಸಂಸ್ಥೆಗಳು ಇವೆ. ಅಲ್ಲಿ ಹೇಳಿ ದೇಶದ ಸಂಪತ್ತು ಇರಲಿ. ರೇಗೋಲೇಟೆಡ್ ಮಾರ್ಕೆಟ್‌ನಲ್ಲಿ ಅನೇಕ ವಿಧವಾದ ಸಣ್ಣಪುಟ್ಟ ವರ್ತಕರು ವ್ಯಾಪಾರ ಮಾಡುತ್ತಾರೆ. ಒಬ್ಬೊಬ್ಬ ರೈತ 25,000, 30,000 ವರಮಾನ ಬರತಕ್ಕವರು ಅನೇಕರು ಇದ್ದಾರೆ. ಅವರಿಂದ ಇಷ್ಟು ಪರ್ಸೆಂಟ್ ನ್ಯಾಷನಲ್ ಸೇವಿಂಗ್ಸ್ ತೆಗೆದುಕೊಳ್ಳಬೇಕು ಎಂದ ರೆಗ್ಯುಲೇಟೆಡ್ ಮಾರ್ಕೆಟ್‌ಗಳಿಗೆ ಆದೇಶ ಕೊಡಿ. ಇದರಿಂದ ನ್ಯಾಷನಲ್ ಸೇವಿಂಗ್ಸ್‌ಗೆ ಹೆಚ್ಚು ವರಮಾನ ಬರುತ್ತದೆ. ಇದನ್ನು ಮಾಡಬೇಕು ಎಂದು ನಾನಾದರೂ ಕೇಳಿಕೊಳ್ಳುತ್ತೇನೆ. ಮತ್ತು ಟ್ರೆಷರಿ ಡಿಪಾರ್ಟ್‌ಮೆಂಟ್ ಉನ್ನತಮಟ್ಟದಲ್ಲಿ ಸರಿಯಾಗಿ ಕೆಲಸಮಾಡಬೇಕು. ತಾಲ್ಲೂಕುಮಟ್ಟದಲ್ಲಿರುವ ಟ್ರೆಷರಿಗಳ ಅವಸ್ಥೆ ಹೇಳಿದರೆ ನಾಚಿಕೆಗೇಡು. ಟ್ರೆಷರಿಯಲ್ಲಿ ಬಿಲ್ ಆಗಲೀ, ಹಣವನ್ನಾಗಲೀ ತೆಗೆದುಕೊಳ್ಳುವುದಕ್ಕೆ ಹೋದಾಗ, ಅಲ್ಲಿ ಬಿಲ್ಲಿಗೆ ಇಷ್ಟು ಹಣ ಎಂದು ಇದೆ. ಅವನ್ನು ಕೊಡದೇ ಹೋದರೆ ಆ ಬಿಲ್, ಚೆಕ್ ಪಾಸಾಗುವುದಿಲ್ಲ. ಸರ್ವೇಸಾಮಾನ್ಯವಾಗಿ ತಾಲ್ಲೂಕುಮಟ್ಟದಲ್ಲಿರುವ ಟ್ರೆಷರಿಗಳಲ್ಲಿ ಸ್ವಾಭಾವಿಕವಾಗಿ ಒಳ್ಳೆಯ ನಡತೆಯಿಂದ, ಪ್ರಾಮಾಣಿಕತೆಯಿಂದ ಕೆಲಸಮಾಡತಕ್ಕ, ಜವಾಬ್ದಾರಿಯಿಂದ ಕೆಲಸಮಾಡತಕ್ಕ ಒಂದು ಅವಕಾಶವನ್ನು ನೀವು ಮಾಡಿಕೊಟ್ಟು ಅಲ್ಲಿ ನಡೆಯುತಕ್ಕ ಅನ್ಯಾಯಗಳನ್ನು, ಭ್ರಷ್ಟಾಚಾರಗಳನ್ನು ತೆಗೆದುಹಾಕುತ್ತೀರಿ ಎಂದು ನಾನಾದರೂ ನಂಬಿದ್ದೇನೆ. ಮತ್ತು ಸ್ಟೇಟ್ ಲಾಟರಿ ವಿಚಾರ. 1969-70 ರಲ್ಲಿ 110 ಲಕ್ಷ ರೂಪಾಯಿಗಳ ವರಮಾನ ತಂದುಕೊಟ್ಟಿತು. ಈಗ ಕೇವಲ 74 ಲಕ್ಷ ರೂಪಾಯಿಗಳ ವರಮಾನ ಬರುತ್ತದೆ. ಇದಕ್ಕೆ ಕಾರಣ ತಾವು ಬರೆದಿದ್ದೀರಿ. ಇದಕ್ಕೆ ಹಾಕಿರತಕ್ಕ ಆದಾಯ ತೆರಿಗೆ ಕಡಿಮೆಯಾಗಿದೆಂದು ಹೇಳುತ್ತೀರಿ. ಯಾವುದಾದರು ಒಂದನ್ನು ಶುರು ಮಾಡಿದಾಗ, ಒಂದೇ ಸಾರಿಗೆ ಲಕ್ಷಾಧೀಶ್ವರರು ಆಗಬೇಕೆಂಬ ಆಶೆಯಿಂದ ಲಾಟರಿಯನ್ನು ತೆಗೆದುಕೊಳ್ಳುತ್ತಾರೆ. ದಯವಿಟ್ಟು ಈ ಲಾಟರಿ ಸ್ಕೀಮನ್ನು ತೆಗೆದುಬಿಡಿ, ಈಗ ಆದರಿಂದ ಬರತಕ್ಕ ವರಮಾನವೂ ಕಡಿಮೆಯಾಗುತ್ತಿದೆ. ಇದರಿಂದ ನಿಮಗೂ ದೊಡ್ಡಗಾತ್ರದ ಹಣ ಬರುವುದಿಲ್ಲ. ತೀರ ದರಿದ್ರರು ಬಡವರು ಒಂದು ರೂಪಾಯಿ, ಎಂಟು ಆಣೆ ಇಟ್ಟುಕೊಂಡಿರುವ ಹುಡುಗರು ಮಕ್ಕಳು, ಹೆಂಗಸರು ಸಾಮಾನ್ಯವಾಗಿ ಆಪದ್ಧನೆಕ್ಕೆಂದು ಇಟ್ಟಿದ್ದ ಹಣವನ್ನು ಲಾಟರಿಗೆ ಹಾಕುತ್ತಾರೆ. ಆದರೆ ಅವರೇ ಲಾಟ್ರಿ ಹೊಡೆಯುತ್ತಾರೆ. ಈ ಪರಿಸ್ಥಿತಿ ಆಗಬಾರದು ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ, ದಯವಿಟ್ಟು ಈ ಲಾಟರಿ ಪದ್ಧತಿಯನ್ನು ಗೆದುಬಿಡಿ. ಕೆಲವರಿಗೆ ಲಾಟ್ರಿಯಲ್ಲಿ ಗೆದ್ದವರಿಗೆ ಚೆಕ್ಕು ಕೊಟ್ಟಿದ್ದೀರಿ, ಅದು ಸಹ ಲಾಟರಿ ಯಾಗಿದೆ. ಪ್ರೈಜ್ ಬಂದಿದ್ದರೂ ಸಹ ಟ್ರಜರಿಯಲ್ಲಿ ಹಣವಿಲ್ಲದೆ ದುಡ್ಡು ಕೊಡದೇ ಇರತಕ್ಕಂಥ ಒಂದೆರಡು ಸಂದರ್ಭಗಳು ಆಗಿವೆ. ಅವಕೋಸ್ಕರ ಪ್ರೈಜ್ ಬಂದವರಿಗೆ ಹಣ ಸಿಗದೇ ಹೋದರೆ ಅದನ್ನು ತೆಗೆದುಕೊಂಡರೆ ಏನು ಪ್ರಯೋಜನ ?

ಶ್ರೀ ಎಚ್. ಡಿ. ದೇವೇಗೌಡ.—ಪ್ರೈಜ್ ಬಂದವರಿಗೆ ಚೆಕ್ಕ ಕೊಟ್ಟಿದ್ದೀರಿ, ಅದು ಟ್ರಜರಿಗೆ ಹೋಗಿ ನಾಲ್ಕು ಸಾರ್ತಿ ವಾಪಸ್ಸು ಬಂದಿದೆ. If you want instances, I can give a dozen such instances.

Sri M. Y. GHORPADE.—If you point out the instances where the persons have not received the amount, I shall look into them.

Sri D. V. DEVE GOWDA.—I can quote more than half a dozen instances.

Sri M. Y. GHORPADE.—If you bring it to my notice, I shall certainly do the needful in the matter.

ಶ್ರೀ ಟಿ. ಎಂ. ಮಂಜುನಾಥ್.—ಈ ಒಂದು ಬಡವರ ಶೋಷಣೆ ಮಾಡತಕ್ಕಂಥ ಲಾಟರಿ ಸಿಸ್ಟಂ ಏನು ಇದೆ ಅದನ್ನು ದಯವಿಟ್ಟು ಕೂಡಲೇ ರದ್ದುಪಡಿಸಬೇಕೆಂದು ಹೇಳುತ್ತೇನೆ.

ಇನ್ನು Pension and other Retirement benefits ಬಗ್ಗೆ ಹೇಳುವುದಾದರೆ, ಅವರು ಪೆನ್‌ಷನ್ ಪಡೆಯಬೇಕಾದರೆ ಬಹಳ ಕಷ್ಟ ಪಡಬೇಕಾಗುತ್ತದೆ. ಸರಿಯಾದ ರೀತಿ ಹಣವನ್ನು ಕೊಡುವುದಿಲ್ಲ. ಅದನ್ನು ಪಡೆಯುವುದಕ್ಕೆ ಅವರು ಗಂಟೆಗಟ್ಟಲೆ ನಿಲ್ಲಬೇಕಾಗುತ್ತದೆ. ಇಂಥ ಒಂದು ಪರಿಸ್ಥಿತಿ ಪೆನ್‌ಷನ್‌ದಾರರಿಗೆ ಇದೆ, ಇದನ್ನು ದಯವಿಟ್ಟು ತಪ್ಪಿಸಬೇಕೆಂದು ಹೇಳುತ್ತೇನೆ,

ಇನ್ನು ಇನ್‌ಫರ್ಮೇಷನ್ ಅಂಡ್ ಪಬ್ಲಿಸಿಟಿ ವಿಷಯ ಹೇಳುವುದಾದರೆ. ಸ್ವಾಮಿ ತಮಗೆಲ್ಲಾ ಗೊತ್ತಿರುವ ಹಾಗೆ ಇನ್‌ಫರ್ಮೇಷನ್ ಮತ್ತು ಪಬ್ಲಿಸಿಟಿ ದೇಶಕ್ಕೆ ಬಹಳ ಪ್ರಾಮುಖ್ಯವಾದಂಥದ್ದು. ಈ ಇನ್‌ಫರ್ಮೇಷನ್ ಮತ್ತು ಪಬ್ಲಿಸಿಟಿಯಿಂದ ನಾವು ಪ್ರಪಂಚದಲ್ಲಿ ಹೊರಗಡೆ ನೋಡಿದಾಗ ಈ ಇಲಾಖೆಯಿಂದ ನಮ್ಮ ದೇಶಕ್ಕೆ ರಾಜ್ಯಕ್ಕೆ ಒಂದು ಸಂಪತ್ತನ್ನು ಗಳಿಸತಕ್ಕಂಥ ಸಂಸ್ಥೆಯಾಗಿ ಅದು ಪರಿಣಮಿಸಬೇಕು. ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ನಿಮಗೆ ಸಂಬಂಧಪಟ್ಟದ್ದು. ನಿಮ್ಮ ಕಾಲದಲ್ಲಿ ನಿಮ್ಮ ಸಂಸ್ಥೆಯನ್ನು ನೋಡಿದರೆ ಅದು ಅಷ್ಟು ಜನಸಾಮಾನ್ಯರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಹಿಂದೆ ಟೂರಿಜಂ ಮತ್ತು ಇನ್‌ಫರ್ಮೇಷನ್ ಇವೆರಡೂ ಒಂದೇ ಇಲಾಖೆಯಾಗಿತ್ತು. ಇವೆರಡನ್ನೂ ಒಬ್ಬರೇ ನೋಡುತ್ತಿದ್ದರು. ತಾವು ಬಂದಮೇಲೆ ಅದನ್ನು ಇಬ್ಭಾಗ ಮಾಡಿದಿರಿ, ಅದಕ್ಕೆ ಒಬ್ಬರು ಚೇರ್ಮನ್ನರು ಎನ್ನತಕ್ಕ ವ್ಯವಸ್ಥೆ ಮಾಡಿದಿರಿ ಇದರ ಔಚಿತ್ಯವಾದರೂ ಏನು ? ಸರ್ಕಾರದಲ್ಲಿ ಹಣವಿಲ್ಲವೆಂದು ಹೇಳುವಾಗ ಜನತೆಯ ಮೇಲೆ ಹೊರಲಾರದಂಥ ಹೊರೆಯನ್ನು ಹಾಕಿ ಅನೇಕ ಕಾರ್ಪೊರೇಷನ್‌ಗಳನ್ನು ಮಾಡಿದಿರಿ, ಅನೇಕ ಕಮಿಟಿಗಳನ್ನು ಮಾಡಿದ್ದೀರಿ. ಇದರ ಔಚಿತ್ಯವಾದರೂ ಏನು ? ಹಿಂದಿನಿಂದ ಅವರು ಕೆಲಸ ಮಾಡಿಕೊಂಡು ಬಂದಿರಲಿಲ್ಲವೆ ? ಕಮಿಟಿಗಳು ಒಂದಲ್ಲ, ಎರಡು ಅಲ್ಲ 58 ಕಮಿಟಿಗಳನ್ನು ಮಾಡಿದ್ದೀರಿ. ಇದಕ್ಕೆ ಎಷ್ಟೊಂದು ಹಣ ಖರ್ಚಾಗುತ್ತಿದೆ, ಇಂಥ ಕಮಿಟಿಗಳನ್ನು ಮಾಡುವುದರಿಂದ ಯಾವ ಒಂದು ಪುರುಷಾರ್ಥವನ್ನು ಸಾಧನೆ ಮಾಡಿದ್ದೀರಿ ? ಇನ್‌ಫರ್ಮೇಷನ್ ಅಂಡ್ ಟೂರಿಜಂ ಎರಡು ಭಾಗವನ್ನಾಗಿ ಮಾಡಿದ್ದೀರಿ, ಒಂದೇ ಆಗಿದ್ದರೆ ಕೆಲಸ ಮಾಡುವುದಕ್ಕೆ ಆಗುತ್ತಿರಲಿಲ್ಲವೆ. ನಿಮ್ಮ ಹಿಂಬಾಲಕರಿಗೆ ಕೆಲಸ ಕೊಡಬೇಕು ಅವರನ್ನು ಚೇರ್ಮನ್ನಾಗಿ ಮಾಡಬೇಕು ಅವರನ್ನು ಪ್ರೆಸಿಡೆಂಟ್ ಆಗಿ ಮಾಡಬೇಕು ಎನ್ನುವ ಉದ್ದೇಶದಿಂದ ಒಂದೊಂದು ಕಾರ್ಪೊರೇಷನ್‌ಗಳನ್ನು ಮಾಡುತ್ತಾ ಹೋಗುದ್ದೀರಿ. ಈ ರೀತಿ ಮಾಡುತ್ತಾ ಹೋದರೆ ನಿಮ್ಮ ಕೆಲಸಗಳು ಪ್ರಗತಿದಾಯಕವಾಗಿ ನಡೆಯುವುದಿಲ್ಲ ಹಾಗೂ ನಿಮ್ಮ ಮೇಲೆ ನಂಬಿಕೆಯಾಗುವುದಿಲ್ಲ ತಮಗೆ ನಂಬಿಕೆ ಇದ್ದರೆ ಪುನ: ಮೊದಲಿದ್ದ ರೀತಿಯಲ್ಲಿಯೇ ಇರುವಂತೆ ವ್ಯವಸ್ಥೆ ಮಾಡುತ್ತೀರೀ ಇನ್‌ಫರ್ಮೇಷನ್ ಅಂಡ್ ಟೂರಿಜಂನಲ್ಲಿಯ ಕ್ಷೇತ್ರದಲ್ಲಿ ಸರ್ವಸಾಮಾನ್ಯವಾಗಿ ಎಕ್ಸ್‌ಪರ್ಟ್ಸ್ ಇದ್ದಾರೆ, ತತ್ವಜ್ಞಾನಿ ಇದ್ದಾರೆ, ಯಾರು ಜನತೆಗೆ ಸಲಹೆಯನ್ನು ಕೊಡತಕ್ಕಂಥ ವ್ಯಕ್ತಿ ಇದ್ದಾರೆಯೋ ಅವರ ಮುಖಾಂತರ ದೇಶದ ಕಲ್ಯಾಣಕ್ಕೋಸ್ಕರ ಪ್ರಚಾರಂಗದಲ್ಲಿ ಮಾಡಬೇಕಾದದ್ದು ಅವಶ್ಯವಿದೆ. ಡಾ: ನಟರಾಜ್‌ರವರು ಹೇಳಿರತಕ್ಕಂಥ ಅಮೃತವಾಣಿ ಇನ್‌ಫರ್ಮೇಷನ್ ಅಂಡ್ ಟೂರಿಜಂ ಮೂಲಕ ಹೋಗುತ್ತದೆ ? ಅವರು ಯಾರು ? ಅವರು ಹೇಳಿರತಕ್ಕ ವಾಣಿ ಇನ್‌ಫರ್ಮೇಷನ್ನಿನಿಂದ ಬ್ರಾಡ್‌ಕ್ಯಾಸ್ಟ್ ಆಗುತ್ತದೆ. ದೇಶದಲ್ಲಿ ದೊಡ್ಡ ದೊಡ್ಡ ನಾಯಕರು ಯಾರಿದ್ದಾರೆ ಅವರು ರೇಡಿಯೋವಿನಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ. ದೊಡ್ಡ ದೊಡ್ಡ ನಾಯಕರುಗಳು ದೇಶಕ್ಕೋಸ್ಕರ ತ್ಯಾಗ ಮಾಡಿದ್ದಾರೆ, ಅಂಥದರಲ್ಲಿ ಡಾ : ನಟರಾಜ್‌ರವರು ಯಾವ ದೇಶಕ್ಕಾಗಿ ತ್ಯಾಗ ಮಾಡಿದ್ದಾರೆ ? ಯಾವ ದೇಶಕ್ಕಾಗಿ ಸೇವೆಯನ್ನು ಮಾಡಿದ್ದಾರೆ ? ಎಷ್ಟರಮಟ್ಟಿಗೆ ದೇಶ ಸೇವೆಯನ್ನು ಸಲ್ಲಿಸಿದ್ದಾರೆ ? ಯಾವ ಆದರ್ಶ ತತ್ವಗಳನ್ನು ಇಟ್ಟುಕೊಂಡಿದ್ದಾರೆ ? ಅವರು

ಹೋಗಿ ರೇಡಿಯೋವಿನಲ್ಲಿ ಸಂದೇಶ ಕೊಡುವುದು. ನಾಚಿಗೆಗೇಡು ನಾನಾ ತರಹದಿಂದ ಸರ್ಕಾರದವರು ಜನರಿಂದ ತೆರಿಗೆಯನ್ನು ವಸೂಲಿ ಮಾಡಿ ಈ ಈ ರೀತಿ ದುರುಪಯೋಗ ಮಾಡತಕ್ಕದ್ದು ಎಷ್ಟರಮಟ್ಟಿಗೆ ನಾಚಿಗೆ ಗೇಡು ಎಂಬುದನ್ನು ಯೋಚನೆ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಅವರು ಸಾತ್ ಇಂಡಿಯಾ. ಇಂದಿರಾ ಬ್ರಿಗೇಡ್‌ನ ನಾಯಕರು ಅಲ್ಲವೇ ?

ಶ್ರೀ ಟಿ. ಎಂ. ಮಂಜುನಾಥ್.—ಇವತ್ತು ದೇಶವಲ್ಲಿ ಸಾರ್ವಜನಿಕರ ಹಣವನ್ನು ಕೊಳ್ಳೆ ಹೊಡೆಯುತ್ತಿದ್ದೀರಿ ಎಂದು ಹೇಳುತ್ತೇನೆ. ಮಾನ್ಯ ಆರ್ಥಿಕ ಮಂತ್ರಿಗಳು ಇಂಥದ್ದಕ್ಕೆ ಹಣವನ್ನು ಕೊಡುತ್ತಾ ಇದ್ದಾರೆ, ಈ ರೀತಿ ಕೊಡಲು ಅವರಿಗೆ ಯಾವ ರೀತಿ ಮನಸ್ಸು ಬಂತೋ ಗೊತ್ತಾಗುವುದಿಲ್ಲ. ಇವತ್ತು ಇನ್‌ಫರ್ಮೇಷನ್ ಅಂಡ್ ಟೂರಿಜಂ ಯಾವ ರೀತಿ ಕೆಲಸ ಮಾಡಬೇಕು ಎಂದರೆ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಲ್ಲಿಯ ಜನತೆಯ ಸಮಸ್ಯೆಗಳನ್ನು ಅರಿತು...

ಶ್ರೀ ಎಚ್. ಡಿ. ದೇವೇಗೌಡ.—ನಟರಾಜ್‌ರವರು ಪ್ರೆಸ್ ಸ್ಟೇಟ್‌ಮೆಂಟನ್ನು ರಿಲೀಜ್ ಮಾಡಿದರೆ ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟಿನಿಂದ ಪ್ರೆಸ್‌ಗೆ ಸರ್ಕ್ಯುಲೇಟ್ ಆಗಿ ಪಬ್ಲಿಕೇಷನ್‌ಗೆ ಹೋಗುತ್ತದೆ. ಅದೇ ಅಪೋಜಿಷನ್ ಲೀಡರ್ ಕಳುಹಿಸಿದರೆ ಹೋಗುವುದಿಲ್ಲ. ಫೈನಾನ್ಸ್ ಮಿನಿಸ್ಟರ್‌ರವರು ಹೇಳಬೇಕು, ಅವರು ಪ್ರೆಸ್ ಸ್ಟೇಟ್‌ಮೆಂಟನ್ನು ಕೊಟ್ಟರೆ ಅದು ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟಿಗೆ ಹೋಗಿ ಎಲ್ಲಾ ಪತ್ರಿಕೆಗಳಿಗೆ ಹಂಚುತ್ತಾರೆಯೋ ಇಲ್ಲವೇ ? ಇದು ನಾಚಿಗೆ ಗೇಡು, ಇದನ್ನು ಸರ್ಕಾರವೆಂದು ಕರೆಯುವುದೇ ?

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ ಈ ಇನ್‌ಫರ್ಮೇಷನ್ ಅಂಡ್ ಟೂರಿಜಂ ಮಾಡತಕ್ಕಂಥ ಕರ್ತವ್ಯಗಳು ಏನು ಎಂಬುದನ್ನು ಬಹುಶ ನಿಮಗೆ ವೈಯಕ್ತಿಕವಾಗಿ ಹೇಳುವುದಾದರೆ ಅದರಿಂದ ತಪ್ಪಾಗಲಾರದು ಎಂದು ಅಂದುಕೊಂಡಿದ್ದೇನೆ. ನಾನು ಚಲನಚಿತ್ರವನ್ನು ನೋಡುವುದೇ ಬಹಳ ಅಪರೂಪ. ನಾನು ಮೊನ್ನೆ ಒಂದು ಚಲನಚಿತ್ರಕ್ಕೆ ಹೋಗಿದ್ದಾಗ, ಆ ಚಿತ್ರದಲ್ಲಿ ನಮ್ಮ ಮುಖ್ಯಮಂತ್ರಿಗಳು ದೇವಸ್ಥಾನಕ್ಕೆ ಹೋಗಿದ್ದು ಬಂತು ತಮ್ಮದು ಚಿತ್ರ ಇತ್ತು. ಸ್ವಾಮಿ ದೇಶದಲ್ಲಿ ಇದಕ್ಕಿಂತ ಆಗತಕ್ಕ ಒಳ್ಳೆಯ ಕಲಸಗಳು ಎಷ್ಟೋ ಇವೆ. ಜನತೆಯ ಕಣ್ಣಿಗೆ ಇಲಾಖೆಯು ಮಾಡತಕ್ಕ ಕೆಲಸಗಳನ್ನು ತೋರಿಸಿ, ಇವತ್ತು ದೇಶದಲ್ಲಿ ದೊಡ್ಡ ದೊಡ್ಡ ಧಾರ್ಮಿಕ ಕೆಲಸಗಳು ಕಾಮಗಾರಿಗಳು ನಡೆಯುತ್ತಿವೆ. ಅವನ್ನು ಜನತೆಗೆ ತೋರಿಸಿ.

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ಉದ್ಘಾಟನೆ ಮಾಡುವವರು ಮುಖ್ಯಮಂತ್ರಿಗಳು ಫೈನಾನ್ಸ್ ಮಿನಿಸ್ಟರ್‌ರವರ ಫೋಟೋವನ್ನು ಏತಕ್ಕೆ ತೋರಿಸಬೇಕು ? ಹೀಗೆ ಮಾಡುತ್ತೀರಿ ಎಂದು ನಂಬಿರಲಿಲ್ಲ.

ಶ್ರೀ ಎಂ. ವೈ ಘೋರ್ಪಡೆ.—ಮುಖ್ಯವಾದ ಕೆಲಸ ನಡೆಯುತ್ತಿವೆ, ಬಹಳ ಮುಖ್ಯವಾದದ್ದು ನಾರಿಹಳ್ಳಿಯಲ್ಲಿ ಸ್ನಾಕೋಸ್ತುರ ಕೇಂದ್ರ ಮಾಡುವ ಒಳ್ಳೆಯ ಉದ್ದೇಶವಿದೆ. ಅಲ್ಲಿ ಏನು ಅಭಿವೃದ್ಧಿ ಕೆಲಸ ನಡೆಯುತ್ತಿದೆ ಎನ್ನುವುದನ್ನು ತೋರಿಸಿದೆ.

ಶ್ರೀ ಎಚ್. ಡಿ. ದೇವೇಗೌಡ.—ಕರ್ನಾಟಕದಲ್ಲಿ ನಡೆಯುತ್ತಿರುವ ಮೇಜರ್ ಇರಿಗೇಷನ್, ಮೀಡಿಯಂ ಇರಿಗೇಷನ್ ಪ್ರಾಜಕ್ಟಗಿಂತ ನಾರಿಹಳ್ಳದ ಕೆಲಸ ಬಹಳ ಚಿಕ್ಕದ್ದು. ಅದು ಬಹಳ ಚಿಕ್ಕ ಪ್ರಾಜೆಕ್ಟ್. ಡಾಕ್ಯುಮೆಂಟರಿ ಫಿಲಂನಲ್ಲಿ ಮುಖ್ಯಮಂತ್ರಿಗಳದು 12ನಿಮಿಷ, ನಿಮ್ಮದು 9ನಿಮಿಷ...

ಶ್ರೀ ಎಸ್. ಬಂಗಾರಪ್ಪ.—ದೇವಸ್ಥಾನಕ್ಕೆ ಹೋಗುವುದು, ಓಲಗ, ತಮಟ ಬಾರಿಸುವುದು, ಹೂವಿನ ಹಾರವನ್ನು ಹಾಕಿಕೊಳ್ಳುವುದು ಇದು ಎಲ್ಲಾ ರಾಜ್ಯ ಸರ್ಕಾರದ ನಾರಿಹಳ್ಳ ಪ್ಲಾನ್‌ನಲ್ಲಿ ಬರುತ್ತದೆಯೇ ?

ಶ್ರೀ ಎಂ. ವೈ ಘೋರ್ಪಡೆ.—ಗ್ರಾಮಾಂತರ ಪ್ರದೇಶದಲ್ಲಿ ಜನತೆಗೆ ಸಂತೋಷ ಆದಾಗ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಜನ ಊರು ಬಿಟ್ಟು ಹೋಗಿದ್ದಾರೇ, ನಿಮ್ಮ ಊರಿನಲ್ಲಿ ಮಾತ ಜನ ಸಂತೋಷದಿಂದ ಇದ್ದಾರೆ ಅವರ ಫಿಲಂ ತೆಗೆಸಿರಿ.

ನಿಮ್ಮ ಕಾರ್ಯಕ್ರಮದಲ್ಲಿ ಎಷ್ಟರಮಟ್ಟಿಗೆ ಜನತೆ ಕುಣಿದಾಡಿದರೋ ಅದೇ ರೀತಿ ದೇಶದಲ್ಲಿರತಕ್ಕಂಥ ವಿರೋಧಪಕ್ಷದ ನಾಯಕರ ಮತ್ತು ವಿರೋಧ ಪಕ್ಷದ ಸದಸ್ಯರ ಕಾರ್ಯಕ್ರಮದಲ್ಲಿ ಅದಕ್ಕಿಂತಲೂ ಹೆಚ್ಚಿನ ಸಂತೋಷದಿಂದ ತಮಟೆ ಹೊಡೆದು ಜನತೆ ಕುಣಿದಾಡಿದ್ದಾರೆ. ಆವಾಗ ನಿಮ್ಮ ಇನ್‌ಫರ್ಮೇಷನ್ ಅಂಡ್ ಟೂರಿಸಮ್ ಇಲಾಖೆ ಎಲ್ಲಿ ಹೋಗಿತ್ತು.

ಶ್ರೀ ಹೆಚ್. ಡಿ. ದೇವೇಗೌಡ.—ಅದು ಹೋಗಲಿ, ಮಾನ್ಯ ಹಣಕಾಸಿನ ಸಚಿವರ ಕ್ಷೇತ್ರದಲ್ಲೇ ಜಾರ್ಜ್ ಫೆರ್ನಾಂಡೀಸ್ ಬಂದಾಗ ರೈತರ ಚಳುವಳಿ ಏನು ನಡೆಯಿತು ಅದನ್ನು ಏತಕ್ಕೆ ತಗೆಯಲಿಲ್ಲ

ಶ್ರೀ ಟಿ. ಎಂ. ಮಂಜುನಾಥ್.—ಅದಕ್ಕೆ ಹೇಳುತ್ತೇನೆ. ಅನೇಕ ಸಂದರ್ಭಗಳಲ್ಲಿ ಜನತೆಯನ್ನು ಜಾಗೃತಪಡಿಸಬೇಕಾದರೆ ಮತ್ತು ಅವರನ್ನು ಎಚ್ಚರಪಡಿಸಬೇಕಾದುದು ಅದು ಎಲ್ಲರ ಕರ್ತವ್ಯ. ಆದರೆ ಅದಕ್ಕೆ ಸರಿಯಾದ ನ್ಯಾಯವನ್ನು ದೊರಕಿಸಿಕೊಡಬೇಕಾದುದು ಮತ್ತು ಅವರಿಗೆ ಸರಿಯಾದ ಒಂದು ವ್ಯವಸ್ಥೆ ಮಾಡಬೇಕಾದುದು ಜವಾಬ್ದಾರಿಯುತವಾದಂಥ ನಾಗರೀಕ ಸರ್ಕಾರದ ಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನೀವು ಈವೊತ್ತು ಅದನ್ನು ಮುಚ್ಚಿಟ್ಟಿದ್ದೀರಿ, ಆದರಿಂದ ಈವೊತ್ತು ಸಮಾಜಕ್ಕೆ ದ್ರೋಹ ಮಾಡುವರು ನಾವಲ್ಲ ಎಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಕಾರ್ಯೋನ್ಮುಖರಾಗಿ ಕೆಲಸ ಮಾಡಿಕೊಂಡು ಬಂದವರು ನೀವೊಬ್ಬರೇ ಅಲ್ಲ ವಿರೋಧಪಕ್ಷದ ಎಲ್ಲಾ ಸದಸ್ಯರೂ ಸಹ ಮಾಡಿದ್ದಾರೆ. ಅನೇಕ ಹಳ್ಳಿಗಳಲ್ಲಿ ನಿಮಗಿಂತ ಹೆಚ್ಚು ವಿಜೃಂಭಣೆಯಿಂದ ವಿರೋಧಪಕ್ಷದ ಸದಸ್ಯರು ಕೆಲಸಮಾಡಿಕೊಂಡು ಬಂದಿರುವ ದಾಖಲೆಗಳು ನಮ್ಮಲ್ಲಿ ದೊರೆತಿದೆ. ಇಂಥಾದ್ದನ್ನು ನಿಮ್ಮ ಇನ್‌ಫರ್ಮೇಷನ್ ಅಂಡ್ ಟೂರಿಸಮ್‌ನವರು ಏತಕ್ಕೆ ಬ್ರಾಡ್ ಕ್ಯಾಸ್ಟ್ ಮಾಡಲಿಲ್ಲ ಎಂದು ಕೇಳುತ್ತೇನೆ. ದೇಶಕ್ಕೆ ಈವೊತ್ತು ಬಹುಮುಖ್ಯವಾಗಿ ಬೇಕಾದಂಥ ಫ್ಯಾಮಿಲಿ ಪ್ಲಾನಿಂಗ್ ಸ್ಕೀಮ್ ಏನು ಇದೆ ಈ ಬಗ್ಗೆ ನಿಮ್ಮ ಇನ್‌ಫರ್ಮೇಷನ್ ಅಂಡ್ ಟೂರಿಸಮ್ ನವರು ಎಷ್ಟರಮಟ್ಟಿಗೆ ಕೆಲಸ ಮಾಡಿದ್ದಾರೆ ಎನ್ನುವುದನ್ನು ಕೇಳುತ್ತೇನೆ. ಏತಕ್ಕೆಂದರೆ ಈವೊತ್ತು ದೇಶದಲ್ಲಿ ಅನೇಕ ಕಡೆ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಹಾಕಿ ಜನತೆಯನ್ನು ಎಚ್ಚರಗೊಳಿಸುವಂಥ ಅನೇಕ ಕಾರ್ಯ ಚಟುವಟಿಕೆಗಳು ಸರ್ಕಾರದ ವತಿಯಿಂದಲೂ ಆಗಬೇಕು; ಸಾರ್ವಜನಿಕರ ವತಿಯಿಂದಲೂ ಆಗಬೇಕು. ಇಂಥಾದ್ದನ್ನು ನೀವು ಏತಕ್ಕೆ ಪ್ರಕಟಣೆ ಮಾಡಲಿಲ್ಲ ಎಂದು ಕೇಳ ಬಯಸುತ್ತೇನೆ.

ಶ್ರೀ ಹೆಚ್ ಡಿ ದೇವೇಗೌಡ—ಆ ವಿಚಾರದಲ್ಲಿ ಹೇಳುವುದಾದರೆ ನೀವು ಫ್ಯಾಮಿಲಿಪ್ಲಾನಿಂಗ್ ಬಗ್ಗೆ ಡಾಕ್ಯುಮೆಂಟರಿ ಫಿಲಂ ತೆಗೆದಿರುವುದನ್ನು ನಾನು ನೋಡಿದ್ದೇನೆ. ಆದರೆ ಸಾರ್ವಜನಿಕರಿಗಾಗಿ ಕೆಲಸ ಮಾಡಿದ ಪೇಜಾವರ ಮಠದ ಸ್ವಾಮಿಗಳು ಅನೇಕ ಕಡೆ ಗಂಜೀ ಕೇಂದ್ರಗಳನ್ನು ತೆರೆದು ಏನೊಂದು ಕೆಲಸ ಮಾಡಿದರೋ ಆ ಬಗ್ಗೆ ಒಂದು ಡಾಕ್ಯುಮೆಂಟರಿ ಫಿಲಂ ಕೂಡ ಬರುವುದಿಲ್ಲ ಮತ್ತು ಅದೇರೀತಿ ಕೆಲವು ರೋಟರಿ ಕ್ಲಬ್‌ಗಳು ಕೆಲವಾರು ಕಡೆ ಏನು ಒಳ್ಳೆಯ ಕೆಲಸ ಮಾಡುತ್ತಾರೆ ಆ ಬಗ್ಗೆ ಡಾಕ್ಯುಮೆಂಟರಿ ಫಿಲಂ ಬರುವುದಿಲ್ಲ. ಈವೊತ್ತು ಬರುವಂಥ ಡಾಕ್ಯುಮೆಂಟರಿ ಫಿಲಂಗಳು ಹಣಕಾಸಿನ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳದು. ಇವರ ಡಾಕ್ಯುಮೆಂಟರಿ ಫಿಲಂ ಬರಬೇಕು. ಹಾಗಾದರೆ ಪೇಜಾವರ ಮಠದ ಸ್ವಾಮಿಗಳು ಮಾಡುವಂಥ ಕೆಲಸ ಸಾರ್ವಜನಿಕರ ಉಪಕಾರ ಅಲ್ಲವೇ ? You don't want to go to the extent of extending courtesy to these people who do such good work. ಅದು ಬೇಕಾಗಿಲ್ಲ, ಇವರ ದೊಡ್ಡಸ್ತಿಕೆ ತೋರಿಸಬೇಕಲ್ಲಾ.

ಶ್ರೀ ಟಿ. ಎಂ. ಮಂಜುನಾಥ್.—ತಾವು ಮಾಡಿದತಕ್ಕಂಥಾದ್ದರ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಈ ಫ್ಯಾಮಿಲಿ ಪ್ಲಾನಿಂಗ್ ವಿಚಾರದ ಬಗ್ಗೆ ಸಮಾಜ ಕಾರ್ಯ ಚಟುವಟಿಕೆಗಳು ಮಾಡತಕ್ಕಂಥಾ ಅನೇಕ ಧಾರ್ಮಿಕ ಸಂಸ್ಥೆಗಳು ಇವೆ. ಅದರ ಬಗ್ಗೆ ಇನ್‌ಫರ್ಮೇಷನ್ ಅಂಡ್ ಟೂರಿಸಮ್‌ನವರು ಏತಕ್ಕೆ ಡಾಕ್ಯುಮೆಂಟರಿ ಫಿಲಂ ತೆಗೆದಿಲ್ಲ ? ಮಂತ್ರಿಗಳು ಅಥವಾ ಮುಖ್ಯ ಮಂತ್ರಿಗಳು ಏನಾದರೂ ಕೆಲಸ ಮಾಡಿದರೆ ಕ್ಯಾಮರಾ ಹಿಡಿದು ಅವರ ಫಿಲಂ ತೆಗೆದುಕೊಂಡು ಬ್ರಾಡ್‌ಕ್ಯಾಸ್ಟ್ ಮಾಡಿಸಿಬಿಡುತ್ತಾರೆ. ಆದರೆ ಈವೊತ್ತು ಬೇಕಾಗಿರುವುದು ಹಳ್ಳಿಗಳಲ್ಲಿರುವ ಜನತೆಯ ಜೀವನವನ್ನು ಉತ್ತಮ ಮಟ್ಟಕ್ಕೆ ಬರುವಂಥ ಕೆಲಸ ಮಾಡಬೇಕು. ಆ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಇನ್‌ಫರ್ಮೇಷನ್ ಅಂಡ್ ಟೂರಿಸಮ್ ಡಿಪಾರ್ಟ್‌ಮೆಂಟನ್ನು ಎಚ್ಚರಗೊಳಿಸಬೇಕು ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಬಗ್ಗೆ ನಾನು ಇನ್ನೊಂದು ವಿಚಾರ ಹೇಳುವುದಾದರೆ ಪತ್ರಿಕೆಗಳಿಗೆ ಜಾಹೀರಾತು ಕೊಡುವ ವಿಷಯದಲ್ಲಿ ಈ ಪತ್ರಿಕೆ ಸರಿಯಾದ ರೀತಿಯಲ್ಲಿ ನಡೆಯುತ್ತಾ ಇದೆ ಎಂದು ಹೇಳಿದರೂ ಕೂಡ ಅದಕ್ಕೆ ಇನ್‌ಫರ್ಮೇಷನ್ ಅಂಡ್ ಟೂರಿಸಮ್ ಡಿಪಾರ್ಟ್‌ಮೆಂಟಿನವರು ಅದಕ್ಕೆ ಜಾಹೀರಾತು ಕೊಡುವುದಕ್ಕೆ ಕಿವಿಗೊಡುವುದಿಲ್ಲ. ಕಾಂಗ್ರೆಸ್ಸಿನವರು ಯಾರಾದರೂ ಅದನ್ನು ಒಂದು ಪತ್ರಿಕೆ ಹೊರಡಿಸುವುದಾದರೆ ಅವರಿಗೆ ಸಾವಿರಾರು ಜಾಹೀರಾತುಗಳನ್ನು ಕೊಡುತ್ತಾರೆ. ಈ ಪತ್ರಿಕೆಯ ವಿಚಾರವಾಗಿ ನಾನು ಒಂದು ಮಾತು ಹೇಳುತ್ತೇನೆ. ನಮ್ಮಲ್ಲಿ ಸೇವಕ ಅನ್ನುವ ಒಂದು ಪತ್ರಿಕೆ ಆರಂಭವಾಗಿ ಕೆಲವಾರು ವರ್ಷಗಳು ಆಗಿದೆ. ಆ ಪತ್ರಿಕೆಗೆ ಸರಿಯಾದ ರೀತಿಯಲ್ಲಿ ಜಾಹೀರಾತು ಕೊಡದೆ ತಮಗೆ ಬೇಕಾದ ಪತ್ರಿಕೆಗಳಿಗೆ

ಜಾಹೀರಾತು ಕೊಡುವ ಪದ್ಧತಿ ಹೋಗಬೇಕು. ಎಲ್ಲ ಪತ್ರಿಕೆಗಳನ್ನೂ ಒಂದೇ ಸಮಾನಾದ ರೀತಿಯಲ್ಲಿ ನೋಡಬೇಕು. ಈವೊತ್ತಿನ ತಾವು ಯಾವ ಯಾವ ಪತ್ರಿಕೆಗಳಿಗೆ ಎಷ್ಟೆಷ್ಟು ಜಾಹೀರಾತು ಕೊಟ್ಟಿದ್ದೀರಿ ಎನ್ನುವುದನ್ನು ಬೇಕಾದರೆ ತಿಳಿಸುತ್ತೇನೆ. ಮತ್ತು ಈ ಪೇಪರ್ ಸರ್ಕ್ಯುಲೇಷನ್‌ಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ ಎಂದು ತಮ್ಮ ಉತ್ತರದಲ್ಲಿ ಹೇಳಬೇಕು ಎಂದು ಕೇಳಿಕೊಂಡು ತಾವು ಮಂಡನೆ ಮಾಡಿದಂಥ ಎಲ್ಲ ಬೇಡಿಕೆಗಳನ್ನೂ ವಿರೋಧ ಮಾಡುತ್ತೇನೆ. ಏತಕ್ಕೆಂದರೆ ಇದರಿಂದ ಸಾಮಾನ್ಯ ಜನತೆಗೆ ಎಳ್ಳಷ್ಟೂ ಪ್ರಯೋಜನವಾಗುತ್ತಾ ಇಲ್ಲ. ಮತ್ತು ಈಗ ಅಪವ್ಯಯ ವಾಗಿರತಕ್ಕಂಥ ತೆರಿಗೆಗಳನ್ನು ಜಾಗ್ರತೆಯಿಂದ, ಪ್ರಾಮಾಣಿಕತೆಯಿಂದ ಸರ್ಕಾರದ ಬೊಕ್ಕಸಕ್ಕೆ ಶೇಖರಣೆ ಮಾಡದೇ ಹೋದರೆ ದೇಶದ ಜನತೆ ಬಂಡಾಯ ಎದ್ದು ಸರ್ಕಾರದ ಮೇಲೆ ಪ್ರತಿಭಟನೆ ಮಾಡತಕ್ಕಂಥ ಕಾಲ ಸನ್ನಿಹಿತವಾಗುತ್ತದೆ. ಇನ್ನು ತೆರಿಗೆಗಳನ್ನು ಹೆಚ್ಚು ಹಾಕಿದರೆ ಜನತೆಗೆ ಕೊಡುವ ಶಕ್ತಿ ಇಲ್ಲ. ಆದುದರಿಂದ ಜನತೆಗೆ ಹೆಚ್ಚು ತೆರಿಗೆಗಳನ್ನು ಹಾಕದೆ, ಜನತೆಗೆ ಹೆಚ್ಚು ತೊಂದರೆ ಉಂಟಾಗದೇ ಇರುವ ರೀತಿಯಲ್ಲಿ ನೀವು ಕೆಲಸ ಮಾಡಬೇಕು ಎಂದು ಹೇಳಿ, ನೀವು ತಂದಿರುವ ಎಲ್ಲಾ ಬೇಡಿಕೆಗಳಿಗೂ ವಿರೋಧವನ್ನು ವ್ಯಕ್ತಪಡಿಸಿ ಅಧ್ಯಕ್ಷರು ನನಗೆ ನಾಲ್ಕು ಮಾತು ಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರ್ಥಮಂತ್ರಿಗಳು ತಂದಿರುವ ಬೇಡಿಕೆ ಬಗ್ಗೆ ಮೊದಲು ಪ್ರಸ್ತಾಪ ಮಾಡಿ ಅನಂತರ ಸಾಮಾನ್ಯ ಆಡಳಿತದ ಬಗ್ಗೆ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅರ್ಥ ಮಂತ್ರಿಗಳ ಬೇಡಿಕೆ ಅವರ ಒಂದು ಆಶೀರ್ವಾದ ಇಲ್ಲದೆ ಯಾವ ಕಾರ್ಯ ಕ್ರಮವೂ ಕೂಡ ನಡೆಯದೇ ಇರುವುದರಿಂದ ಸಮರ್ಥವಾದ ಆಡಳಿತ ಅರ್ಥಶಾಖೆಯಲ್ಲಿ ಇದೆ ಎನ್ನುವವರಲ್ಲಿ ನಾನೂ ಒಬ್ಬ. ಮಂತ್ರಿಗಳು ಅರ್ಥಶಾಸ್ತ್ರ ಪಂಡಿತರು ಮತ್ತು ಸತೀಶ್ ಚಂದ್ರರವರು ಒಳ್ಳೆಯ ಕಾರ್ಯದರ್ಶಿಗಳು ಮತ್ತು ವೀರರಾಜ ಅರಸ್ ಅನ್ನುವವರು ಕಮೀಷನರ್ ಇವರನ್ನೊಳ ಗೊಂಡ ಈ ಇಲಾಖೆಯಿಂದ ನೀವು ಎಷ್ಟು ಹೆಚ್ಚು ನಿರೀಕ್ಷಣೆ ಮಾಡುತ್ತೀರೋ ಅದರಲ್ಲಿ ನಾನೂ ಒಬ್ಬ. ದೇಶದಲ್ಲಿ ಕೆಲಸಕಾರ್ಯಗಳು ಆಗಬೇಕು ತೆರಿಗೆ ಹಾಕಬಾರದು ಎಂದರೆ ಅದು ಯಾವ ವಾದವೋ ಏನೋ ನನಗೆ ಅರ್ಥವಾಗುವುದಿಲ್ಲ. ಈ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ.

ಮೊದಲನೆಯದಾಗಿ ಸರ್ಕಾರದವರು ಸ್ಮಾಲ್ ಸೇವಿಂಗ್ಸ್ ಸ್ಕೀಮನ್ನು ಏನು ಹಾಕಿಕೊಂಡಿ ದ್ದಾರೋ ಅದರಲ್ಲಿ ನನಗೆ ಸ್ವಲ್ಪ ಸಂಶಯ ಕಂಡುಬರುತ್ತದೆ. ಇದರ ಉದ್ದೇಶ ಸ್ವಲ್ಪ ಉಳಿತಾಯ ಆಗಬೇಕು ಎಂದು. ಒಬ್ಬ ಮನುಷ್ಯನಿಗೆ ವರ್ಷಕ್ಕೆ ಇಂತಿಷ್ಟು ಉತ್ಪತ್ತಿ ಇದ್ದರೆ ಇಷ್ಟನ್ನು ಉಳಿಸ ಬೇಕು ಎನ್ನುವುದನ್ನು ಜನತೆಗೆ ಕಲಿಸಬೇಕು, ಆ ಮೂಲಕ ದೇಶದ ಆರ್ಥಿಕಾಭಿವೃದ್ಧಿ ಕೂಡ ಬೆಳೆಸ ಬಹುದು ಎನ್ನುವ ದೃಷ್ಟಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ಬಗ್ಗೆ ಸಂಗ್ರಹಣ ಆಗತಕ್ಕಂಥ ರೀತಿಯನ್ನು ನೋಡಿದರೆ ನನಗೆ ಸ್ವಲ್ಪ ಸಂಶಯ ಬರುತ್ತದೆ. ಕಾರಣ ನಾವು ಸಾಮಾನ್ಯವಾಗಿ ಇಂತಹ ಕೆಲಸವನ್ನು ಜವಾಬ್ದಾರಿಯುತವಾದಂಥ ಅಧಿಕಾರಿಗಳಿಗೆ ವಹಿಸಿಕೊಟ್ಟಿ ದ್ದಾರೆ. ಅವರು ಇಂತಿಷ್ಟು ಟಾರ್ಗೆಟ್ ಅಷ್ಟು ಕಲೆಕ್ಟ್ ಮಾಡಿಕೊಡಬೇಕೆಂದು ನಿಗದಿ ಮಾಡಿದ್ದಾರೆ ಅವರು ಹೇಗೆ ಮಾಡಲಿ ಅದು ಇಂತಿಷ್ಟು ಕಲೆಕ್ಷನ್ ಆಗಬೇಕು ಎಂದು ಅವರಿಗೆ ಡೈರೆಕ್ಷನ್ ಕೊಟ್ಟಿದ್ದಾರೆ

ನಾವು ಇದನ್ನು ಯೋಚನೆ ಮಾಡಿದರೆ, ಶೇಕಡ 15–20 ಪರ್ಸೆಂಟ್ ಬಡ್ಡಿ ಕೊಟ್ಟು ವ್ಯಾಪಾರ ಮಾಡತಕ್ಕವರೂ, ವ್ಯಾಪಾರದಲ್ಲಿ ಲುಕ್ಸಾನು ಹೊಂದಿರತಕ್ಕವರೂ ಕೂಡ ಇದನ್ನು ತೆಗೆದುಕೊಳ್ಳಲೇ ಬೇಕು. ಸ್ಮಾಲ್ ಸೇವಿಂಗ್ಸನ್ನು ಸಂಬಂಧಪಟ್ಟ ಅಧಿಕಾರಿಗಳು ಜನರ ಮೇಲೆ ಅನೇಕ ರೀತಿಯಲ್ಲಿ ಹೇರುತ್ತಾರೆ. ಈ ಉಳಿತಾಯದ ನಿಜವಾದ ಅರ್ಥ ಏನು ಎನ್ನುವುದನ್ನು ನಾವು ಯೋಚನೆ ಮಾಡ ಬೇಕಾಗಿದೆ. ಉಳಿತಾಯ ನಿಜವಾಗಿಯೂ ಸಾಫಲ್ಯವಾಗಬೇಕಾದರೆ, ನ್ಯಾಯವಾಗಿ ಒಬ್ಬನ ಉತ್ಪನ್ನ ಮತ್ತು ಖರ್ಚನ್ನು ನೋಡಿಕೊಂಡು ಅವನ ಮೇಲೆ ಈ ಸೇವಿಂಗ್ಸನ್ನು ಹಾಕತಕ್ಕ ಪ್ರವೃತ್ತಿ ಬೆಳೆಯಬೇಕು. ಇದರಿಂದ ದೇಶದ ಅಭಿವೃದ್ಧಿಯೂ ಸಹ ಆಗಬೇಕು. ಬಲೋದ್ಬಂಧನದಿಂದ ಇದು ಆದರೆ ಉಭಯತ್ರರಿಗೂ ಇದು ಸಹಾಯವಾಗದೆ, ಹೋಗುತ್ತದೆ ಎನ್ನುವ ಭಾವನೆ ಕಂಡುಬರುತ್ತದೆ ಇದಕ್ಕೆ ಕಾರಣ, ನನಗೆ ಈ ಹಿಂದೆ ಒಂದು ನಿದರ್ಶನ ಸಿಕ್ಕಿತು. ಶಿವಮೊಗ್ಗದ ಡೆಪ್ಯೂಟಿ ರಿಜಿಸ್ಟ್ರಾರ್ ಇಷ್ಟು ಸೇವಿಂಗ್ಸ್ ಆಗಬೇಕು ಎಂದು ಒಂದು ಟಾರ್ಗೆಟ್‌ನ್ನು ಇಟ್ಟುಕೊಂಡಿರುತ್ತಾರೆ ಅದದ್ದನ್ನು ಮುಗಿಸಬೇಕು ಎನ್ನುವ ಗಡಿಬಿಡಿಯಲ್ಲಿ ಯಾರು ಲೈಸೆನ್ಸ್‌ಗೆ ಹೋದರೂ, ಅಥವಾ ಇನ್ನಾವ ಕೆಲಸಕ್ಕೆ ಹೋದರೂ ಅವರ ಮೇಲೆ ಸೇವಿಂಗ್ಸ್‌ನ್ನು ಹೇರುತ್ತಾರೆ. ಈ ರೀತಿಯ ಮಾರ್ಗ ಸರಿಯೇ ಎಂದು ನಾನು ಸರ್ಕಾರವನ್ನು ಕೇಳಬಯಸುತ್ತೇನೆ. ಉಳಿತಾಯ ಸಾಫಲ್ಯತೆಯಿಂದ ಬರಬೇಕು, ಇದರಲ್ಲಿ ಯಾರ ಒಂದು ಒತ್ತಾಯವೂ ಇರಬಾರದು.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

3-00 P.M.

ಸೆಂಟ್ರಲ್ ಸೇವಿಂಗ್ಸ್ ಫೆಡರೇಷನ್‌ನ ಕೆಲವರು ಅಧಿಕಾರಿಗಳು ಇಲ್ಲಿಗೆ ಬಂದಿದ್ದರು, ಅವರಿಗೆ ನಾನು ಉಳಿತಾಯದ ಬಗ್ಗೆ ಕೆಲವೊಂದು ಮಾತುಗಳನ್ನು ಹೇಳಿದೆ. ನೀವು ಉಳಿತಾಯದ ಯೋಜನೆಯನ್ನು ಜನಕ್ಕೆ ಪ್ರಚಾರ ಮಾಡಿ, ಅವರಿಂದ ಪ್ರತಿದಿನವೂ ದುಡ್ಡನ್ನು ಉಳಿಸುವಂತೆ ಮಾಡಬೇಕು, ಅದು ದೇಶದ ಸಂಪತ್ತಿನ ಅಭಿವೃದ್ಧಿಗೆ ಖರ್ಚಾಗಬೇಕು, ಇಂಥ ಒಂದು ಪ್ರವೃತ್ತಿಯನ್ನು ಅವರಲ್ಲಿ ಬೆಳೆಸಿ, ಉಳಿತಾಯವನ್ನು ಮಾಡಬೇಕೇ ಹೊರತು ಒತ್ತಾಯದಿಂದ ಈ ಯೋಜನೆ ಸಾಫಲ್ಯವಾಗುವುದಿಲ್ಲ ಎನ್ನುವ ಮಾತನ್ನು ಅವರಿಗೆ ಹೇಳಿದೆ. ಅದಕ್ಕೆ ಅವರೂ ಒಪ್ಪಿಕೊಂಡರು. ಬಲೋದ್ಬಂಧನದಿಂದ ಸೇವಿಂಗ್ಸ್ ಮಾಡುವುದನ್ನು ಸರಿಪಡಿಸಬೇಕು ಎನ್ನುವುದು ನನ್ನ ಅಭಿಪ್ರಾಯ.

ಇನ್ನು ಇನ್‌ಫರ್ಮೇಷನ್ ಅಂಡ್ ಬ್ರಾಡ್‌ಕ್ಯಾಸ್ಟಿಂಗ್ ಬಗ್ಗೆ ಕೆಲವು ಅಂಶಗಳನ್ನು ನಮ್ಮ ಸ್ನೇಹಿತರುಗಳು ಹೇಳಿದರು. ದೇಶದಲ್ಲಿ ಅನಕ್ಷರಸ್ಥರು ನೂರಕ್ಕೆ 80 ಪರ್ಸೆಂಟ್ ಜನ ಇದ್ದಾರೆ. ಇಂಥ ಒಂದು ದೇಶದಲ್ಲಿ ಇಂಥ ಒಂದು ಇನ್‌ಫರ್ಮೇಷನ್ ಮತ್ತು ಬ್ರಾಡ್‌ಕ್ಯಾಸ್ಟಿಂಗ್ ಇಲಾಖೆ ಏನು ಇದೆ, ಅದರ ಕೆಲಸ ಅತ್ಯಂತ ಮುಖ್ಯ ; ಎಂದು ನಾನು ತಿಳಿದುಕೊಂಡಿದ್ದೇನೆ. ದೇಶದಲ್ಲಿ ಆಗತಕ್ಕ ಪ್ರಗತಿಯ ಬಗ್ಗೆ ಜನಕ್ಕೆ ಯಾವ ಮಾರ್ಗವನ್ನು ನಾವು ತೋರಿಸಬೇಕಾಗಿದೆ ಈ ಬಗ್ಗೆ ಪತ್ರಿಕೆಯಲ್ಲಿ ಓದಿ ತಿಳಿದುಕೊಳ್ಳುವವರು ನೂರಕ್ಕೆ 5 ಪರ್ಸೆಂಟ್ ಸಹ ಇಲ್ಲ ಎಂದು ನನ್ನ ಅಭಿಪ್ರಾಯ. ಹೀಗೆ ಇರುವಾಗ, ಇಂಥ ಸಂಸ್ಥೆಗಳ ಕೆಲಸ ಬಹಳ ಮುಖ್ಯವಾಗಿರುತ್ತದೆ. ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು, ಈ ಇಲಾಖೆಯ ಕೆಲಸಕಾರ್ಯಗಳು ಮಾರ್ಪಾಡಾಗಬೇಕು ಎಂದು. ಆದರೆ ನಾನು ಹೇಳುತ್ತೇನೆ, ಯಾವುದೇ ಒಂದು ದೇಶದ ಸರ್ಕಾರದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಆಗುತ್ತವೆಯೋ ಅಂಥಾದ್ದನ್ನು ಒಂದು ಚಿತ್ರ ತೆಗೆದು ಜನತೆಗೆ ತೋರಿಸುತ್ತಾರೆ. ಇದು ನಮ್ಮ ಸರ್ಕಾರಕ್ಕೆ ಸೀಮಿತವಾಗಿರತಕ್ಕದಲ್ಲಾ ಎನ್ನುವ ಮಾತನ್ನು ನಾನು ಒತ್ತಿ ಹೇಳಬಯಸುತ್ತೇನೆ.

ಇನ್ನು ಲಾಟರಿ ಯೋಜನೆಯ ಬಗ್ಗೆ ಬೇಕಾದಷ್ಟು ಟೀಕೆಗಳು ಕೇಳಿ ಬರುತ್ತಿವೆ ; ಇವತ್ತು ಲಾಟರಿ ಯೋಜನೆಯಲ್ಲಿ ಎರಡು ಮುಖ್ಯ ಅಂಶಗಳನ್ನು ನಾವು ಕಾಣಬಹುದು. ಇದರಿಂದ ಸಾವಿರಾರು ಜನ, ತಮ್ಮ ಕನಸನ್ನು, ನನಸಾಗಿ ಮಾಡಿಕೊಳ್ಳುವುದನ್ನು ನಾವು ನೋಡುತ್ತಿದ್ದೇವೆ. ಜೊತೆಗೆ ದೇಶಕ್ಕೂ ಇದರಿಂದ, ದೇಶದ ಅಭಿವೃದ್ಧಿಗೆ ಬೇಕಾದಂಥ ಹಣ ಸಿಕ್ಕುತ್ತದೆ. ಆದ್ದರಿಂದ ಈ ಯೋಜನೆಯನ್ನು ಮುಂದುವರಿಸಬೇಕು ಎಂದು ಹೇಳುವವರಲ್ಲಿ ನಾನೂ ಒಬ್ಬ. ಯಾರೂ ಇದಕ್ಕೆ ಬೆಂಬಲ ಕೊಡುತ್ತಾರೋ ಅವರಲ್ಲಿ ನಾನೂ ಒಬ್ಬ.

ನಂತರ ಈ ಟ್ಯಾಕ್ಸೇಷನ್ ಪಾಲಿಸಿ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಇದಕ್ಕೆ ನಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೇವೆ, ಅದನ್ನು ಯಾವ ರೀತಿಯಲ್ಲಿ ಸಾಫಲ್ಯ ಮಾಡಬೇಕು ಎನ್ನುವ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಕಾರಣ ದೇಶದಲ್ಲಿ, ಜನರಲ್ಲಿರತಕ್ಕ ಕಪ್ಪು ಹಣ ಏನು ಇದೆ, ಅದು ಹೆಚ್ಚಿನ ಮಟ್ಟದಲ್ಲಿ ಪ್ರಸಾರವಾಗುತ್ತಿದೆ ನಮ್ಮ ಜನರಲ್ಲಿರತಕ್ಕ ಹಣವನ್ನು ಎಲ್ಲಾ ಒಂದು ಕಡೆ ಹಾಕಿದರೆ ಎಷ್ಟು ಪ್ರಸಾರವಾಗುತ್ತದೆಯೋ ಅಷ್ಟೇ ಕಪ್ಪು ಹಣ ಇನ್ನೊಂದು ಕಡೆ ಪ್ರಸಾರವಾಗುತ್ತಿದೆ ಎನ್ನುವುದನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಚಾಲ್ತಿಯಲ್ಲಿರತಕ್ಕ ಹಣ ಎಲ್ಲಾ ಸಿಕ್ಕುತ್ತದೆ, ಆದರೆ ಈ ಕಪ್ಪು ಹಣ ಏನು ಮಾಡಿದರೂ ಸಿಕ್ಕುವುದಿಲ್ಲ. ಆದ್ದರಿಂದ ನಾವು ಇದರ ಬಗ್ಗೆ ಬಹಳ ಗುರುತರವಾಗಿ ಯೋಚನೆ ಮಾಡಬೇಕು. ಇದರಿಂದ ಬೆಲೆ ಏರಿಕೆಗೆ ಕಾರಣವಾಗುತ್ತದೆ. ಸರ್ಕಾರದವರು ಈಗಿರತಕ್ಕ ಚಾಲ್ತಿ ಹಣವನ್ನು ರದ್ದುಪಡಿಸಿ, ನಮ್ಮ ಕರೆನ್ಸಿಯನ್ನು ಬಿಗಿ ಮಾಡುವುದು, ಅಥವಾ ಇನ್ಯಾವ ಕಾರ್ಯಕ್ರಮವನ್ನು ಯೋಚನೆ ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇವತ್ತು ಸಾಮಾನ್ಯ ರೈತನಿಗೂ ರೆಫ್ರಿಜರೇಟರ್ಸ್ ಬೇಕು, ರೇಡಿಯೋ ಬೇಕು, ಎನ್ನುವ ಪ್ರವೃತ್ತಿ ಬಂದು, ಜನರಿಗೆ ಕೊಳ್ಳತಕ್ಕ ಶಕ್ತಿ ಹೆಚ್ಚಾಗಿದೆ ಎಂದ ಮೇಲೆ ಈ ಕಪ್ಪು ಹಣ ಎಲ್ಲಿಂದ ಬಂತು ಎನ್ನುವುದನ್ನು ನಾವು ವಿವೇಚನೆ ಮಾಡಬೇಕಾಗುತ್ತದೆ. ಈ ಕಪ್ಪು ಹಣವನ್ನು ದೇಶದಿಂದ ಹೊರಗೆ ತೆಗೆಯುವವರಿಗೂ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಿಲ್ಲ ಎನ್ನುವ ಅಭಿಪ್ರಾಯವೂ ಬಂದಿದೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಈ ಆಡಳಿತವನ್ನು ನಡೆಸತಕ್ಕ, ಬಗ್ಗೆ ಅಮೆರಿಕನ್ ತಜ್ಞರೊಬ್ಬರು 15 ವರ್ಷಗಳ ಹಿಂದೆಯೇ ಸಾಮಾನ್ಯ ಜನಕ್ಕೆ ಇರತಕ್ಕ ಅಂತರ ಮತ್ತು ಆಡಳಿತ ನಡೆಸತಕ್ಕವರಿಗೂ ಇರತಕ್ಕ ಅಂತರ ಸಮುದ್ರದ ಅಂತರ ಎಂದು ಅವರು ಕಂಡುಕೊಂಡಿದ್ದಾರೆ. ಇದಕ್ಕೆ ಕಾರಣ ಆಡಳಿತ ನಡೆಸತಕ್ಕವರೂ ಜನರಿಗೆ ಹೊಂದಿ

ಕೊಂಡು ಹೋಗತಕ್ಕ ಸಮತೋಲನದ ಮಾರ್ಗವನ್ನು ಅರಿತುಕೊಂಡಿಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಇದನ್ನು ಇವತ್ತು ನಾವು ನೋಡಬಹುದು. ಪ್ರತಿಯೊಂದು ಹಂತದಲ್ಲಿಯೂ ಅಧಿಕಾರಿಗಳು ವರ್ಗ ಒಂದಾಗಿದ್ದರೆ, ಅಧಿಕಾರಿಗಳ ಹಿಂದೆ ಇರತಕ್ಕ ಜನರ ವರ್ಗ ಇನ್ನೊಂದಾಗಿದೆ. ಅವರಿವರೂ ಯಾವಾಗಲೂ ಹೊಂದಿಕೊಂಡು ಇರುವುದಿಲ್ಲ. ಹೊಂದಿಕೊಂಡು ಹೋಗದಿರುವ ಪ್ರಯುಕ್ತ ಆಡಳಿತ ಪ್ರತಿಯೊಂದು ಹಂತದಲ್ಲಿಯೂ ಕುಂಠಿತವಾಗುತ್ತಿದೆ ಎನ್ನುವ ಅಭಿಪ್ರಾಯ ನನ್ನದು. ಇದು ಖಚಿತವಾಗಿದೆ.

ಪೆನ್ಷನ್ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಕೆಲವರಿಗೆ ರಿಟೈರ್ ಆಗಿ 8-10 ವರ್ಷವಾದರೂ ಕೂಡ ಪೆನ್ಷನ್ ತೀರ್ಮಾನವಾಗಿರುವುದಿಲ್ಲ. ಈ ರೀತಿ ಪೆನ್ಷನ್ ತೀರ್ಮಾನವಾಗದೆ ಇರುವುದಕ್ಕೆ ಏನು ಕಷ್ಟ ಇದೆ ? ಇದಕ್ಕೆ ಏನು ಕಾರಣವೋ ಗೊತ್ತಿಲ್ಲ. ಬಹುಶಃ ನಮ್ಮಲ್ಲಿರತಕ್ಕ ಕೆಲವು ಪ್ರೊಸೀಜರ್ಸ್ ಏನು ಇವೆ, ಅವುಗಳ ಅಡಚಣೆಯಿಂದಾಗಿ ಇದು ತಡವಾಗುತ್ತಿದೆ ಎನ್ನುವುದನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬೇಕಾದರೆ, ನಮ್ಮ ಜಿಲ್ಲೆಯೊಳಗೆ ಮೈಲಾರಪ್ಪ ಎನ್ನುವ ಒಬ್ಬ ಸಾಮಾನ್ಯ ಪ್ರೈಮರಿ ಸ್ಕೂಲ್ ಟೀಚರ್ ರಿಟೈರ್ ಆಗಿ 15 ವರ್ಷವಾಗಿದೆ, ಇವತ್ತಿನವರೆಗೂ ಕೂಡ ಅತನ ಪೆನ್ಷನ್ ತೀರ್ಮಾನವಾಗಿಲ್ಲ. ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ರಿಕಾರ್ಡ್ಸ್ ಹೋಗುವುದು, ಹೀಗೆ ಆಗಿ, ಅವನ ಮರಣ ಕಾಲದಲ್ಲಿಯೂ ಅವನಿಗೆ ಪೆನ್ಷನ್ ದೊರಕಲಿಲ್ಲ ಎಂದರೆ ಅವನ ಗತಿ ಏನಾಗಬೇಕು ? ಇದಕ್ಕೆ ಯಾರನ್ನೋ ಬೈಯಬೇಕು ಎನ್ನುವ ವಿಚಾರವಲ್ಲ. ಇದಕ್ಕೆ ಅದಷ್ಟು ಬೇಗ, ಅವರಿಗೆ ನ್ಯಾಯ ದೊರಕಿಸತಕ್ಕ ಉಪಾಯವನ್ನು ಕಂಡುಹಿಡಿದು ಇದು ವರ್ಷಾನುಗಟ್ಟಲೆ ಆಗದ ರೀತಿಯಲ್ಲಿ ನೋಡಿಕೊಂಡು ಸುಮ್ಮನೆ ರಿಕಾರ್ಡ್ಸ್ ಬೆಳೆಯುವುದಕ್ಕೆ ಅವಕಾಶ ಕೊಡದೆ, ಅವರಿಗೆ ಏನು ನ್ಯಾಯವಾಗಿ ಸಿಕ್ಕಬೇಕೋ ಅದನ್ನು ದೊರಕಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ, ನನಗೆ ಮಾತನಾಡಲಿಕ್ಕೆ ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೆ, ಹಣಕಾಸಿನ ಸಚಿವರು ಮಂಡಿಸಿರತಕ್ಕ ಈ ಬೇಡಿಕೆಯನ್ನು ನಾನು ವಿರೋಧ ಮಾಡುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಈ ಖಾತೆಯನ್ನು ವಹಿಸಿಕೊಂಡಮೇಲೆ ಅವರ ಇಲಾಖೆಗೆ ಒಂದು ಹೊಸ ಚೈತನ್ಯವನ್ನು ತಂದು ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಅವರು ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡಿ ನಮ್ಮ ದೇಶದಲ್ಲಿ ಸಿಗಬಹುದಾದಂಥ ಜ್ಞಾನಾರ್ಜನೆಗಿಂತ ಹೆಚ್ಚು ಜ್ಞಾನಾರ್ಜನೆ ಪರದೇಶದಲ್ಲಿ ಮಾಡಿ ಬಂದು, ಹಿಂದಿನ ಸರ್ಕಾರದ ಮಂತ್ರಿಗಳಾಗಬೇಕೆಂದು ಬಹಳ ಪ್ರಯಾಸಪಟ್ಟರೂ ಅವರಿಗೆ ಮಂತ್ರಿ ಪದವಿ ಕೊಡಲಿಲ್ಲ, ಈಗ ಸಿಕ್ಕಿತು.

ಶ್ರೀ ಎಂ. ವೈ. ಘೋರ್ಪಡೆ. ಆ ತರಹ ಪ್ರಯಾಸ ಯಾವ ಕಾಲಕ್ಕೂ ಪಡಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಿಜಲಿಂಗಪ್ಪನವರಿಗೆ ಸೊಂಡೂರಿನಲ್ಲಿ ಹೂವಿನ ಮಳೆ ಸುರಿಸಿದರು. ಈಗ ಅವಕಾಶ ಸಿಕ್ಕಿದ ಮೇಲೆ ಈ ಇಲಾಖೆಗೆ ಹೊಸ ಚೇತನವನ್ನು ತಂದುಕೊಡುತ್ತಾರೆ ಎಂದು ನಿರೀಕ್ಷಣೆ ಮಾಡಿದ್ದೆವು. ತೆರಿಗೆಯನ್ನು ಹಾಕತಕ್ಕ ಕ್ರಮದಲ್ಲಿ, ವಸೂಲು ಮಾಡತಕ್ಕ ಕ್ರಮದಲ್ಲಿ, ಆಡಳಿತದ ಕ್ರಮದಲ್ಲಿ ಮತ್ತು ಅದನ್ನು ಸ್ವಲ್ಪ ಮೂಲಭೂತವಾಗಿ ಮಾರ್ಪಾಡು ಮಾಡತಕ್ಕ ಕಾಲದಲ್ಲಿ ಹೆಚ್ಚಿನ ಬದಲಾವಣೆಯನ್ನು ಮಾಡುತ್ತಾರೆ ಎಂದು ನಿರೀಕ್ಷಣೆ ಇಟ್ಟುಕೊಂಡಿದ್ದೆವು. ಅಂತಹ ಯಾವ ಬದಲಾವಣೆಗಳನ್ನೂ ಕಳೆದ ಎರಡು ವರ್ಷಗಳಲ್ಲಿ ಮಾಡಲಿಲ್ಲ. ಯದ್ವಾತದ್ವಾ ತೆರಿಗೆಗಳನ್ನು ಹಾಕುವುದು, ಬೇಕಾದಂತೆ ತೆರಿಗೆ ಜಾಸ್ತಿ ಮಾಡುವುದು, ಕಳೆಯುವುದು, ಕೂಡುವುದು ಮಾಡಿದ್ದಾರೆಯೇ ವಿನಹ ತೆರಿಗೆಯನ್ನು ವ್ಯಾಪಕವಾಗಿ ವಿಚಾರ ಮಾಡಿ ಅದಕ್ಕೆ ಹೊಸ ಮುಖವನ್ನು ಕೊಡುವ ಪ್ರಯತ್ನವನ್ನು ಎಳ್ಳಷ್ಟೂ ಮಾಡಲಿಲ್ಲ ಎಂದು ಹೇಳಿದರೆ ಆಶ್ಚರ್ಯ ಇಲ್ಲ. ಏಕೆಂದರೆ ಬಹುಪಾಲು ಆದಾಯ ತೆರಿಗೆಯ ಮುಖಾಂತರ ಬರುತ್ತಾ ಇದೆ. ತೆರಿಗೆ ಹಾಕಿದಂಥ ವಸ್ತುಗಳ ಮೇಲೆ ತೆರಿಗೆಯನ್ನು ಜಾಸ್ತಿ ಮಾಡುತ್ತಿದ್ದಾರೆಯೇ ವಿನಹ ತೆರಿಗೆ ಹಾಕದೆ ಇರುವ ವಸ್ತುಗಳ ಮೇಲೆ ತೆರಿಗೆಯನ್ನು ಹಾಕುವ ಪ್ರಯತ್ನ ಮಾಡಲಿಲ್ಲ. ಜೊತೆಗೆ ಬಹುಮುಖ ತೆರಿಗೆಯನ್ನು ತೆಗೆದುಹಾಕಿ ಏಕಮುಖತೆರಿಗೆಯನ್ನು ಹೆಚ್ಚು ಮಾಡಬೇಕಾದದ್ದು ಇದೆ. ಇದರ ಬಗ್ಗೆ ಈಚೆಗೆ ಸಮಿತಿಯನ್ನು ನೇಮಕ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಅದು ಈವರೆಗೂ ತೀರ್ಮಾನ ಕೊಟ್ಟಿಲ್ಲ. ಹಿಂದೆ ಸೇಲ್ಸ್ ಟ್ಯಾಕ್ಸ್ ಮತ್ತು ವಾಣಿಜ್ಯ ತೆರಿಗೆಯ ಪ್ರಸ್ತಾಪ ಬಂದಾಗ ಅದನ್ನು ವಿಚಾರ ಮಾಡುತ್ತೇನೆ ಎನ್ನತಕ್ಕಂಥ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಜೊತೆಗೆ ಈ ಬಹುಮುಖ ತೆರಿಗೆಯನ್ನು ತೆಗೆದು ಏಕಮುಖವಾದ ತೆರಿಗೆಯನ್ನು ಹಾಕಿದರೆ ಏನು ತೊಂದರೆಯಾಗಬಹುದು ಎಂಬುದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿ

(ಶ್ರೀ ಕಾಗೋಡು ತಿಮ್ಮಪ್ಪ)

ಸಿಕೊಡಬೇಕು ಎಂದು ಕೇಳಿದ್ದೇವೆ. ಅದನ್ನು ಮಾಡಲಿಲ್ಲ. ಆದುದರಿಂದ ತೆರಿಗೆಯ ವಿಷಯವಾಗಿ ವಿಚಾರ ಮಾಡತಕ್ಕಂಥ ಅವಶ್ಯಕತೆ ಹೆಚ್ಚಾಗಿದೆ. ಅವರು ತ್ರಾಸ ತೆಗೆದುಕೊಳ್ಳಬೇಕು. ಅವರು ಹಣಕಾಸಿನ ಸಚಿವರಾದ ಮೇಲೆ ಎಷ್ಟು ಸಾರಿ ಸೊಂಡೂರಿಗೆ ಹೋದರು, ಬೇರೆ ಜಿಲೆ ಗಳಿಗೆ ಎಷ್ಟು ಸಾರಿ ಹೋಗಿದ್ದಾರೆ ಎಂದು ಲೆಕ್ಕ ಕೊಡಬೇಕು. ಹಣಕಾಸಿನ ಸಚಿವರು ಸೊಂಡೂರಿಗೆ ಮಂತ್ರಿಗಳು ಅಲ್ಲ, ಇಡೀ ಕರ್ನಾಟಕದ ಎಲ್ಲಾ ಭಾಗಗಳಿಗೂ ಓಡಾಟ ಮಾಡಬೇಕಾಗುತ್ತದೆ. ವಿಷಯಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಅವರು ಸಚಿವರಾದ ಮೇಲೆ ಇಲ್ಲಿಯವರೆಗೆ ಸೊಂಡೂರಿಗೆ ಇಲ್ಲಿಯ ವರೆಗೆ ಎಷ್ಟು ಸಾರಿ ಹೋಗಿದ್ದರು ಹೇಳಬೇಕಾಗುತ್ತದೆ. ಅವರು ಶ್ರಮವಹಿಸಿ ತೆರಿಗೆಗಳನ್ನು ಪುನರ್‌ವಿಮರ್ಶೆ ಮಾಡುವ ಸಾಹಸ ಮಾಡಬೇಕಾಗಿದೆ. ಅವರು ತಮ್ಮ ಬುದ್ಧಿಯನ್ನು ಒರೆ ಹಚ್ಚಿ ಈ ಸಮಸ್ಯೆಯನ್ನು ಹೊಸ ದೃಷ್ಟಿಕೋನದಿಂದ ನೋಡುವುದಕ್ಕೆ ಪ್ರಯತ್ನ ಮಾಡಬೇಕು. ಬಹುಮುಖ ತೆರಿಗೆಯನ್ನು ತೆಗೆದು ಏಕಮುಖವಾದ ತೆರಿಗೆಯನ್ನು ಹಾಕಬೇಕು. ಏಕಮುಖವಾದ ತೆರಿಗೆಯನ್ನು ಹಾಕುವುದರಿಂದ ಇವತ್ತು ಬಹಳಷ್ಟು ನಮ್ಮ ಆದಾಯ ಹೆಚ್ಚಿಗೆ ಆಗುತ್ತದೆ. ಕನಿಷ್ಟ ಅಂದರೆ 10 ರಿಂದ 20 ಕೋಟಿ ರೂಪಾಯಿಗಳವರೆಗೆ ಆಗುವುದಕ್ಕೆ ಸಾಧ್ಯ ಇದೆ. ಬಹುಮುಖ ತೆರಿಗೆಯನ್ನು ಕೊಡತಕ್ಕ ಜನರಿಗೆ ಕಿರುಕುಳ ಕೊಡುತ್ತಿದ್ದಾರೆಂದು ಕೇಳಿದೆ. ತೆರಿಗೆಯನ್ನು ವಸೂಲು ಮಾಡತಕ್ಕ ಮತ್ತು ತೆರಿಗೆಯನ್ನು ಹಾಕತಕ್ಕ ಅಧಿಕಾರಿಗಳು ಏನು ಇದ್ದಾರೆ ಅವರಿಂದ ಆಗತಕ್ಕ ಕಿರುಕುಳ ಸಹಿಸುವುದಕ್ಕೆ ಆಗದೆ ಇಲ್ಲದ ರೀತಿಯಲ್ಲಿ ಆಗಿದೆ. ಈ ದೃಷ್ಟಿಯಿಂದ ಬಹುಮುಖ ತೆರಿಗೆಯನ್ನು ತೆಗೆದು ಹಾಕುವುದಕ್ಕೆ ಪ್ರಯತ್ನ ಮಾಡಬೇಕು. ಇದರಿಂದ ಏನು ಅಡಚಣೆ ಬರುತ್ತದೆ ಎನ್ನುವುದನ್ನು ನೋಡಬೇಕು. ಅದಲ್ಲದೆ ಕೂಡ ಯಾವ ವಸ್ತುಗಳ ಮೇಲೆ ತೆರಿಗೆಯನ್ನು ಹಾಕುತ್ತಾರೋ ಆ ವಸ್ತುಗಳನ್ನು ನಮ್ಮ ರಾಜ್ಯದಲ್ಲಿ ನೇರವಾಗಿ ಗುರುತಿಸುವುದಕ್ಕೆ ಸಾಧ್ಯವಾಗುವುದಾದರೆ, ಅಂತಹ ಎಲ್ಲಾ ವಸ್ತುಗಳ ಮೇಲೆ ಏಕಮುಖವಾದ ತೆರಿಗೆಯನ್ನು ಹಾಕಬೇಕು. ತೆರಿಗೆಯನ್ನು ಕೊಡುವವರು ಕೊಡುತ್ತಾ ಇರುತ್ತಾರೆ. ಕೊಡದೆ ಹೋದರೆ ಇಷ್ಟು ಹಣ ಬರುತ್ತಾ ಇರಲಿಲ್ಲ. ಕೊಡುವಾಗ ಅವರಿಗೆ ಆಗುವ ಕಿರುಕುಳ ತಪ್ಪಬೇಕು. ಚಂದ್ರಶೇಖರರವರು ಹೇಳಿದಂತೆ ಜನ ಮತ್ತು ಆಡಳಿತ ಯಂತ್ರ ಬಹಳ ದೂರ ಇದ್ದು ಬಿಟ್ಟಿರುವುದರಿಂದ ಕೊಡುವುವರಿಗೆ ಆಗುವ ಕಿರುಕುಳ ತಪ್ಪಿಸುವುದಕ್ಕೆ ಆಗುತ್ತಾ ಇಲ್ಲ. ಆ ದೃಷ್ಟಿಯಿಂದ ಯಾವ ವಸ್ತುಗಳನ್ನು ರಾಜ್ಯದಲ್ಲಿ ಗುರುತಿಸುವುದಕ್ಕೆ ಸಾಧ್ಯವೋ ಅಂತಹ ವಸ್ತುಗಳ ಮೇಲೆ ಬಹುಮುಖ ತೆರಿಗೆಯನ್ನು ತೆಗೆದು ಹಾಕಿ ಏಕಮುಖ ತೆರಿಗೆಯನ್ನು ಹಾಕಬೇಕು. ತೆರಿಗೆಯನ್ನು ಹಾಕತಕ್ಕಂಥ ಕಾಲದಲ್ಲಿ ಭೋಗವಸ್ತುಗಳು ಏನು ಇವೆ ಅವುಗಳ ಮೇಲೆ ಹೆಚ್ಚಿಗೆ ತೆರಿಗೆಯನ್ನು ಹಾಕಬೇಕು. ಭೋಗವಸ್ತುಗಳ ಮೇಲೆ ತೆರಿಗೆ ಹಾಕತಕ್ಕ ಪ್ರಮಾಣವನ್ನು ಕಮ್ಮಿ ಮಾಡಿದ್ದೀರಿ, ಜಾಸ್ತಿ ಮಾಡುತ್ತಾ ಇಲ್ಲ. ದಿನನಿತ್ಯದ ಜನಸಾಮಾನ್ಯರ ಬಳಕೆ ವಸ್ತುಗಳ ಮೇಲೆ ಹಾಕತಕ್ಕ ಪ್ರಮಾಣ ಇವತ್ತು ಜಾಸ್ತಿಯಾಗುತ್ತಾ ಇದೆ. ನಮ್ಮ ರಾಜ್ಯದಲ್ಲಿ ಸೆಂಟ್, ಗಂಧದ ಎಣ್ಣೆ, ಸಿಗರೇಟ್, ಬ್ರಾಂಡಿ, ರಿಫ್ರಿಜರೇಟರ್, ಎಲೆಕ್ಟ್ರಿಕ್ ಉಪಕರಣಗಳು ಮುಂತಾದ ಭೋಗವಸ್ತುಗಳು ಇವೆ. ಅವುಗಳ ಮೇಲೆ ದ್ವಿಗುಣವಾಗಿ, 3ರಷ್ಟು 4ರಷ್ಟು ಅಥವಾ 5ರಷ್ಟು ತೆರಿಗೆ ಹಾಕಬೇಕು. ಇವುಗಳನ್ನು ಉಪಯೋಗಿಸತಕ್ಕ ಜನರು ಕಮ್ಮಿ. ಅಂತಹ ಭೋಗ ವಸ್ತುಗಳ ಪಟ್ಟಿಯನ್ನು ಸಿದ್ಧಮಾಡಬೇಕು. ಒಂದು ಕಾಲದಲ್ಲಿ ಭೋಗವಸ್ತುವಾಗಿರುವುದು ಇವತ್ತು ಭೋಗವಸ್ತು ಇಲ್ಲದೆ ಇರಬಹುದು. ಕಾಲಮಾನ ಪರಿವರ್ತನೆ ಆದಂತೆ, ಅದೂ ಪರಿವರ್ತನೆ ಆಗುತ್ತದೆ. ಕೆಲವೇ ಜನರು ಉಪಯೋಗ ಮಾಡತಕ್ಕ ಭೋಗವಸ್ತುಗಳು ಏನು ಇವೆ ಅವುಗಳನ್ನು ಗುರುತಿಸಿ ಅವಕ್ಕೆ ತೆರಿಗೆಯನ್ನು ಜಾಸ್ತಿ ಮಾಡತಕ್ಕಂಥ ಕ್ರಮ ಮಾಡಬೇಕು. ಅದರ ಜೊತೆಗೆ ಜನಸಾಮಾನ್ಯರು ಬಳಸತಕ್ಕಂಥ ವಸ್ತುಗಳಾದ ಆಹಾರ ಪದಾರ್ಥಗಳು, ಎಣ್ಣೆ, ಎಣ್ಣೆಬೀಜಗಳು ಇಂತಹವುಗಳ ಮೇಲೆ ತೆರಿಗೆ ಹಾಕುವುದನ್ನು ಕಡಿಮೆ ಮಾಡಬೇಕು. ಬೆಂಗಳೂರು ನಗರದಲ್ಲಿ ಸಾರಾಯಿ ವಗೈರೆಗಳಿಂದ ಭರತಕ್ಕ ತೆರಿಗೆ ಏನು ಇದೆ ಅದರಿಂದ ಕೆಲವರು ತಪ್ಪಿಸಿಕೊಳ್ಳುತ್ತಿದ್ದಾರೆ. ಬೆಂಗಳೂರಿನಲ್ಲಿ ಸಾರಾಯಿಗಳನ್ನು ಮತ್ತು ಇತರ ಆಲ್ಕೋಹಾಲನ್ನು ತಯಾರು ಮಾಡತಕ್ಕ ಅನೇಕ ಕಾರ್ಖಾನೆಗಳು ಇವೆ. ಅವರು ಬಹಳ ಪ್ರಭಾವಶಾಲಿ ಜನರು. ಇವರು ಹೆಚ್ಚು ಕಮ್ಮಿ ಸರ್ಕಾರದವರ ಜೊತೆಗೆ ಯಾವತ್ತೂ ಸ್ನೇಹದಿಂದಿರುತ್ತಾರೆ. ವೀರೇಂದ್ರ ಪಾಟೀಲರು ಇದ್ದಾಗ ಅವರ ಜೊತೆಗೆ ಸ್ನೇಹ ಇಟ್ಟುಕೊಂಡಿದ್ದರು. ತಾವು ಬಂದಮೇಲೆ ತಮ್ಮ ಜೊತೆಗೆ ಸ್ನೇಹದಿಂದಿದ್ದಾರೆ. ಹೀಗಾಗಿ ಬ್ರಾಂಡಿ ವಿಸ್ಕಿ ತಯಾರು ಮಾಡತಕ್ಕ ಜನರು ಪ್ರಭಾವಶಾಲಿಗಳು.

ಶ್ರೀ ಎಚ್. ಡಿ. ದೇವೇಗೌಡ —ಹಿಂದಿನವರ ಜೊತೆಗೆ ಸ್ನೇಹದಿಂದ ಇರಬಹುದು. ಆದರೆ ಅವರಂತಹವರ ಜೊತೆಗೆ ಸ್ನೇಹ ಮಾಡುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ನಾನು ಯಾರ ಹತ್ತಿರವೂ ವಿರೋಧ ಕಟ್ಟಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ.

ಶ್ರೀ ಎಚ್. ಡಿ ದೇವೇಗೌಡ.—ಬಡವರ ಸರ್ಕಾರದ ಪ್ರತಿನಿಧಿಗಳು ಕೂಡ ಸ್ನೇಹ ಬೆಳೆಸುವುದಕ್ಕೆ ಆಗುತ್ತದೆಯೇ ? ಅವರು ಬೆಳೆಸುವುದಿಲ್ಲ. ಸಂಜೆ ಆರುಗಂಟೆ ಆದಮೇಲೆ ಬೆಳಿಗ್ಗೆ 8 ಗಂಟೆ ವರೆಗೆ ಸ್ನೇಹ ಬೆಳೆಸುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮಿಂದ ಹುಟ್ಟಿದ್ದು ಅದು. ತಾವು ಬಿಟ್ಟ ಮೇಲೆ ಅವರ ಕಡೆ ಸ್ನೇಹ ಹರಿಯುತ್ತದೆ. ಹಿಂದೆ ಒಂದು ಕಂಪನಿ ಇದ್ದದ್ದು ಈಗ 2-3 ಕಂಪನಿಗಳು ಆಗಿವೆ. ಆ ಕಂಪನಿ ಮಾಲೀಕರು ಯಾವಾಗಲೂ ವಿಧಾನಸೌಧದಲ್ಲಿ ಮಂತ್ರಿಗಳ ಮತ್ತು ದೊಡ್ಡ ದೊಡ್ಡವರ ಜೊತೆಗೆ ಓಡಾಡುತ್ತಿದ್ದಾರೆ. ಅದನ್ನು ನೋಡಿದರೆ ಅವರು ಅಂತಹ ಕಂಪನಿಗಳವರು ಹೇರಳವಾಗಿ ತೆರಿಗೆಗಳನ್ನು ತಪ್ಪಿಸಿಕೊಳ್ಳುತ್ತಿದ್ದಾರೆಂದು ಗೊತ್ತಾಗುತ್ತದೆ. ಹೇಗೆ ಎಂದರೆ ಅವರಿಗೆ ಬೇಕಾದಂಥ ಅಧಿಕಾರಿಗಳನ್ನು ಹಾಕಿಕೊಳ್ಳುತ್ತಾರೆ. ಅಂತಹ ಕಡೆಗಳಲ್ಲಿ ಒಬ್ಬ ತೆರಿಗೆ ವಸೂಲು ಮಾಡುವ ಅಧಿಕಾರಿಯನ್ನು ಕಳಿಸುವುದಾದರೆ ಚುನಾವಣೆಗೆ 2 ಲಕ್ಷ ರೂಪಾಯಿ ಕೊಡುತ್ತಾರೆ. ಇಂದು ಕೋಡ್ಲೇ ಕಂಪನಿಗೆ ಒಂದು ವರ್ಷದವರೆಗೆ ಕಳಿಸಿಕೊಟ್ಟರೆ 5 ಲಕ್ಷ ರೂಪಾಯಿಗಳನ್ನು ಬೇಕಾದರೆ ಸರ್ಕಾರಕ್ಕೆ ಕೊಡುತ್ತೇನೆ ಎಂದು ಹೇಳುವ ಅಧಿಕಾರಿಗಳು ಇದ್ದಾರೆ. ಇಂತಹ ಅಧಿಕಾರಿಗಳು ಇರುವಾಗ ಯಾರು ಹೆಚ್ಚಿಗೆ ಕೊಡುತ್ತಾರೆಂದು ತಿಳಿದುಕೊಳ್ಳುವ ಸಲುವಾಗಿ ಹರಾಜು ಹಾಕಿ ಬಿಡುವುದು ಒಳ್ಳೆಯದೆಂದು ಕಾಣುತ್ತದೆ. ನಂತರ ಯಾರು ಅತ್ಯಂತ ಹೆಚ್ಚಿಗೆ ಹಣ ಕೊಡುತ್ತೇನೆಂದು ಹೇಳುತ್ತಾರೋ ಅಂತಹವರನ್ನು ಒಂದೆರಡುವರ್ಷಗಳು ಅಲ್ಲಿಗೆ ಪೋಸ್ಟ್ ಮಾಡಿದರೆ ಸಾಕು; ಅವರೂ ಹಣ ಮಾಡಿಕೊಳ್ಳುತ್ತಾರೆ, ಸರ್ಕಾರಕ್ಕೂ ಕೊಡುತ್ತಾರೆ. ಮುಖ್ಯವಾಗಿ ಇಂದು ಸರ್ಕಾರಕ್ಕೆ ಹೆಚ್ಚಿಗೆ ತೆರಿಗೆ ಬರತಕ್ಕಂಥ ಮೂಲಗಳು ಎನಿವೆ ಅಂತಹ ಕಡೆಗಳಲ್ಲಿ ಸರ್ಕಾರದ ಪರವಾಗಿ ಇರುವ ಅಧಿಕಾರಿಗಳು ಕಂಪನಿಯ ಮಾಲೀಕರೊಡನೆ ಷರೀಕ್ ಆಗಿ ಉತ್ಪಾದನೆಯಾಗುವ ವಸ್ತುಗಳ ಲೆಕ್ಕ ಸರಿಯಾಗಿ ಸಿಗದಂತೆ ಮಾಡುತ್ತಿದ್ದಾರೆ. ಇದರಿಂದ ಅಲ್ಲಿ ಉತ್ಪಾದನೆಯಾಗುವ ವಸ್ತುಗಳು ತೆರಿಗೆ ಇಲ್ಲದೆ ಹೊರಗೆ ಹೋಗುವುದಕ್ಕೆ ಅವಕಾಶವಾಗಿದೆ. ಬ್ರಾಂದಿ, ವಿಸ್ಕಿ ಮತ್ತು ಬೀರನ್ನು ನೇರವಾಗಿ ಕ್ಲಬ್‌ಗಳಿಗೆ ಮತ್ತು ಬಾರ್‌ಗಳಿಗೆ ತೆರಿಗೆಯಿಂದ ತಪ್ಪಿಸಿಕೊಂಡು ಸರಬರಾಜು ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಸರ್ಕಾರದ ಪರವಾಗಿ ಇರುವ ಅಧಿಕಾರಿಗಳು ಎಚ್ಚರಿಕೆಯಿಂದ ಮತ್ತು ವಿಚಕ್ಷಣೆತೆಯಿಂದ ನೋಡಿಕೊಳ್ಳದೆ ಮಾಲೀಕರೊಡನೆ ಪರೀಕ್ಷ ಆಗಿರುವುದು. ಬೆಂಗಳೂರಿನಲ್ಲಿರುವ ಇಂತಹ ದೊಡ್ಡದೊಡ್ಡ ಕಾರ್ಖಾನೆಯವರು ಸರ್ಕಾರದೊಡನೆ ಸ್ನೇಹ ಮಾಡಿಕೊಂಡು ಜೊತೆಗೆ ಪೋಲೀಸರ ಸ್ನೇಹ ಬೆಳೆಸಿಕೊಂಡು ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳುತ್ತಿದ್ದಾರೆ ಈ ರೀತಿ ಪರೀಶ ಆಗಿರುವಂತಹ ಅಧಿಕಾರಿಗಳನ್ನು ಬಹಳ ಕಾಲ ಒಂದೇ ಕಡೆ ಇಡಬಾರದು, ಯಾರು ನಿಷ್ಠಾವಂತ ಅಧಿಕಾರಿಗಳು ಇದ್ದಾರೆ, ಅಂತಹವರನ್ನೇ ಈ ಕಂಪನಿಗಳಿಗೆ ಹಾಕಬೇಕು. ಇಂದು ಬೆಂಗಳೂರು ನಗರದಲ್ಲಿ ಎಷ್ಟು ಜನ ಅಧಿಕಾರಿಗಳು ಬಹಳ ವರ್ಷದಿಂದ ಇದ್ದಾರೆ, ಎಷ್ಟೆಷ್ಟು ಹಣ ಮಾಡಿದ್ದಾರೆ, ಎಷ್ಟೆಷ್ಟು ಮನೆಗಳನ್ನು ಮಾಡಿಕೊಂಡಿದ್ದಾರೆಂಬ ಬಗ್ಗೆ ಮಾನ್ಯ ಮಂತ್ರಿಗಳು ಸೀಕ್ರೆಟ್ ಫೈಲ್ ತರಿಸಿಕೊಂಡು ನೋಡಬೇಕು; ಆಗ ಎಲ್ಲವೂ ಗೊತ್ತಾಗುತ್ತದೆ ಮತ್ತು ಕೆಲವು ಅಧಿಕಾರಿಗಳು ಬೆಂಗಳೂರು ಬಿಟ್ಟು ಹೊರಗಡೆ ಹೋಗದಿರುವುದು ಸಹ ಗೊತ್ತಾಗುತ್ತದೆ. ಈ ದೃಷ್ಟಿಯಿಂದ ಈ ತೆರಿಗೆಯನ್ನು ಸರಿಯಾಗಿ ವಸೂಲಿ ಮಾಡುವ ಬಗ್ಗೆ ವಿಶೇಷ ಅಧ್ಯಯನ ಮಾಡುವುದರ ಮೂಲಕ ಪುನರ್ ಪರಿಶೀಲನೆ ಮಾಡಿ ಅದಕ್ಕೆ ಒಂದು ಹೊಸ ದೃಷ್ಟಿ ಕೋನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸೇಲ್ಸ್‌ಟ್ಯಾಕ್ಸ್ ಟ್ರಿಬ್ಯುನಲ್‌ನಲ್ಲಿ ಕೆಲಸ ಮಾಡುತ್ತಿರುವ ಎಸ್. ನಾರಾಯಣ್ ಎಂಬುವರಿಗೆ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಅಕೌಂಟೆಂಟ್ ಆಗಿ ಪಾರ್ಟ್ ಟೈಮ್ ಕೆಲಸ ಮಾಡಲು ಯಾವ ಕಾರಣದಿಂದ ಅನುಮತಿ ಕೊಟ್ಟಿದ್ದೀರಿ ? ಇದು ನ್ಯಾಯವೇ ಎಂದು ಕೇಳುತ್ತೇನೆ? ಏಕೆಂದರೆ ಇವರು ಟ್ರಿಬ್ಯುನಲ್‌ನಲ್ಲಿ ನ್ಯಾಯಾಂಗದ ದೃಷ್ಟಿಯಿಂದ ಕೆಲಸ ಮಾಡುತ್ತಿರುವಾಗ ಬೇರೆ ಕಡೆಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು ಸರಿಯೇ ?

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರು ಅನುಮತಿ ಕೊಟ್ಟಿಲ್ಲ; ಕೆ. ಕೆ. ಮೂರ್ತಿಯವರು ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಬೇರೆ ಕಡೆಯಲ್ಲಿಯೂ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟರೆ ಅವರು ಎಷ್ಟರಮಟ್ಟಿಗೆ ಪ್ರಾಮಾಣಿಕರಾಗಿ ಕೆಲಸ ಮಾಡಲು ಸಾಧ್ಯ ಎಂದು ಕೇಳಬೇಕಾಗಿದೆ. ಜೊತೆಗೆ ಕಾಲಾನುಕಾಲದ ನಂತರ ಈ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಕೂಡ

(ಶ್ರೀ ಕಾಗೋಡು ತಿಮ್ಮಪ್ಪ)

ತೆರಿಗೆ ಕೊಡುವ ಸಂಸ್ಥೆಯಾಗಬಹುದು ; ಆದಕಾರಣ ಅವರು ಯಾವುದಾದರು ಒಂದು ಕಡೆ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕು.

ಇನ್ನು ತಮ್ಮ ವರದಿಯಲ್ಲಿ ತೆರಿಗೆ ವಸೂಲಿಯಾಗದಿರುವ ಕೇಸ್‌ಗಳು ಎಷ್ಟು ಇವೆ, ಎಷ್ಟು ಕೇಸ್‌ಗಳು ಇತ್ಯರ್ಥವಾಗಿವೆ ಎಂಬ ಬಗ್ಗೆ ವಿವರ ಕೊಟ್ಟಿಲ್ಲ. ಜೊತೆಗೆ ತಮ್ಮ ವರದಿಯಲ್ಲಿ ಕಳೆದ ವರ್ಷ ಎಷ್ಟು ಕೇಸ್‌ಗಳು ಬಾಕಿ ಉಳಿದಿದ್ದವು, ಈ ವರ್ಷ ಎಷ್ಟು ಬಾಕಿ ಉಳಿದಿವೆ ಎಂಬುದನ್ನು ತಿಳಿಸಿದ್ದರೆ ತಮ್ಮ ತೆರಿಗೆ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬುದನ್ನು ತಿಳಿದುಕೊಳ್ಳ ಬಹುದಾಗಿತ್ತು. ಕೆಲವು ಕೇಸ್‌ಗಳು ಬಹಳ ಕಾಲದವರೆಗೆ ತೀರ್ಮಾನವಾಗದೆ ಬಾಕಿ ಇರುವುದನ್ನು ನಾವು ನೋಡುತ್ತಿದ್ದೇವೆ. ತಾವು ಅಡ್ವಾನ್ಸ್ ಟ್ಯಾಕ್ಸನ್ನು ವಸೂಲಿ ಮಾಡುವುದರಿಂದ ತೆರಿಗೆ ಯಲ್ಲಿ ಹೆಚ್ಚು ಕಡಿಮೆಯಾಗಿದ್ದರೆ ಹೊಂದಾಣಿಕೆ ಮಾಡುವುದಕ್ಕೂ ಸಹ ಅವಕಾಶವಿರುತ್ತದೆ. ಆ ರೀತಿ ಅವಕಾಶವಿದ್ದರೂ ಸಹ ಶೇಕಡ 30-40ರಷ್ಟು ಕೇಸ್‌ಗಳು ಇತ್ಯರ್ಥವಾಗದೆ ಬಾಕಿ ಉಳಿದಿರು ವುದಕ್ಕೆ ಕಾರಣವೇನು ? 5-10 ಪರ್ಸೆಂಟ್‌ನಷ್ಟು ಉಳಿದಿದ್ದರೆ ಅದು ಏನು ದೊಡ್ಡದಾಗುತ್ತಿರಲಿಲ್ಲ ; ಆದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬಾಕಿ ಉಳಿಯಲು ಕಾರಣವೇನು ? ಮುಖ್ಯವಾಗಿ ತಾವು ಉತ್ತರ ಕೊಡುವಾಗ ಅಸಿಸ್ಟೆಂಟ್ ಸೇಲ್ಸ್ ಟ್ಯಾಕ್ಸ್ ಆಫೀಸರ್ ಅವರ ಹತ್ತಿರ ಎಷ್ಟು ಕೇಸ್‌ಗಳು, ಜಿಲ್ಲಾ ಸೇಲ್ಸ್ ಟ್ಯಾಕ್ಸ್ ಆಫೀಸರ್ ಅವರ ಹತ್ತಿರ ಎಷ್ಟು ಕೇಸ್‌ಗಳು, ಮತ್ತು ಸೇಲ್ಸ್ ಟ್ಯಾಕ್ಸ್ ಟ್ರಿಬ್ಯುನಲ್‌ನಲ್ಲಿ ಎಷ್ಟು ಕೇಸ್‌ಗಳು ಕಳೆದವರ್ಷ ಬಾಕಿ ಉಳಿದಿದ್ದವು, ಈ ವರ್ಷ ಎಷ್ಟು ಬಾಕಿ ಉಳಿದಿವೆ ಎಂಬ ಬಗ್ಗೆ ಲೆಕ್ಕ ಕೊಡಬೇಕು, ಇದರಿಂದ ನಿಮ್ಮ ಪ್ರಗತಿ ಎಷ್ಟಾಗಿದೆ ಎಂದು ಅಂದಾಜು ಮಾಡಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತು ಒಂದು ವರ್ಷದ ಮೇಲ್ಪಟ್ಟು ಇತ್ಯರ್ಥ ವಾಗದೇ ಬಾಕಿ ಉಳಿದಿರುವ ಕೇಸ್‌ಗಳು ಶೇಕಡ 30-40 ರಷ್ಟು ಇವೆ ಎಂದು ಕೇಳಿದ್ದೇನೆ. ಇದಕ್ಕೆ ಅವಕಾಶ ಕೊಡಬಾರದು ; ಕೆಲವು ಕಡೆಗಳಲ್ಲಿ ತೆರಿಗೆ ಕೇಸ್‌ಗಳು ಜಾಸ್ತಿ ಇದ್ದರೆ ಅಂತಹ ಕಡೆಗಳಲ್ಲಿ ಸ್ಪೆಷಲ್ ಆಫೀಸರ್‌ಗಳನ್ನು ಹಾಕಿ ಅರ್ಜೆಂಟಾಗಿ ತೀರ್ಮಾನ ಮಾಡಬೇಕು. ಮುಖ್ಯವಾಗಿ ಲಾಂಗ್ ಪೆಂಡಿಂಗ್ ಕೇಸಸ್‌ಗಳು ಇಲ್ಲದಂತೆ ನೋಡಿಕೊಳ್ಳಬೇಕು. ಬಹಳ ಕಾಲದವರೆಗೆ ಇತ್ಯರ್ಥವಾಗ ದಿದ್ದರೆ ಕಿರುಕುಳ ಸಹ ಜಾಸ್ತಿಯಾಗುತ್ತದೆ. ಆದ್ದರಿಂದ ಇದನ್ನು ತಪ್ಪಿಸಬೇಕು.

ಇನ್ನು ತೆರಿಗೆದಾರರಿಗೆ ಲೆಕ್ಕ ಇಡುವುದಕ್ಕೆ ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದೀರಿ. ಅಂದರೆ ಟ್ರೇಡ್ ನಂಬರ್‌ನ್ನು ಜಾರಿಗೆ ತಂದಿದ್ದೀರಿ. ಇದು ಕಷ್ಟದ ಕೆಲಸವೆಂದು ವ್ಯಾಪಾರಸ್ಥರು ಹೇಳುತ್ತಿದ್ದಾರೆ. ಸಗಟು ವ್ಯಾಪಾರಸ್ಥರು ಟ್ರೇಡ್ ನಂಬರ್ ಇಡುವುದಕ್ಕೆ ಸಾಧ್ಯ. ಆದರೆ ಚಿಲ್ಲರೆ ಅಂಗಡಿಯವರು ಮತ್ತು ಸ್ಟೇಷನರಿ ಅಂಗಡಿಯವರು ಇದು ಕಷ್ಟದ ಕೆಲಸವೆಂದು ಹೇಳುತ್ತಿ ದ್ದಾರೆ. ಅವರಿಗೆ ನೂರಾರು ಸಾಮಾನುಗಳ ಲೆಕ್ಕ ಬರೆಯುವುದು ಕಷ್ಟವಾಗಿದೆ. ಈ ಅಂಶವನ್ನು ನಾವು ಈ ಹಿಂದೆ ಸೇಲ್ಸ್ ಟ್ಯಾಕ್ಸ್ ಅಡ್ವೈಸರಿ ಕಮಿಟಿಯಲ್ಲಿ ಸಹ ಹೇಳಿದ್ದೆವು. ಅದರ ಆ ಬಗ್ಗೆ ನೀವು ಎಷ್ಟರಮಟ್ಟಿಗೆ ಪ್ರಗತಿ ಸಾಧಿಸಿದ್ದೀರಿ ಎಂಬ ಬಗ್ಗೆ ನಿಮ್ಮ ವರದಿಯಲ್ಲಿ ಹೇಳಿಲ್ಲ. ಬೆಂಗಳೂರು ನಗರದಲ್ಲಿ ಈ ಪದ್ಧತಿಯನ್ನು ಜಾರಿಗೆ ತರಲಾಗಿದೆ ಎಂದು ಹೇಳಿದ್ದೀರಿ. ಆದರೆ ಅವರ ಬಗ್ಗೆ ಯಶಸ್ವಿಯಾಗಿದ್ದೀರಾ ಎಂಬುದನ್ನು ಮಾತ್ರ ಹೇಳಿಲ್ಲ ಈ ಬಗ್ಗೆ ತಮ್ಮ ಉತ್ತರದಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದೀರಿ ಎಂಬುದನ್ನು ಹೇಳಬೇಕು. ಇಂದು ಸರ್ಕಾರದ ಹತೋಟಿಯಲ್ಲಿ ನಡೆಯುವ ಅನೇಕ ಸೊಸೈಟಿಗಳು ಮತ್ತು ಜನತಾಬಜಾರ್‌ಗಳು ಇವೆ ಅವುಗಳಲ್ಲಿ ಈ ಪದ್ಧತಿಯನ್ನು ಅಳವ ಡಿಸಿದ್ದರೆ ಅವರು ಎಷ್ಟರಮಟ್ಟಿಗೆ ಲೆಕ್ಕಗಳನ್ನು ಬರೆದಿಟ್ಟಿದ್ದಾರೆಂಬುದನ್ನು ತಿಳಿಸಬೇಕು.

ಇನ್ನು ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಪಬ್ಲಿಸಿಟಿ ವಿಭಾಗ ಒಂದು ಇದೆ. ಈ ವಿಭಾಗ ದಿಂದ ಕೆಲವು ಅಧಿಕಾರಿಗಳು ಇತ್ತೀಚೆಗೆ ದೆಹಲಿ ಯಾತ್ರೆ ಕೈಕೊಂಡಿದ್ದರು, ಇದಕ್ಕೆ ಕಾರಣ ದೆಹಲಿ ಯಲ್ಲಿರುವ ಅಶೋಕ ಹೋಟೇಲ್‌ನಲ್ಲಿ ನಮ್ಮ ಸರ್ಕಾರದವರು ಪ್ರಾಗ್ರೆಸ್ಸ್ ಆಫ್ ಕರ್ನಾಟಕ ಎಂದು ಜಾತ್ರೆಯನ್ನು ನಡೆಸಿದರು. ಅಕಸ್ಮಾತ್ ನಾನು ಮತ್ತು ಶ್ರೀಮಾನ್ ದೇವೇಗೌಡರು ಅಲ್ಲಿಗೆ ಹೋಗಿದ್ದೆವು. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಿದರು. ನಮ್ಮ ರಾಜ್ಯದ ವಡೆ, ಇಡ್ಲಿ ಮುಂತಾದವನ್ನು ತಯಾರು ಮಾಡುವುದು ಹೇಗೆ ಎಂಬುದನ್ನು ಬೇರೆಯವರಿಗೆ ತೋರಿಸಿ ಕೊಡಲು ಅದನ್ನು ನಡೆಸಿದರು ಎಂದು ಕಾಣುತ್ತದೆ. ಅಲ್ಲಿಗೆ ವಾರ್ತಾ ಇಲಾಖೆಯ ಅಧಿಕಾರಿಗಳು ಸಹ ಹೋಗಿದ್ದರು. ಈ ಅಧಿಕಾರಿಗಳಿಗೂ ಅದಕ್ಕೂ ಏನು ಸಂಬಂಧವಿತ್ತು ಎಂಬುದು ಗೊತ್ತಾಗ ಲಿಲ್ಲ? ಆದರೂ ಈ ಒಂದು ಹೆಸರಿನಲ್ಲಿ ಅನೇಕ ಜನ ಅಧಿಕಾರಿಗಳು ದೆಹಲಿ ಯಾತ್ರೆ ಮಾಡಿದರು. ನಾವು ಅಲ್ಲಿಗೆ ಹೋದಾಗ ಈ ಅಧಿಕಾರಿಗಳು ನಮ್ಮ ಜೊತೆ ಮಾತನಾಡದೆ ತಪ್ಪಿಸಿಕೊಂಡು ಹೋಗುತ್ತಿದ್ದರು.

[MR. DEPUTY SPEAKER in the Chair]

3-30 P.M.

ಅವರು ಏತಕ್ಕೆ ಆ ರೀತಿ ಹೋಗುತ್ತಿದ್ದರೋ ಗೊತ್ತಿಲ್ಲ. ಸುಗಂಧಮಯ ಕರ್ನಾಟಕದ ಪರಿಮಳವನ್ನು ಅಶೋಕ ಹೋಟಲಿನಲ್ಲಿರತಕ್ಕ 3-4 ಜನಗಳೇ ಅನುಭವಿಸಬೇಕು, ದೆಹಲಿಯಲ್ಲಿರತಕ್ಕ ಜನಗಳು ಅದನ್ನು ಅನುಭವಿಸಬೇಕು ಎಂದು ಅದನ್ನು ಅಲ್ಲಿ ಮಾಡಿದ್ದಾರೆ ಎಂದು ಕಾಣುತ್ತದೆ. ದೆಹಲಿಯಲ್ಲಿರತಕ್ಕ ಶ್ರೀಮಂತ ವರ್ಗ ಏನಿದೆ ಅವರಿಗೆ ನಮ್ಮ ಕರ್ನಾಟಕದ ಇತಿಹಾಸವನ್ನು ತೋರಿಸಿ ಅವರನ್ನು ಮೆಚ್ಚಿಸಬೇಕು, ಅವನ್ನು ವಿಶ್ವವಿಖ್ಯಾತ ಮಾಡಿಕೊಳ್ಳಬೇಕು ಎಂದು ಪ್ರಯತ್ನ ಪಟ್ಟಿದ್ದಾರೆ. ಬಡಬೋರೇಗೌಡನ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ನಿಮ್ಮ ಜುಟ್ಟಿಗೆ ಮಲ್ಲಿಗೆ ಹೂವು ಏಕೆ ? ಇದು ಬೇಡ. ಇದನ್ನು ಅಷ್ಟು ಪ್ರಚಾರ ಮಾಡಬೇಕು ಎಂದರೆ ಇದನ್ನು ಹೊರದೇಶಕ್ಕೆ ಕಳುಹಿಸಿ. ಯಾವುದಾದರೂ ಖಾಸಗೀ ಹೋಟೇಲುಗಳಲ್ಲಿ ಇನ್ನು ಪ್ರಚಾರ ಮಾಡಿ. ಆ ರೀತಿ ಮಾಡದೆ ಇಂಥಾ ಸಣ್ಣ ಹೋಟೇಲಿನಲ್ಲಿ ಇದನ್ನು ಇಟ್ಟುಕೊಂಡು ಇದಕ್ಕೆ ಹಣವನ್ನು ಖರ್ಚು ಮಾಡಿ ಯಾರು ಯಾರದೊ ತಲೆವೋಲಿಸುವುದಕ್ಕೆ ಏತಕ್ಕೆ ಪ್ರಯತ್ನ ಮಾಡುತ್ತೀರಿ ? ಸರ್ಕಾರದ ವಾರ್ತಾ ಇಲಾಖೆ ಈ ಕೆಲಸವನ್ನು ಮಾಡುವುದಕ್ಕೆ ಹೊರಟರೆ ಇದಕ್ಕೆ ಏನು ಹೇಳಬೇಕೋ ಗೊತ್ತಿಲ್ಲ. ಸರ್ಕಾರದ ಹಣಕ್ಕೆ ಬೆಲೆ ಇದೆಯೇ ? ವಾರ್ತಾ ಇಲಾಖೆಯವರು ಒಳ್ಳೆಯ ಕೆಲಸವನ್ನು ಮಾಡುವುದಾದರೆ ಮಾಡಲಿ. ಮುಖ್ಯ ಮಂತ್ರಿಗಳನ್ನು ಕರೆಸಿ ವಿಜೃಂಭಣೆಯಿಂದ ಮೆರೆಸಿದ್ದಾರೆ. ಅಲ್ಲಿ ನಡೆದಂತಹ ಕಾರ್ಯಕ್ರಮಗಳು ಕರ್ನಾಟಕದ ಇತಿಹಾಸದಲ್ಲಿ ದಾಖಲು ಇರಬೇಕು ಕರ್ನಾಟಕದಲ್ಲಿ ಸುಗಂಧಮಯ ಕರ್ನಾಟಕ ಪ್ರದರ್ಶನವನ್ನು ಈ ರೀತಿ ನಡೆಸಿದರು ಎನ್ನುವುದನ್ನು ಜನಗಳು ಮರೆಯಬಾರದು ಎಂದು ಅದರ ಚಲನ ಚಿತ್ರಗಳನ್ನು ತೆಗೆಸಿರಬಹುದು ಎಂದು ಕಾಣುತ್ತದೆ. ಅಲ್ಲಿ ತೆಗೆದಂತಹ ಚಲನಚಿತ್ರವನ್ನು ಸೊಂಡೂರಿನಲ್ಲಿರುವ ಹಣಕಾಸಿನ ಮಂತ್ರಿಗಳ ಟಾಕೀಸಿಗೆ ಪ್ರದರ್ಶನ ಮಾಡುವುದಕ್ಕೆ ಕಳುಹಿಸಿದ್ದಾರೆ ಹೇಳಲಿ. ನಾನು ಇಷ್ಟರಲ್ಲೇ ಸೊಂಡೂರಿಗೆ ಹೋಗುವವನಿದ್ದೇನೆ. ಅಲ್ಲಿ ನಾನು ಅದನ್ನು ನೋಡುತ್ತೇನೆ.

ಭೂಸುಧಾರಣೆಗೆ ಸಂಬಂಧಪಟ್ಟ ಹಾಗೆ ಜನಗಳಿಗೆ ತಿಳುವಳಿಕೆ ನೀಡಲು ಚಲನಚಿತ್ರ ತಯಾರಿಸಿದ್ದಾರೆಯೇ ಆ ಕಾನೂನು ಜಾರಿಗೆ ಬಂದ ಮೇಲೆ ಆ ಬಗ್ಗೆ ಜನಗಳು ಏನೇನು ಮಾಡಬೇಕು ಎನ್ನುವ ವಿಷಯದಲ್ಲಿ ರೇಡಿಯೋ ಪ್ರಸಾರ ಮಾಡಿದರೇ ಎಲ್ಲಾ ಊರಿಗೂ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟಿನವರು ಪ್ರಸಾರ ಮಾಡಿದ್ದಾರೋ ಇಲ್ಲವೋ ಎಂಬುದು ಗೊತ್ತಾಗಲಿಲ್ಲ. ಭೂಸುಧಾರಣೆ ಕಾನೂನಿಗೆ ಸಂಬಂದಪಟ್ಟ ಹಾಗೆ ಜನಗಳಿಗೆ ಸ್ವಲ್ಪ ತಿಳುವಳಿಕೆಯನ್ನು ಕೊಟ್ಟಿದ್ದರೆ ಚೆನಾಗಿತ್ತು. ಏತಕ್ಕೆಂದರೆ ಈ ಭೂಸುಧಾರಣೆಯ ವಿಷಯದಲ್ಲಿ ಗೊತ್ತಿರುವವರೂ ಇದ್ದಾರೆ ಗೊತ್ತಿಲ್ಲದೇ ಇರುವವರು ಇದ್ದಾರೆ. ಇದನ್ನು ತಿಳಿದುಕೊಳ್ಳಬೇಕಾಗಿರತಕ್ಕವರು ಲಕ್ಷಾಂತರ ಜನಗಳಿದ್ದಾರೆ. ಯಾವುದೇ ಒಂದು ವಿಚಾರವಾಗಲೀ ಅದು ಗೆಜೆಟ್‌ನಲ್ಲಿ ಪಬ್ಲಿಷ್ ಆಯಿತು ಎಂದರೆ ಅದು ಎಲ್ಲಾ ಜನಗಳಿಗೂ ಗೊತ್ತಾಯಿತು ಎಂದು ಸರ್ಕಾರದ ಅರ್ಥ ಗ್ರಾಮಾಂತರ ಪ್ರದೇಶದಲ್ಲಿ ಎಷ್ಟೋ ಜನ ಪತ್ರಿಕೆಗಳನ್ನು ಓದುವುದಿಲ್ಲ. ರೇಡಿಯೋ ಕೇಳುವುದಿಲ್ಲ. ಆದ್ದರಿಂದ ವಾರ್ತಾ ಇಲಾಖೆಯವರು ತಮ್ಮ ವ್ಯಾನಿನಲ್ಲಿ ಪ್ರತಿಯೊಂದು ತಾಲ್ಲೂಕಿಗೂ, ಪ್ರತಿಯೊಂದು ಊರಿಗೂ ಹೋಗಿ ತಮಟೆ ಬಾರಿಸಿದ್ದಾರೆಯೇ ? ಪ್ರಚಾರ ಮಾಡಿದ್ದಾರೆಯೇ ಇಂಥಾದ್ದನ್ನು ಯಾರೂ ಮಾಡುವುದಿಲ್ಲ. ಮಂತ್ರಿಗಳು ಯಾವ ಕಡೆ ಪ್ರವಾಸ ಹೋಗುತ್ತಾರೆಯೋ ಅಂಥಾ ಕಡೆ ಬೆನ್ನು ಹತ್ತಿಕೊಂಡು ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟಿನವರು ಹೋಗುತ್ತಾರೆ. ಬೇರೆ ಸಂದರ್ಭದಲ್ಲಿ ಗ್ರಾಮಾಂತರಗಳಲ್ಲಿ ಎಷ್ಟೋ ಘಟನೆಗಳು ನಡೆಯುತ್ತವೆ. ಎಷ್ಟೋ ವಿಷಯಗಳು ಇರುತ್ತವೆ. ಅವನ್ನೆಲ್ಲಾ ಪ್ರಚಾರ ಮಾಡತಕ್ಕ ವ್ಯವಸ್ಥೆ ಇಲ್ಲ. ಮಂತ್ರಿಗಳ ಫೋಟೋ ಹಾಕುವುದು, ಅವರು ಗ್ರಾಮಾಂತರ ಪ್ರದೇಶಗಳಿಗೆ ಹೋದಾಗ ಏನು ಭಾಷಣ ನಡೆಯುತ್ತದೆ. ಅದನ್ನು ಮಾತ್ರ ಇವರು ಪ್ರಚಾರ ಮಾಡುತ್ತಾರೆ. ದೇಶದಲ್ಲಿ ಏನು ನಡೆಯುತ್ತದೆ ಅವನ್ನು ಪಕ್ಷಾತೀತವಾಗಿ ಪ್ರಚಾರ ಮಾಡಬೇಕು. ಈಗ ವಾರ್ತಾ ಇಲಾಖೆಯವರು ಕರ್ನಾಟಕ ಮುನ್ನಡೆ ಎನ್ನುವ ಪಬ್ಲಿಕೇಷನ್ ಹೊರಡಿಸುತ್ತಾರೆ ಅದರಲ್ಲಿ ಮಂತ್ರಿಗಳ ಭಾಷಣ ಮತ್ತು ಫೋಟೋವನ್ನು ಬಿಟ್ಟರೆ ಬೇರೆಯವರು ಏನು ಕಾರ್ಯಕ್ರಮ ಮಾಡಿದರೂ ಅದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ವಿರೋಧ ಪಕ್ಷದವರು ಮಾಡಿದ ಕಾರ್ಯಕ್ರಮದ ವಾಸನೆ ಬಂದರೂ ಕೂಡ ಇವರಿಗೆ ಆಗುವುದಿಲ್ಲ. ನಮ್ಮ ಕ್ಷೇತ್ರದಲ್ಲಿ ಒಂದು ಸಾರ್ವಜನಿಕ ವಿದ್ಯಾರ್ಥಿ ನಿಲಯ ಪ್ರಾರಂಭೋತ್ಸವವನ್ನು ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ನೆರವೇರಿಸಿದರು. ಆ ಸಮಾರಂಭಕ್ಕೆ ಶ್ರೀಮಾನ್ ಡಿ. ಕೆ. ನಾಯ್ಕರ್ ಅವರೂ ಬಂದಿದ್ದರು. ಆ ಸಂದರ್ಭದಲ್ಲಿ ನಡೆದಂತಹ ವಿಷಯಗಳನ್ನು ವಾರ್ತಾ ಇಲಾಖೆಯವರಿಗೆ ಕಳುಹಿಸಿದರೂ ಕೂಡ ಅವುಗಳನ್ನು

(ಶ್ರೀ ಕಾಗೋಡು ತಿಮ್ಮಪ್ಪ)

ವಾರ್ತಾ ಇಲಾಖೆಯ ಮುಖಾಂತರ ಹೊರಡಿಸುವ ಪತ್ರಿಕೆಯಲ್ಲಿ ಹಾಕತಕ್ಕಂಥಾ ಮನಸ್ಸು ಮಾಡಿಲ್ಲ. ಎಲ್ಲಾ ಮಂತ್ರಿಗಳು ಹೋಗುವ ಕಡೆ ಈ ವಾರ್ತಾ ಇಲಾಖೆಯವರು ಬರುವುದಿಲ್ಲ. ಸಣ್ಣ ಪುಟ್ಟ ಮಂತ್ರಿಗಳು ಹೋಗುವ ಕಡೆ ಇವರು ಬರುವುದಿಲ್ಲ. ಯಾರು ಸ್ವಲ್ಪ ಜಬರ್‌ದಸ್ತ್ ಆಗಿ ಇರುತ್ತಾರೆಯೋ ಅಂಥಾ ಕಡೆ ಮಾತ್ರ ಇವರು ಬರುತ್ತಾರೆ. ಪಕ್ಷಕ್ಕೆ ಸಂಬಂಧಪಟ್ಟ ವಿಷಯಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಕರ್ನಾಟಕದ ಚರಿತ್ರೆಯನ್ನು ದಾಖಲು ಇಡುವಾಗ ಕರ್ನಾಟಕದಲ್ಲಿನಡೆಯಬಹುದಾದ ಎಲ್ಲಾ ವಿಷಯಗಳನ್ನೂ ಸಂಗ್ರಹಣೆ ಮಾಡಿ ಅದರಲ್ಲಿ ಹಾಕಬೇಕು. ಬೇಕಾದ್ದನ್ನು ಹಾಕುವುದು ಬೇಡವಾದ್ದನ್ನು ಬಿಡುವುದು ಸರಿಯಲ್ಲ. ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇಡತಕ್ಕ ಸನ್ನಿವೇಶದಲ್ಲಿ ಒಬ್ಬ ವಿದೇಶಿ ಪತ್ರಿಕಾಪ್ರತಿನಿಧಿ ನ್ಯೂಯಾರ್ಕ್ ಟೈಂಮ್ಸ್‌ನಲ್ಲಿ ಬರೆದ ಲೇಖನವನ್ನು ವಾರ್ತಾ ಇಲಾಖೆಯವರು 1974 ನೇ ಇಸವಿ ಜನವರಿ ಫೆಬ್ರವರಿ ತಿಂಗಳಲ್ಲಿ ಹೊರಡಿಸಿದಂತಹ ಮಾರ್ಚ್ ಆಫ್ ಕರ್ನಾಟಕದಲ್ಲಿ ಪ್ರಕಟಿಸಿದ್ದಾರೆ. ಅದು ಈ ರೀತಿ ಇದೆ :—

> "What made a mere change even more complex was that one caste, the Lingayats mostly landlords, held political power here in the nineteen fifties and sixties. Essentially, their call to rename Mysore was viewed as caste domination, so opposition to the new name remained powerful."

ಎಂದು ಬರೆದಿದ್ದಾರೆ. ಇಂಥಾ ಲೇಖನಗಳನ್ನು ಅಚ್ಚು ಹಾಕಿಸಬೇಕಾದರೆ ಅದಕ್ಕೆ ವಾಸ್ತವಿಕವಾಗಿ ಇದ್ದಂತಹ ಹಿನ್ನಲೆ ರಾಜಕೀಯ ಕಾರಣ. ಇಂತಹವುಗಳನ್ನು ಏಕೆ ಹಾಕಬೇಕು ? ಕೇವಲ ಒಂದು ಪ್ರಚಾರದಲ್ಲಿ ಇಂಥಾ ವಿಷಯಗಳನ್ನು ಹಾಕುವುದು ತಪ್ಪು ಕಲ್ಪನೆಯನ್ನು ಮಾಡಿದಂತಾಗುತ್ತದೆ. ಲಿಂಗಾಯಿತರಿಗೋಸ್ಕರ ಕರ್ನಾಟಕ ಎನ್ನುವ ಹೆಸರನ್ನು ಇಡಬೇಕು ಎನ್ನುವ ತೀರ್ಮಾನವನ್ನು ಕೈಗೊಂಡಿದ್ದಾರೆ ಎನ್ನುವ ಅಭಿಪ್ರಾಯ ಬರುತ್ತದೆ. ಈ ಅಭಿಪ್ರಾಯ ಸಾಧುವಾಗಿರತಕ್ಕದ್ದೇ ಕರ್ನಾಟಕ ಎನ್ನುವ ಹೆಸರನ್ನು ಇಡುವುದಕ್ಕೆ ಎಲ್ಲಾ ವರ್ಗದ ಜನರೂ ಪ್ರಯತ್ನ ಮಾಡಿದ್ದಾರೆ. ಒಂದು ಸಾರಿ ಈ ಸಭೆಯಲ್ಲಿ ಕರ್ನಾಟಕ ಎಂದು ಹೆಸರಿಡಬೇಕೇ ಅಥವಾ ಮೈಸೂರು ಎಂದು ಇರಬೇಕೇ ಎನ್ನುವ ವಾದ ಬಂದಾಗ ಶ್ರೀಮಾನ್ ಗೋಪಾಲಗೌಡರು ಕರ್ನಾಟಕ ಎಂದು ಆಗಬೇಕು ಎನ್ನುವ ಬಗ್ಗೆ ಬಹಳ ದೀರ್ಘವಾಗಿ ವಾದ ಮಾಡಿದರು. ಅವರು ಎತ್ತಿದಂಥ ಆ ಮಾತನ್ನು ಮಾನ್ಯ ಶ್ರೀ ನಿಜಲಿಂಗಪ್ಪನವರೂ ಸಹ ಒಪ್ಪಿಕೊಂಡಿದ್ದರು ಎಂಬುದಾಗಿ ಅವರ ಸಮೀಪ ವ್ಯಕ್ತಿಗಳೇ ನನಗೆ ಹೇಳಿದರು. ಆಗ ಮಾನ್ಯ ಶ್ರೀ ಕೆ. ವಿ. ಪುಟ್ಟಪ್ಪನವರಂತಹ ದೊಡ್ಡ ದೊಡ್ಡ ಕವಿಗಳೂ, ಲೇಖಕರು, ಬರಹಗಾರರೆಲ್ಲರೂ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡಬೇಕೆಂದು ಎಲ್ಲ ವರ್ಗದ ಜನರೂ ಹೇಳಿದ್ದುಂಟು. ಆ ರೀತಿ ಇರುವಾಗ ರಾಜ್ಯ ಸರ್ಕಾರದಿಂದ ಹೊರಟಿರತಕ್ಕ ಪತ್ರಿಕೆಯಲ್ಲಿ ಇಂತಹ ಬೇರೆ ಭಾವನೆಯನ್ನು ರೂಪಿಸಿದರೆ ಇತಿಹಾಸಕ್ಕೆ ಅವರು ಏನು ಮಹತ್ವ ಕೊಟ್ಟಿದ್ದಾರೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಇತಿಹಾಸವನ್ನು ಬರೆಯತಕ್ಕವರು ಇದನ್ನು ಯಾವ ರೀತಿ ಅಳತೆ ಮಾಡಬೇಕು. ಆದ್ದರಿಂದ ಈ ಒಂದು ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಈ ರಾಜ್ಯದ ಪ್ರಮುಖ ಪತ್ರಿಕೆಯಲ್ಲಿ ಪ್ರಕಟವಾಗಬೇಕಾದರೆ, ಇರತಕ್ಕ ವಿಷಯಗಳನ್ನು ಸಂಪೂರ್ಣವಾಗಿ, ಸತ್ಯವಾಗಿ ಬಹಿರಂಗಪಡಿಸಬೇಕೇ ಹೊರತು, ಏನೋ ಕೆಲವರು ಅವರ ಮನಸ್ಸಿಗೆ ಬಂದಹಾಗೆ ವಿಷಯಗಳನ್ನು ಬಹಿರಂಗಪಡಿಸುವುದಕ್ಕೆ ಹೋಗಬಾರದು. ಒಂದು ವೇಳೆ ಕೇವಲ ಲಿಂಗಾಯಿತರನ್ನು ಮೆಚ್ಚಿಸಿಕೊಳ್ಳುವುದಕ್ಕೋಸ್ಕರ ಈ ರೀತಿ ಏನಾದರೂ ಮಾಡಿದ್ದಾರೋ ಏನೋ ಎಂಬ ಸಂಶಯ ಬಂದಿದೆ. ಇದೇ ಇದರಲ್ಲಿ ಇರತಕ್ಕ ಹಿನ್ನೆಲೆ ಎಂಬುದಾಗಿ ನಾನು ಕೇಳಬೇಕಾಗುತ್ತದೆ. ಏನೇ ಆಗಲಿ ತಪ್ಪು ವಿಚಾರಗಳನ್ನು ಇಂತಹ ಸರ್ಕಾರಿ ಮೂಲ ಪತ್ರಿಕೆಗಳಲ್ಲಿ ಪ್ರಕಟಪಡಿಸುವುದಕ್ಕೆ ಈ ಸರ್ಕಾರ ಹೇಗೆ ಅವಕಾಶವನ್ನು ಕೊಟ್ಟಿತು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಪ್ರಾಮುಖ್ಯವಾದ ಸತ್ಯಾಂಶಗಳನ್ನು ಸರ್ಕಾರದ ವತಿಯಿಂದ ಪ್ರಕಟಿಸುವಾಗ ಅದರಲ್ಲಿರತಕ್ಕ ಪ್ರಾಮುಖ್ಯತೆಯನ್ನೇ ಸರ್ಕಾರ ಕಳೆಯುವುದಕ್ಕೆ ಅವಕಾಶವನ್ನು ಕೊಡಬಾರದು. ಕರ್ನಾಟಕ ಎಂಬ ಪತ್ರಿಕೆಯಲ್ಲಿ ನಾನೇ ಒಂದು ಸಾರಿ ಒಂದು ಅಂಶವನ್ನು ಓದಿದ್ದೇನೆ. ಅದು ಯಾವ ಸಂದರ್ಭದಲ್ಲಿ ಅಂದರೆ, ಕಳೆದ ವರ್ಷ ಹಾಸನದಲ್ಲಿ ವಿದ್ಯಾರ್ಥಿ ಚಳುವಳಿಯಾದಾಗ ಅದರ ಬಗ್ಗೆ ಸರ್ಕಾರವೇ ನ್ಯಾಯಾಂಗ ತನಿಖೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ತಿಳಿಸಿತ್ತು. ಆದರೆ ಈ ಘಟನೆ ಏತಕ್ಕೋಸ್ಕರ ಆಯಿತು, ಅದೇನಾಯಿತು ಮುಂದೆ, ಇದನ್ನೆಲ್ಲಾ ಬಿಟ್ಟರು, ಯಾರೋ ವಿಧ್ವಂಸಕ ಕೃತ್ಯಗಳನ್ನು ಮಾಡಿದರೆಂದು ಇವರು ಪ್ರಕಟಿಸುವುದು ಆಗುತ್ತಿದೆ. ಯಾವುದಾದರೊಂದು

ದಾಖಲೆಯನ್ನು ಸೃಷ್ಟಿ ಮಾಡಬೇಕಾದರೆ, ಇಂತಹ ಚಳುವಳಿ ಏತಕ್ಕೋಸ್ಕರ ಆಯಿತು ಎಂಬುದು ನನಗಂತೂ ಚೆನ್ನಾಗಿ ಗೊತ್ತಿದೆ. ಪೋಲೀಸ್ ಠಾಣೆಯಲ್ಲಿ ಒಬ್ಬ ಯುವಕನನ್ನು ಹೊಡೆದಿದ್ದುದರ ದೆಸೆಯಿಂದ ಚಳುವಳಿ ಆಯಿತು, ಅವನು ಪೋಲೀಸ್ ಸ್ಟೇಷನ್ನಿನಲ್ಲಿಯೇ ಸತ್ತದ್ದೇ ಈ ಚಳುವಳಿಗೆ ಮುಖ್ಯ ಕಾರಣವಾಯಿತು. ಇಂಥಾದ್ದನ್ನೆಲ್ಲಾ ನಿಮ್ಮ ಪತ್ರಿಕೆಯಲ್ಲಿ ಪ್ರಕಟ ಮಾಡುವುದನ್ನು ಬಿಟ್ಟರು, ಕೆಲವರು ವಿಧ್ವಂಸಕ ಕೃತ್ಯಗಳನ್ನು ಮಾಡಿದರೆಂದು ಕೊಟ್ಟಿದ್ದಾರೆ. ವಿದ್ಯಾರ್ಥಿಗಳ ಚಳುವಳಿ ಆಯಿತು, ಇಷ್ಟು ಕಡೆ ಪೋಲೀಸಿನವರು ಲಾಠಿ ಚಾರ್ಜ್ ಮಾಡಿದ್ದಾರೆ, ಇಷ್ಟು ಜನ ಪೋಲೀಸಿನವರಿಗೆ ಗಾಯಗಳು ಆದುವು. ಬೇರೆ ಜನರು ಸತ್ತಿರುವುದು ಇಷ್ಟು ಎಂಬುದನ್ನು ನಿಮ್ಮ ಸರ್ಕಾರದ ಪತ್ರಿಕೆಯಲ್ಲಿ ಹೇಳುವುದೇ ಇಲ್ಲ. ನಿಮ್ಮ ಪತ್ರಿಕೆಗಳ ಅಂಕಿ ಅಂಶಗಳು ಏನು ಹೇಳುತ್ತವೆಂದರೆ, ಇಷ್ಟು ಜನ ಪೋಲೀಸಿನವರಿಗೆ ಹೊಡೆದಿದಾರೆ, ಗಾಯಗಳು ಇಷ್ಟು ಪೋಲೀಸಿನವರಿಗೆ ಆಗಿವೆ, ಜನರು ಸತ್ತಿದ್ದು ಇಲ್ಲವೇ ಇಲ್ಲ. ಸರ್ಕಾರದಲ್ಲಿರುವ ಅಧಿಕಾರಿಗಳಿಗೆ ಏನೇನು ತೊಂದರೆಗಳಾಗಿವೆ ಎಂಬುದನ್ನು ಪ್ರಚಾರಪಡಿಸುವುದಕ್ಕೆ ನಿಮ್ಮ ಪತ್ರಿಕೆಗಳು ಇವೆಯೊಂದು ಧಾರಾಳವಾಗಿ ಹೇಳಬಹುದು. ನಮ್ಮ ದೇಶದ ಜನರಿಗೆ ಆಗುತ್ತಿರುವ ಅನ್ಯಾಯಗಳೇನು, ಅವುಗಳ ಬಗ್ಗೆ ಸರ್ಕಾರ ಎಷ್ಟರ ಮಟ್ಟಿಗೆ ಕ್ರಮ ತೆಗೆದುಕೊಂಡಿದೆ, ಇತ್ಯಾದಿ ವಿಷಯಗಳನ್ನು ನಿಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಅಲ್ಲದೆ ನಿಮ್ಮ ಪತ್ರಿಕೆಗೆ ಬರುವ ಸುದ್ದಿ, ಸಮಾಚಾರಗಳನ್ನು ಸತ್ಯವಾಗಿ ಪ್ರಕಟನೆ ಮಾಡಬೇಕಾಗಿದೆ. ಬೇರೆ ಖಾಸಗೀ ಪತ್ರಿಕೆಗಳು ಎಲ್ಲ ಸುದ್ದಿ—ಸಮಾಚಾರಗಳನ್ನು ಸಂಕ್ಷೇಪವಾಗಿಯಾದರೂ ನಿಜಾಂಶಗಳನ್ನು ಕೂಡಿದ ಮಟ್ಟಿಗೂ ಹಾಕುತ್ತಾರೆ. ಅವರು ಒಳ್ಳೆಯದನ್ನೂ ಪ್ರಕಟಪಡಿಸುತ್ತಾರೆ ಕೆಟ್ಟದ್ದನ್ನೂ ಪ್ರಚಾರ ಮಾಡುತ್ತಾರೆ. ಮೊನ್ನೆ ಮೊನ್ನೆ ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಕೆಲವಾರು ಆರೋಪಣೆಗಳನ್ನು ಈ ಸಭೆಯಲ್ಲಿಯೇ ಮಾಡಿದರು. ಮಾನ್ಯ ಶ್ರೀ ಎಚ್. ಟಿ. ಕೃಷ್ಣಪ್ಪನವರು, ಮಾನ್ಯ ಸದಸ್ಯರು ಹೇಳಿದ್ದು ಸುಳ್ಳು ಎಂಬುದಾಗಿ ಈ ಸಭೆಯಲ್ಲಿಯೇ ಹೇಳಿಕೆ ಕೊಟ್ಟರು. ಅದನ್ನು ದೊಡ್ಡ ಅಕ್ಷರಗಳಲ್ಲಿ ಅಚ್ಚು ಮಾಡಿ ಪ್ರಕಟಪಡಿಸಿದರು. ಅಂದ ಮೇಲೆ ಅವರು ಎರಡು ಮುಖಗಳನ್ನೂ ಪ್ರಚಾರಪಡಿಸಿದರು. ಇದರಲ್ಲಿ ನಾವು ನಿಷ್ಠೂರ ಕಟ್ಟಿಕೊಳಬಾರದು. ಅಂದ ಮೇಲೆ ಇವರ ಕೈಲಿ ಆ ರೀತಿ ಏಕೆ ಅಗುವುದಿಲ್ಲ ? ಈ ದೇಶದಲ್ಲಿರತಕ್ಕ ನಿಜವಾದ ಸುದ್ದಿ ಸಮಾಚಾರವನ್ನು ಹೊರಡಿಸುವ ಬಗ್ಗೆ ಅವನ್ನು ಬಿಟ್ಟು ಈ ದೇಶದಲ್ಲಿ ನಡೆಯದಂಥ ಕೆಲಸ ಕಾರ್ಯಗಳ ಬಗ್ಗೆ ಪ್ರಚಾರಪಡಿಸುವುದು ಎಂದಿಗೂ ಸರಿಯಲ್ಲ. ಪತ್ರಿಕೆಗಳ ಮುಖ್ಯ ಕರ್ತವ್ಯವೇನು, ಪತ್ರಿಕಾ ರೀತಿನೀತಿಗಳೇನು ಎಂಬ ಬಗ್ಗೆ ನಿಮ್ಮ ಡೈರೆಕ್ಟರ್ ಅವರಿಗೆ ಸರಿಯಾದ ಅರಿವು ಇಲ್ಲದಿದ್ದರೆ ಅವರನ್ನು ಆ ಇಲಾಖೆಯಲ್ಲಿ ಏಕೆ ಇಟ್ಟುಕೊಂಡಿದ್ದೀರಿ ? ಪತ್ರಿಕೆಗಳನ್ನು ಚೆನ್ನಾಗಿ ನಡೆಸುವವರು ಬಹಳ ಮಂದಿ ಇದ್ದಾರೆ. ಅದರ ಅನುಭವ ಹೊಂದಿರುವವರು ಇರುವಾಗ ಇಂಥವರೇಕೆ ? ಕೇವಲ ನಿಮ್ಮ ಪತ್ರಿಕೆಗಳಲ್ಲಿ ಮಂತ್ರಿಗಳ ಮತ್ತು ಅಧಿಕಾರಿಗಳ ಸುದ್ದಿಯನ್ನು ಮಾತ್ರ ಪ್ರಚಾರ ಮಾಡುತ್ತೇವೆಂದು ಬೇಕಾದರೆ ಡಿಕ್ಲೇರ್ ಮಾಡಿದರೆ, ಆಗ ನಾವು ಯಾವ ಪ್ರಶ್ನೆಯನ್ನೂ ಕೇಳುವುದಿಲ್ಲ. ಸರ್ಕಾರ ಕೆಲಸವೆಂದರೆ, ಅದು ಇಡೀ ದೇಶದ ಜನರ ಕೆಲಸ, ದೇವರ ಕೆಲಸವಲ್ಲ. ಈ ದೇಶದ ಜನರಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳೂ ನಿಮ್ಮ ಪತ್ರಿಕೆಯಲ್ಲಿ ಬರುವಂತಾಗಬೇಕು. ಅದಕ್ಕಾಗಿ ನಿಮ್ಮ ವಾರ್ತಾ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಸರಿಯಾದ ಚಿಕಿತ್ಸೆ ಕೊಡಿ. ಇಂಜಕ್ಷನ್ ಕೊಡಿ. ಅವರ ತಲೆಯನ್ನು ಸರಿಮಾಡಿ. ತಲೆ ಸರಿಯಾದರೆ ಎಲ್ಲವೂ ಸರಿಹೋಗುತ್ತದೆ. ಏಕೆಂದರೆ ಅವರ ತಲೆಯಲ್ಲಿ ಯಾವುದೋ ಕೂತಿರುತ್ತದೆ. ಯಾರಾದರೂ ಬಂದು ಅವರಿಗೆ ಬೇಕಾದ್ದನ್ನು ಹೇಳಿದರೆ, ಅವರು ಅವರಿಗೆ ಬೇಕಾದವರು ಆಗಿದ್ದರೆ, ಕೂಡಲೇ ಅದನ್ನು ಪ್ರಕಟ ಮಾಡುತ್ತಾರೆ. ನಾನು ಹೇಳುವುದಿಷ್ಟೆ. ಆ ರೀತಿಯಾಗಿ ಅಲ್ಲಿನ ಅಧಿಕಾರಿಗಳು ಕೆಲಸ ಮಾಡುವುದನ್ನು ಕೂಡಲೇ ಬಿಟ್ಟು ಅವರು ಪಕ್ಷಾತೀತವಾಗಿ ಕೆಲಸ ಮಾಡಬೇಕು. ನೀವು ಇವತ್ತು ಆಡಳಿತದಲ್ಲಿರಬಹುದು, ನಾಳೆ ಮತ್ತೆ ಇನ್ನೊಬ್ಬರು ಈ ಒಂದು ಆಡಳಿತಕ್ಕೆ ಬರಬಹುದು. ಆದ್ದರಿಂದ ನಿಜವಾದ ಸುದ್ದಿಗಳನ್ನು ಕರ್ನಾಟಕ ಜನರನ್ನು ಪತಿನಿಧಿಸತಕ್ಕ ನಿಮ್ಮ ವಾರ್ತಾ ಇಲಾಖೆ ಏನಿದೆಯೋ ಅದರ ಮುಖಾಂತರ ಒಂದು ವ್ಯವಸ್ಥಿತವಾದ ಸುದ್ದಿ ಪ್ರಸಾರ ನಡೆಯುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಆ ಕೆಲಸವನ್ನು ನೀವು ಕೂಡಲೇ ಮಾಡಬೇಕು. ಕೇವಲ ಕೆಲವೇ ಜನರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗಿ ಕೆಲಸ ಮಾಡುವುದನ್ನು ಬಿಡಬೇಕು. ಏಕೆಂದರೆ ಇದು ಪತ್ರಿಕಾ ಕಸುಬು ಆಗುವುದಿಲ್ಲ. ಇದು ಅಡಕಸ್ಸಿ ಕೆಲಸವಾಗುತ್ತದೆ. ಕರ್ನಾಟಕ ರಾಜ್ಯದ ಎಲ್ಲ ಇಲಾಖೆಗಳನ್ನು ಪ್ರತಿಬಿಂಬಿಸುವ ಕೆಲಸವನ್ನು ನಿಮ್ಮ ಪತ್ರಿಕಾ ಇಲಾಖೆ ಮಾಡಬೇಕು.

ಇನ್ನು ನಿಮ್ಮ ಲಾಟರಿ ವಿಷಯ. ಇತ್ತೀಚೆಗೆ ಇದರಲ್ಲಿ ಲಾಭ ಹೆಚ್ಚಿಗೆ ಬರುತ್ತಾ ಇಲ್ಲ. ಕಳೆದ ವರ್ಷ ಕೇವಲ ಇದರಿಂದ 70 ಲಕ್ಷ ಸಂಪಾದನೆ ಮಾಡಿಕೊಂಡಿದ್ದೀರಿ. ವರಮಾನ ಇದರಲ್ಲಿ ಕಡಿಮೆಯಾಗುತ್ತಾ ಇದೆ. ಹಿಂದೆ ಲಾಟರಿ ಬಹುಮಾನಗಳನ್ನು ತೆಗೆದುಕೊಂಡು ಹೋಗದೆ ಇರತಕ್ಕ ಅನ್ಯ

(ಶ್ರೀ ಕಾಗೋಡು ತಿಮ್ಮಪ್ಪ)

ಕ್ಲೇಮ್ಡ್ ಬಹುಮಾನಗಳು ಬಹಳವಾಗಿವೆಯೆಂದು ಹೇಳಿದ್ದೀರಿ. ಇಲ್ಲಿಯವರೆಗೂ ಅಂಥಾದ್ದು ಎಷ್ಟಿವೆಯೆಂಬುದನ್ನು ತಾವು ಹೇಳಿಲ್ಲ. ನಿಮ್ಮ ಮನಸ್ಸಿನಲ್ಲಿಟ್ಟುಕೊಂಡರೆ ಅದು ನಮಗೆ ಗೊತ್ತಾಗುವುದು ಹೇಗೆ ? ನಿಮ್ಮ ಪತ್ರಿಕೆಯವರೂ ಸಹ ಹೇಳುವುದಿಲ್ಲ. ನಮಗೂ ಗೊತ್ತಾಗುವುದಿಲ್ಲ. ನಾವು ಆ ವಿಚಾರವನ್ನು ಹೇಗೆ ತಿಳಿಯಬೇಕು ? ಆದ್ದರಿಂದ ಈಗ ನಿಮ್ಮಲ್ಲಿ ಅನ್‌ಕ್ಲೇಮ್ಡ್ ಬಹುಮಾನಗಳು ಎಷ್ಟಿವೆ, ಅದನ್ನು ಎಷ್ಟು ವರ್ಷಗಳವರೆಗೆ ಇಟ್ಟುಕೊಳ್ಳುತ್ತೀರಿ ? ಆ ರೀತಿಯಾಗಿ ಅವು ಉಳಿದಿದ್ದ ಅವನ್ನೆಲ್ಲಾ ಯಾವಾಗ ಅಂತ್ಯವಾಗಿ ಏನು ಮಾಡುತ್ತೀರೆಂಬುದನ್ನು ಇದುವರೆಗೆ ತೀರ್ಮಾನ ಮಾಡಿದ್ದೀರಾ ? ಆ ರೀತಿಯಾಗಿ ತೀರ್ಮಾನ ಮಾಡದಿದ್ದರೆ, ಸರ್ಕಾರದಲ್ಲಿ ಅವನ್ನೆಲ್ಲಾ ಅನಾಮತ್ತಿನಲ್ಲಿ ಇಡುತ್ತೀರಾ ? ಅವನ್ನೆಲ್ಲಾ ಡಿಸ್‌ಪೋಜ್ ಮಾಡುವ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಾ ? ಜೊತೆಗೆ ಇನ್ನೊಂದು ವಿಷಯ. ತಾವು ಈ ರಾಜ್ಯದ ಎಲ್ಲಾ ಬಸ್ ಸ್ಟ್ಯಾಂಡಗಳಲ್ಲಿಯೂ ಸ್ವಲ್ಪ ಹೊತ್ತು ಪ್ರತಿದಿನವೂ ಓಡಾಡಿ ಬನ್ನಿ. ಅಲ್ಲ ಸಣ್ಣ ಸಣ್ಣ ಹೆಣ್ಣುಮಕ್ಕಳು ನಿಮ್ಮ ಲಾಟರಿ ಟಿಕೆಟ್ಟುಗಳನ್ನು ಕೈಲಿ ಹಿಡಿದುಕೊಂಡು ಓಡಾಡುತ್ತಾ ಇರುತ್ತಾರೆ. ನೀವು ಕಾರಿನಲ್ಲಿ ಹೋಗುತ್ತಾ ಸ್ವಲ್ಪ ಹೊತ್ತು ಅಲ್ಲಿ ನಿಂತರೆ ಸಾಕು, ಅವರು ನಿಮ್ಮಲ್ಲಿಗೆ ಬಂದು ಬಿಡುತ್ತಾರೆ. ಇಂತಹ ಪ್ರವೃತ್ತಿ ಅಲ್ಲಿ ಬೆಳೆಯುತ್ತಿದೆ. ಇದರಿಂದ ಬಡವರಿಗೆ ಜೀವನಕ್ಕೆ ಅನುಕೂಲವಾಗಲಿ ಎಂದು ನೀವು ಏನೋ ಮಾಡಿದ್ದೀರಿ. ನಾಲ್ಕಾರು ಟಿಕೆಟ್‌ಗಳನ್ನು ಮಾರಿ ಜೀವನ ಮಾಡುವ ಪ್ರವೃತ್ತಿ ಸರಿಯಲ್ಲ. ಅಲ್ಲಿ ಇರತಕ್ಕವರನ್ನು ಅವರು ಬಂದು ಒಂದು ಟಿಕೆಟ್ ತೆಗೆದುಕೊಳ್ಳಿ ಎಂಬುದಾಗಿ ಹಲ್ಲುಗಿರಿಯುವುದು. ಈ ಪ್ರವೃತ್ತಿ ಖಂಡಿತವಾಗಿ ಸರಿಯಲ್ಲ. ದೈನ್ಯತೆಯಿಂದ ತನ್ನ ಒಂದು ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಬಿಟ್ಟುಕೊಂಡು ಟಿಕೆಟ್ ತೆಗೆದುಕೊಳ್ಳಿ ಎಂಬುದಾಗಿ ಕೇಳುವ ಒಂದು ಪ್ರವೃತ್ತಿ ಅವರಲ್ಲಿ ಈಗ ಬೆಳೆಯುತ್ತಿದೆ. ಅದು ಬರಬಾರದು. ಬಡತನದಿಂದ ಏನಾದರೂ ಒಂದು ಕೆಲಸವಾದ ಬೇಕೆಂದು ಜೀವನ ಮಾಡುವ ಪ್ರಯತ್ನದಿಂದ ಇದು ಬಂದಿರಬಹುದು. ಅದರಲ್ಲಿಯೂ ಹೆಣ್ಣುಮಕ್ಕಳಿಗೆ ಇಷ್ಟು ದೂರ ದೈನ್ಯತೆ ಮಾಡಿ ಸಂಪಾದನೆ ಮಾಡಿಕೊಳ್ಳುವ ಪ್ರವೃತ್ತಿ ಸಣ್ಣ ಮಕ್ಕಳಲ್ಲಿಯೇ ಕಾಣಿಸುತ್ತಾ ಇರುವುದರಿಂದ, ಇದನ್ನು ಕೂಡಲೇ ತೆಗೆದುಹಾಕಿ. ಇದಕ್ಕೆ ಒಂದು ಪ್ರತ್ಯೇಕವಾಗಿ ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಇರುವುದರಿಂದ ಅದಕ್ಕೆ ಇದನ್ನೆಲ್ಲಾ ವಹಿಸಿ. ಇದಕ್ಕಾಗಿ ನಿಮ್ಮ ಸರ್ಕಾರದಲ್ಲಿ ಬೇರೊಂದು ಪ್ರತ್ಯೇಕವಾದ ಇಲಾಖೆಯನ್ನು ನಿರ್ಮಾಣ ಮಾಡಿ ಕೆಲಸ ಮಾಡುವುದಕ್ಕಾಗುವುದಿಲ್ಲ. ನೀವು ಸ್ಮಾಲ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಡುವ ಹಾಗೆ ಈ ಲಾಟರಿ ಟಿಕೆಟ್‌ಗಳನ್ನೂ ಸಹ ಎಲ್ಲ ಇಲಾಖೆಗಳಲ್ಲಿಯೂ ಇಡಿ. ಅಲ್ಲಿಯೇ ಹೋಗಿ ಜನರು ತೆಗೆದುಕೊಂಡು ಬರುತ್ತಾರೆ. ಅದನ್ನು ಮಾಡದೆ ಇದಕ್ಕಾಗಿಯೇ ಒಂದು ಪ್ರತ್ಯೇಕ ಇಲಾಖೆಯನ್ನು ಏತಕ್ಕೆ ಮಾಡಿದ್ದೀರಿ ? ನಿಮ್ಮವರಿಗೆ ಯಾರಿಗೋ ಒಂದು ಅಧಿಕಾರವನ್ನು ಕೊಡಲು ಹಾಗೂ ಎನ್‌ಕರೇಜ್‌ಮೆಂಟ್ ಕೊಡುವುದಕ್ಕೆ ಇಂಥಾದ್ದನ್ನೆಲ್ಲಾ ಮಾಡಿದ್ದೀರಿ. ಈ ರೀತಿ ಮಾಡಿ ಯಾರಿಗೆ ಪ್ರೋತ್ಸಾಹ ಕೊಟ್ಟಿದ್ದೀರಿ ಎಂಬುದೂ ಸಹ ನನಗೆ ಗೊತ್ತಿದೆ. ಕೆಲವರಿಗೆ ಹುದ್ದೆಗಳನ್ನು ಕೊಡುವುದಕ್ಕೆ ಮತ್ತೆ ಕೆಲವರಿಗೆ ಲಾಭ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯೆಂಬುದಾಗಿ ನಿರ್ಮಾಣ ಮಾಡಿ ಅವರಿಗೆ ಲಾಟರಿ ಟಿಕೆಟ್ ಮಾರುವ ಕೆಲಸವನ್ನು ಅವರಿಗೆ ಕೊಟ್ಟರೂ, ಅವರಿಗೆ ಕೊಟ್ಟಿರುವ ಕಮಿಷನ್ ಸಾಲದೆಂದು ಮತ್ತೆ ಸೇಕಡ 3 ರಷ್ಟು ಇನ್‌ಸೆಂಟಿವ್ ಬೋನಸ್ ಎಂದು ಕೊಟ್ಟಿದ್ದೀರಿ. ಆ ರೀತಿ ಕೊಟ್ಟರೂ ಇನ್ನು ಆ ವ್ಯಾಪಾರ ಕುದುರಲಿಲ್ಲ. ಮತ್ತೆ ಲುಕ್ಸಾನು ಆಗುತ್ತಿದೆ. ಈ ಸಂಸ್ಥೆ ಗಣನೀಯವಾಗಿ ಲಾಭವಾಡುತ್ತಿಲ್ಲ. ಹೋದ ಸಾರಿಯೂ ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಕಳೆದ ವರ್ಷ 127 ಲಕ್ಷ ಸಂಪಾದನೆ ಮಾಡಿದೆ. ಈ ವರ್ಷ 70 ಲಕ್ಷ ಮಾತ್ರ ನೆಟ್ ಇನ್‌ಕಂ ಸಂಪಾದನೆ ಬಂದಿದೆ

ಮುಂದಿನ ವರ್ಷ ಅದು ಇನ್ನೂ ಕಡಿಮೆಯಾಗುತ್ತಾ ಹೋಗುತ್ತದೆ. ಸರ್ಕಾರಕ್ಕೆ ಈ 70 ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡಿಕೊಳ್ಳುವುದು ಅಷ್ಟೇನೂ ಕಷ್ಟವಾದುದಲ್ಲ. ಕೆಲವು ದೊಡ್ಡ ದೊಡ್ಡ ಜನರಿದ್ದಾರೆ, ವರ್ಚಸ್ಸುಳ್ಳ ಜನರಿದ್ದಾರೆ. ಅಂಥವರ ಕೆಲವರ ಹೆಸರನ್ನು ಬೇಕಾದರೆ ನಾನೇ ಹೇಳುತ್ತೇನೆ, ಮಾನ್ಯ ಸಚಿವರು ನೆನಪಿಟ್ಟುಕೊಂಡರೆ ಸಾಕು. ಅವರಿಂದ ಕೋಟಿಗಟ್ಟಲೆ ಹಣವನ್ನು ಸಂಪಾದನೆಮಾಡಿಕೊಳ್ಳಬಹುದು. ಆ ಇಡಗರ್ ಡ್ಯಾಮಿನ ಬಗ್ಗೆ ಕೆಲಸ ಸಕಾಲಕ್ಕೆ ಮುಗಿಸದೆ ಇದ್ದರೂ ಸರ್ಕಾರದವರು ಆ ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ ಅದೆಷ್ಟೋ ಹಣವನ್ನು ಆ ಡೆಪಾಜಿಟ್ ಮತ್ತು ಅರ್ನೆಸ್ಟ್ ಮೊನಿ ಬಗ್ಗೆ ಕೊಟ್ಟರು. ಅಂಥ ಸಂದರ್ಭದಲ್ಲಿ ಅವರು ಕೆಲಸವನ್ನು ಸಕಾಲಕ್ಕೆ ಮುಗಿಸದೆ ಇದ್ದುದರಿಂದ ಅವರು ಇಟ್ಟಿದ್ದ ಡೆಪಾಜಿಟ್ ಮತ್ತು ಅರ್ನೆಸ್ಟ್ ಹಣವನ್ನೆಲ್ಲಾ ಸರ್ಕಾರಕ್ಕೆ ಫರ್‌ಫೀಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಕಾನೂನ್ನು

ಪ್ರಕಾರ ಇದೆ. ಅಂಥ ಸಂದರ್ಭದಲ್ಲಿ ಈ ಲಾಟರಿ ಟಿಕೆಟ್ಟುಗಳನ್ನು ಅವರಿಗೆ ಎಷ್ಟು ಬೇಕಾದರೂ ಕಟ್ಟಬಹುದು. ಏಕೆಂದರೆ ಅವರಿಗೆ ಸಲ್ಲತಕ್ಕ ಹಣವನ್ನು ಫರ್‌ಫೀಟ್ ಮಾಡಿಕೊಳ್ಳತಕ್ಕ ಧೈರ್ಯ ನಮ್ಮ ಸರ್ಕಾರಕ್ಕೆ ಇಲ್ಲ. ಕಾರಣ ಅವರು ಮುಖ್ಯಮಂತ್ರಿಗಳ ಕಾರನ್ನೇ ಓಡಾಡುತ್ತಿರುತ್ತಾರೆ, ಅಂದಾಗ ಅವರ ಹಣವನ್ನು ಇವರು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆಲ್ಲಿ ಧೈರ್ಯಬರುತ್ತು? ಅದೇರೀತಿ ಆ ಮಲಪ್ರಭಾ ಪ್ರಾಜೆಕ್ಟಿನ ಕಂಟ್ರಾಕ್ಟರ ಬಗ್ಗೆಯೂ ಮಾಡಬಹುದು. ಆದರೆ ಅದೇಕೋ ಆ ಪ್ರಕರಣ ಇನ್ನೂ ಹೊರಕ್ಕೇ ಬರಲಿಲ್ಲ. ಕಾರಣ ಅದರಲ್ಲಿ ಸಿಕ್ಕಿಕೊಂಡಿರತಕ್ಕ ಜನರು ಅಂಥ ವರ್ಚಸ್ಸುಳ್ಳವರು. ಹಾಗೇ ಆ ಹಾಸನದ ಪ್ರಕರಣ. ಅದೂ ಕೂಡ ಹೊರಕ್ಕೆ ಬರಲಿಲ್ಲ. ಇಂಥ ಸಂದರ್ಭಗಳಲ್ಲಿ ಒಂದೆರಡು ಇದ್ದರೂ ಇವರಿಂದ ಕೋಟಿಗಟ್ಟಲೆ ಹಣವನ್ನು ಪಡೆಯಲು ಅವಕಾಶ ವಿದೆ. ಇದರ ಜೊತೆಗೆ ಮಾನ್ಯ ಸಚಿವರುಗಳು ಪದೇ ಪದೇ ಡೆಲ್ಲಿಗೆ ಹೋಗುವುದನ್ನು ಕಡಿಮೆ ಮಾಡಿದರೆ ಸರ್ಕಾರದಲ್ಲಿ ಉಳಿತಾಯ ಜಾಸ್ತಿಯಾಗುತ್ತದೆ. ಹೀಗೆಲ್ಲಾ ಹಣ ಸಂಪಾದನೆ ಮಾಡುವು ದಕ್ಕೂ ಅವಕಾಶವಿರುವುದರಿಂದ ಈ ಲಾಟರಿ ಮತ್ತು ಜೂಜುಗಳನ್ನು ಸರ್ಕಾರ ದಯಮಾಡಿ ಕೈಬಿಡಬೇಕೆಂದು ಒತ್ತಾಯ ಮಾಡುತ್ತೇನೆ. ಆದರೆ ಕುದುರೆ ಜೂಜಿಗೆ ಈಗೇನು ತೆರಿಗೆಯನ್ನು ಹಾಕುತ್ತಿದ್ದಾರೆ ಅದನ್ನು ಬೇಕಾದರೆ ಡಬ್ಬಲ್ ಮಾಡಿದರೂ ಅದಕ್ಕೆ ನನ್ನ ಸ್ವಾಗತವಿದೆ. ಗಾಲ್ಫ್ ಆಟಕ್ಕೂ ಕೂಡ ತೆರಿಗೆಯನ್ನು ಹಾಕಬೇಕೆಂದು ನಾನು ಸೂಚನೆ ಮಾಡಬಯಸುತ್ತೇನೆ. ಅದೇರೀತಿ ಆ ಅಶೋಕ ಹೋಟೆಲಿಗೆ ಹೋಗತಕ್ಕ ಜನರು ಯಾರಿದ್ದಾರೆ ಅವರಿಗೂ ಕೂಡ ಒಂದು ಸೀಟಿಗೆ 5 ರೂಪಾಯಿನಂತೆ ತೆರಿಗೆ ಹಾಕಬಹುದೆಂದು ನಾನು ಸೂಚನೆ ಮಾಡಬಯಸುತ್ತೇನೆ. ಹಾಗೇ ಬೆಂಗ ಳೂರಿಗೆ ಕೆಲವು ಲಗ್ಜುರಿ ಸಿನೀಮಾ ಥಿಯೇಟರುಗಳಿವೆ. ಅವುಗಳಿಗೆ ಒಂದು ಷೋಗೆ ಒಂದು ಥಿಯೇಟ ರಿಗೆ 200 ರೂಪಾಯಿಗಳ ತೆರಿಗೆಯನ್ನು ಹಾಕಿದರೂ ಕೂಡ ಬಹಳ ಕಡಿಮೆಯೆಂದೇ ನನ್ನ ಭಾವನೆ. ಇನ್ನು ಕೆಲವು ಈ ಸಿನೀಮಾ ಥಿಯೇಟರುಗಳನ್ನು ಕಟ್ಟಿಸತಕ್ಕವರಿಗೆ ಸರ್ಕಾರದವರು ಲೈಸೆನ್ಸ್ ಏನು ಕೊಡುತ್ತಾರೆ ಅಂಥ ಸಂದರ್ಭಗಳಲ್ಲಿ ಇವರು ತಮ್ಮ ಪಕ್ಷದ ಪಾರ್ಟಿಫಂಡಿಗೇನು ಹಣವನ್ನು ವಸೂಲ್ಮಾಡಿಕೊಳ್ಳುತ್ತಿದ್ದಾರೆ, ಅದನ್ನು ಬಿಟ್ಟು ಸರ್ಕಾರಕ್ಕೆ ಒಂದಲ್ಲ ಐದು ಲಕ್ಷ ಕೇಳಿದರೂ ಅವರು ಕೊಡುವುದಕ್ಕೆ ತಯಾರಿರುತ್ತಾರೆ. ಹೀಗೆ ಸರ್ಕಾರಕ್ಕೆ ಹಣವನ್ನು ಪಡೆಯಲು ಅನೇಕ ಮಾರ್ಗಗಳಿವೆ ಆದುದರಿಂದ ಈ ಲಾಟರಿ ಇರಲೇಬೇಕೆಂಬ ಕಡ್ಡಾಯವಿಲ್ಲ ಎಂಬುದಕ್ಕೆ ನಾನು ಈ ಕೆಲವು ನಿದರ್ಶನಗಳನ್ನು ಕೊಟ್ಟೆನು ಸರ್ಕಾರದವರು ಆದಷ್ಟೂ ಹೆಚ್ಚು ಹೆಚ್ಚು ಪ್ರತ್ಯಕ್ಷ ತೆರಿಗೆ ಯನ್ನು ಹಾಕಬೇಕೆಂಬುದು ನನ್ನ ಸಲಹೆ. ಇನ್ನೂ ದೊಡ್ಡ ನೀರಾವರಿ ಯೋಜನೆಗಳ ಕೆಳಗೆ ರೈತರಿಗೆ ತೆರಿಗೆಯನ್ನು ವಿಧಿಸಿರುವುದಿಲ್ಲ. ಈ ದೊಡ್ಡ ದೊಡ್ಡ ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಗಳ ಕೆಳಗಿರತಕ್ಕ ಭೂಮಿ ಒಂದಾನೊಂದು ಕಾಲದಲ್ಲಿ ಒಣ ಬಂಜರ್ ಖುಷ್ಕಿ ಭೂಮಿಯಾಗಿತ್ತು. ಆದರೆ ಈ ದಿವಸ ಅಲ್ಲಿ ನೀರಿನ ಸೌಕರ್ಯ ಸಿಕ್ಕು ಅದು ಬಹಳ ಫಲವತ್ತಾದ ಭೂಮಿಯಾಗಿದೆ. ಅಲ್ಲಿ ಅನೇಕರು 25;50; 100 ಎಕರೆ ಭೂಮಿಯನ್ನು ಇಟ್ಟುಕೊಂಡು ಅಲ್ಲಿ ಲಾಭದಾಯಕವಾದ ಕಬ್ಬು, ಭತ್ತ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಅಂಥವರ ಮೇಲೆ ಅಗ್ರಿಕಲ್ಚರಲ್ ತೆರಿಗೆಯನ್ನು ಹಾಕದೆ ಕೈಬಿಡಲಾಗಿದೆ. ಕೆಲವು ಕಡೆ ಕೆಲವರಮೇಲೆ ಹಾಕಿರಬಹುದು. ಆದರೆ ತೆರಿಗೆ ಕೊಡತಕ್ಕ ಜನರು ಇನ್ನೂ ಅನೇಕರು ಕೊಡದಂತೆ ತಪ್ಪಿಸಿಕೊಂಡಿದ್ದಾರೆ. ಅಂಥವರಿಗೆ ತೆರಿಗೆ ಹಾಕಬೇಕೆಂದು ಸಲಹೆ ಮಾಡುತ್ತೇನೆ. ನಮಗೆ ಆಹಾರದ ಕೊರತೆಯಿದ್ದರೂ ಕೆಲವರು ಕಮರ್ಷಿಯಲ್ ಕ್ರಾಪುಗ ಳನ್ನೇ ಬೆಳೆಯುತ್ತಿದ್ದಾರೆ...

ಶ್ರೀ ಎಚ್. ಡಿ. ದೇವೇಗೌಡ.—ನನಗೆ ಲಾಯರ್ ವೃತ್ತಿ ಏನೆಂಬುದೇ ತಿಳಿಯದು. ಆದಾಗ್ಯೂ ಅವರಿಗೆ ತಿಂಗಳಿಗೆ ಒಬ್ಬೊಬ್ಬರಿಗೂ ಐದು ಸಾವಿರದಿಂದ—ಹತ್ತು ಸಾವಿರದವರೆಗೂ ಸಂಪಾದನೆ ಇದೆ ಎಂದು ಹೇಳಿದರೆ, ಆ ಕಷ್ಟ ಲಾಯರಾಗಿರತಕ್ಕ ಶ್ರೀ ತಿಮ್ಮಪ್ಪನವರಿಗೆ ಗೊತ್ತೇ ವಿನಾ ನನಗೇನು ಅದು ಅರ್ಥವಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ.—ಸುಪ್ರೀಂ ಕೋರ್ಟಿನಲ್ಲಿ ಆ ಗೋದಾವರಿ ನೀರಿನ ಬಗ್ಗೆ ವಾದ ಮಾಡಿದ ಲಾಯರುಗಳಿಗೆ ತಲಾ 50 ಲಕ್ಷದವರೆಗೂ ಕೊಟ್ಟಿದ್ದಾರೆ. ಅಂದರೆ ಈ ಹೈಕೋರ್ಟು ಸುಪ್ರೀಂ ಕೋರ್ಟುಗಳಲ್ಲಿ ವಾದ ಮಾಡತಕ್ಕ ಲಾಯರುಗಳಿಗೆ ಹೆಚ್ಚಿನ ಸಂಪಾದನೆ ಇದೆಯೇ ವಿನಾ ಉಳಿದವರಿಗಿರತಕ್ಕ ಸಂಪಾದನೆ ಹೇಳುವುದಕ್ಕೆ ನನಗೇ ಸಂಕೋಚವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ವ್ಯವಸಾಯಗಾರರ ವಿಷಯದಲ್ಲೂ ಅದೇರೀತಿ ಇರು ತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆದರೆ ನಾನು ಹೇಳುತ್ತಿರುವುದು ದೊಡ್ಡ ದೊಡ್ಡ ಡ್ಯಾಮುಗಳ ಕೆಳಗಿರತಕ್ಕ ವ್ಯವಸಾಯಗಾರರಲ್ಲಿ ಅನೇಕರು ಅಡಕೆತೋಟಗಳನ್ನು ಇಟ್ಟುಕೊಂಡಿದ್ದಾರೆ. ಹಿಂದೆ ಇವರಲ್ಲಿ ಕೆಲವರು ತೆರಿಗೆಯನ್ನು ಕೊಡುತ್ತಿದ್ದವರು ಈಗ ಅವರು ಆ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ತೆರಿಗೆಯನ್ನು ತಪ್ಪಿಸಿಕೊಳ್ಳುತ್ತಿದ್ದಾರೆ. ಇದನ್ನು ಪರಿಶೀಲಿಸಬೇಕೆಂದು ಹೇಳುತ್ತೇನೆ.

4-00 P.M.

ಮಲೆನಾಡಿನಲ್ಲಿ ವ್ಯವಸಾಯಮಾಡುವವರಿಗೆ ಹೆಚ್ಚು ಆದಾಯ ಸಿಕ್ಕುವುದಿಲ್ಲ, ಮಳೆಯ ನೀರೇ ಅಲ್ಲಿ ಆಧಾರ, ಕೆರೆಗಳಗಿನ ಜಮೀನಿನಿಂದಲೂ ಆದಾಯ ಕಡಮೆ. ಇಂದು ಶರಾವತಿ ಯೋಜನೆ, ಕಾಳಿ ಯೋಜನೆ, ವಾರಾಹಿ ಯೋಜನೆ ಮುಂತಾದವುಗಳಿಂದ ಸಾಕಷ್ಟು ಜಮೀನು ಮುಳುಗಡೆಯಾಗಿದೆ, ಅಲ್ಲಿ ಅಮೀನು ಕಳೆದುಕೊಂಡವರಿಗೆ ಸಾಕಷ್ಟು ಇತರೆ ಕಡೆ ದೊರೆತಿಲ್ಲ. ಮಳೆಗಾಲ ಕಳೆದಮೇಲೆ ಮಲೆನಾಡಿನಲ್ಲಿ ಕುಡಿಯುವುದಕ್ಕೆ ನೀರೇ ಇರುವುದಿಲ್ಲ, ಅಲ್ಲಿ ಪಿಕಪ್ ಮತ್ತು ಸಣ್ಣ ಕೆರೆಗಳನ್ನು ಹೆಚ್ಚಾಗಿ ಮಾಡಬೇಕು. ಸಣ್ಣ ನೀರಾವರಿಗೆ ಮಲೆನಾಡಿನಲ್ಲಿ ಹೆಚ್ಚು ಅವಕಾಶ ಮಾಡಬೇಕು. ಇದಕ್ಕೆ ಸ್ವಲ್ಪ ಹಣ ಕೊಡಬೇಕು. ಅಲ್ಲಿ ಡೀಸಿಲ್ಟಿಂಗ್ ಮಾಡಬೇಕು. ಇದನ್ನು ಎಷ್ಟು ಹೇಳಿದರೂ ಅಧಿಕಾರಿಗಳ ತಲೆಗೆ ಹೊಳೆಯುವುದಿಲ್ಲ, ಕೆರೆಯ ಬಳಿಗೆ ಕರೆದುಕೊಂಡು ಹೋಗಿ ಅವರಿಗೆ ತೋರಿಸಬೇಕಾಗಿದೆ. ಡೀಸಿಲ್ಟಿಂಗ್ ಮಾಡುವುದಕ್ಕೆ ಹಣ ಒದಗಿಸಬೇಕು. ದೊಡ್ಡ ನೀರಾವರಿ ಯೋಜನೆಗಳಿಂದ ಪ್ರಯೋಜನ ಪಡೆಯುವ ಜಮೀನುದಾರರಿಂದ ಹೆಚ್ಚು ತೆರಿಗೆ ವಸೂಲು ಮಾಡಿ ಅದನ್ನು ಮಲೆನಾಡಿಗೆ ಕೊಡಬೇಕು. ಸಣ್ಣ ನೀರಾವರಿಗೆ ಸ್ವಲ್ಪ ಹೆಚ್ಚು ಹಣ ಒದಗಿಸಬೇಕು. ಅದನ್ನು ತೆರಿಗೆ ಮೂಲಕ ನಾನು ಸೂಚಿಸಿದಂತೆ ವಸೂಲುಮಾಡಿ. ತೆರಿಗೆ ವಿಚಾರದಲ್ಲಿ ಸರಕಾರದವರು ನಿದ್ದೆ ಮಾಡುತ್ತಿದ್ದಾರೆ, ಇದಕ್ಕೆ ಹೊಸ ಸ್ವರೂಪ ಕೊಡಬೇಕು, ಸ್ವಲ್ಪ ದೀರ್ಘವಾಗಿ ಯೋಚನೆ ಮಾಡಿ ಹೊಸ ಶಕ್ತಿ ಕೊಡಬೇಕು. ಕೇವಲ ಸೊಂಡೂರಿಗೆ ಪ್ರಾಮುಖ್ಯತೆ ಕೊಡದೆ ಕರ್ನಾಟಕ ರಾಜ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು, ಇದರ ಕಡೆ ನಮ್ಮ ಸಚಿವರು ಕಾರ್ಯೋನ್ಮುಖರಾಗಲಿ ಎಂದು ಸೂಚಿಸಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

† ಶ್ರೀ ಆರ್. ಗಂಡೂರಾವ್ (ಸೋಮವಾರಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಅರ್ಥ ಸಚಿವರು ಮಂಡಿಸಿರುವ ಬೇಡಿಕೆಯನ್ನು ಸ್ವಾಗತಿಸುತ್ತಾ ನಾಲ್ಕಾರು ವರ್ಷಗಳಿಂದ ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ ಏನು ಅಭಿವೃದ್ಧಿಯಾಗಿದೆ ಮತ್ತು ಇನ್ನೂ ಏನೇನು ಮಾಡಬೇಕು ಎಂಬ ಬಗ್ಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅವರ ವರದಿಯ ಪ್ರಕಾರ 4969—70 ರಲ್ಲಿ ಸೇಲ್ಸ್‌ಟ್ಯಾಕ್ಸಿನಿಂದ ಕೇವಲ 46 ಕೋಟಿ ರೂಪಾಯಿಗಳ ಆದಾಯವಿತ್ತು. ಈಗ 1972-73ರಲ್ಲಿ ಅದು 65 ಕೋಟಿಯಾಗಿ 1973—74ರಲ್ಲಿ 70 ಕೋಟಿ ರೂಪಾಯಿ ವರಮಾನ ಬರುವ ಅಂದಾಜಾಗಿದೆ. ಬಹುಶ: ಈ ಇಲಾಖೆಯಲ್ಲಿ ಒಳ್ಳೆಯ ಪ್ರಗತಿಯಾಗಿದೆ ಎಂದು ಹೇಳಬಹುದು. ಇನ್ನೂ ಇದರ ಉತ್ಪತ್ತಿ ಹೆಚ್ಚಿಸು ಮಾರು 100 ಕೋಟಿ ರೂಪಾಯಿ ಆಗಬಹುದು. ಆದರೆ ಇದರ ಬಗ್ಗೆ ಹೆಚ್ಚು ದಕ್ಷತೆ ಅವಶ್ಯಕ. ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ ನಾವು ನೋಡುವ ಹಾಗೆ ಮೈಸೂರು ಬೆಂಗಳೂರು ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಹೆಚ್ಚಿನ ರೀತಿಯಲ್ಲಿ ತೆರಿಗೆಯು ವಸೂಲಾಗದೆ ಬಹಳ ಲೋಪದೋಷಗಳಿವೆ. ಇದನ್ನು ಸಚಿವರು ಚೆನ್ನಾಗಿ ಗಮನಿಸಬೇಕು. ಅನೇಕ ಅಧಿಕಾರಿಗಳು ಹೆಚ್ಚಿನ ದಕ್ಷತೆಯನ್ನು ತೋರಿಸದೆ ಇರುವುದರಿಂದ ರಾಜ್ಯದ ಉತ್ಪತ್ತಿ ಬಹಳ ಕಡಿಮೆಯಾಗಿದೆ.

Sri S. BANGARAPPA.—Mr. Deputy Speaker, we take serious objection as there is not even a single Minister in the House. There should be some limits for these things.

Sri M. S. KRISHNAN.—They have taken for granted to do anything. They think that they could do and undo anything. Eevery-day we are telling that Ministers should be in the House But, they didn't care.

Mr. DEPUTY SPEAKER.— Mr. Ghorpade was here just now.

(*At that stage the Hon'ble Minister for Finance entered the House*)

ಶ್ರೀ ಆರ್. ಗುಂಡೂರಾವ್.—ಸ್ವಲ್ಪ ದಕ್ಷತೆವಹಿಸಿದರೆ ಸುಮಾರು 100 ಕೋಟಿ ರೂಪಾಯಿ ಸೇಲ್ಸ್‌ಟ್ಯಾಕ್ಸಿನಿಂದ ಬರಲು ಅವಕಾಶವಿದೆ. ಸಚಿವರು ದಕ್ಷತೆ ಇಲಾಖೆಯಲ್ಲಿ ಹೆಚ್ಚಿಸಿ ಹೆಚ್ಚು ಆದಾಯ ಬರುವಂತೆ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಎಲ್ಲಾ ಇಲಾಖೆಗಳಿಗಿಂತ ಈ ಇಲಾಖೆ ಕಾಮಧೇನು ಇದ್ದ ಹಾಗೆ. ದಕ್ಷತೆ ಹೆಚ್ಚಿದರೆ ರಾಜ್ಯದ ಬೊಕ್ಕಸಕ್ಕೆ ಇದರಿಂದ ಹೆಚ್ಚು ಆದಾಯ ಬರಬಹುದು. ಅಲ್ಲದೆ ಇಲಾಖೆಯಲ್ಲಿರುವ ಲೋಪದೋಷಗಳನ್ನು ಹೋಗಲಾಡಿಸಬೇಕು. ಮುಖ್ಯವಾಗಿ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಗೇಟ್ ಇರುವ ಕಡೆ ಲೋಪದೋಷವಿರುವುದನ್ನು ನಿವಾರಣೆ ಮಾಡಬೇಕು. ಈಗ ಸೇಲ್ಸ್‌ಟ್ಯಾಕ್ಸ್ ಗೇಟ್ ಎಂದಿದೆ. ಸರಕಾರಕ್ಕೆ ಇದರಿಂದ ಯಾವ ಪ್ರಯೋಜನವೂ ಇಲ್ಲ. ಇದರಿಂದ ಅಲ್ಲಿರುವ ಕ್ಲಾರ್ಕುಗಳು, ಸೂಪರಿಂಟೆಂಡೆಂಟ್ ಅಥವ ಅಸಿಸ್ಟೆಂಟ್ ಕಮಿಷನರ್ ಯಾರಿದ್ದಾರೋ ಅವರಿಗೆ ಅನುಕೂಲವಾಗಿದೆ. ಒಂದೊಂದು ಗೇಟ್‌ನಿಂದ ಒಂದೂವರೆಯಿಂದ ಎರಡು ಸಾವಿರ ರೂಪಾಯಿಗಳವರೆಗೆ ಆಫೀಸರುಗಳಿಗೆ ಉತ್ಪತ್ತಿಯಿದೆ. ಉದಾಹರಣೆಗೆ ಮೈಸೂರು—ಮಂಗಳೂರು—ಕೊಡಗು ರಸ್ತೆಯಲ್ಲಿ ಬಿಳಿಗೆರೆಯ ಬಳಿ ಒಂದು ಗೇಟಿದೆ, ನಾನು ಸ್ವತಃ ಇದನ್ನು ನೋಡಿದ್ದೇನೆ. ನಾನು ಕಂಡಿರುವುದನ್ನು ಹೇಳುತ್ತೇನೆ. ಮೈಸೂರಿನಲ್ಲಿ ಲಾರಿ ಭರ್ತಿಮಾಡಿ ಸಾಮಾನುಗಳನ್ನು ತುಂಬಿ ಮಂಗಳೂರು, ಮಡಕೇರಿ ಅಥವ ಬೇರೆ ಕಡೆಗೆ ಸಾಗಿಸುವಾಗ ಆ ಗೇಟಿನ ಬಳಿ ನಿಲ್ಲಬೇಕು, ನಿಲ್ಲಿಸಿದ ಕೂಡಲೆ ಮಾಮೂಲು 50ರಿಂದ ನೂರು ರೂಪಾಯಿಗಳವರೆಗೆ ಕೊಡಬೇಕು. ಕೊಡದೆ ಇದ್ದರೆ ಲಾರಿ ಖಾಲಿ ಮಾಡಬೇಕೆಂದು ಹೇಳುವರು. ಒಂದು ದಿವಸ ನಾನು ಕುಶಾಲನಗರಕ್ಕೆ ಲಾರಿಯಲ್ಲಿ ಹೋಗುತ್ತಿದ್ದೆ. ಅದು ರಾತ್ರಿಯವೇಳೆ, ಇದು ಸುಮಾರು ಒಂದೂವರೆ ವರ್ಷದ ಹಿಂದೆ ನಡೆದದ್ದು. ನಮ್ಮ ಊರಿನಿಂದ ಮೈಸೂರಿಗೆ ಬಸ್ಸಿನಲ್ಲಿ ಹೋದೆ, ಅಲ್ಲಿಂದ ಲಾರಿ ಸಿಕ್ಕಿತು, ಅದರಲ್ಲಿ ಹೋದೆ. ಲಾರಿಯನ್ನು ಗೇಟಿನಬಳಿ ನಿಲ್ಲಿಸಿದರು. ಏಕೆ ಎಂದು ಕೇಳಿದಾಗ ಸೇಲ್ಸ್‌ಟ್ಯಾಕ್ಸ್ ಇಲಾಖೆಯವರು ಚೆಕ್‌ಮಾಡುವರು ಎಂದು ಲಾರಿಯವರು ಹೇಳಿದರು. ಚೆಕ್ ಮಾಡಿಸಿಕೊಂಡು 5 ನಿಮಿಷದಲ್ಲಿ ಲಾರಿಯವರು ವಾಪಸು ಬಂದರು, ಕೇಳಿದ್ದಕ್ಕೆ ಚೆಕ್ ಮಾಡಿದ್ದಾಯಿತು ಎಂದು ಹೇಳಿದರು. ನಮ್ಮ ಊರಿನ ಡ್ರೈವರ್ ಇದ್ದುದರಿಂದ ಅವನನ್ನು ಕೇಳಿದಾಗ 50 ರೂಪಾಯಿ ಕೊಟ್ಟರೆ ಚೆಕ್‌ಮಾಡಿ ಜಾಗ್ರತೆ ಬಿಟ್ಟುಬಿಡುವರು, ಕೊಡದೆ ಇದ್ದರೆ ಲಾರಿ ಖಾಲಿ ಮಾಡು ಎಂದು ಹೇಳುವರು, ಖಾಲಿ ಮಾಡಲು ಜನ ಎಲ್ಲಿಂದ ತರಬೇಕು, ಡ್ರೈವರ್ ಮತ್ತು ಕ್ಲೀನರ್ ಇಬ್ಬರೇನು ಲಾರಿಯಲ್ಲಿರುತ್ತೇವೆ ಅವರಿಂದ ಅನ್‌ಲೋಡ್ ಮಾಡಲು ಸಾಧ್ಯವೇ ಎಂದು ಹೇಳಿದ. ಮಾಮೂಲು ಕೊಡದೆ ಇದ್ದರೆ ಲಾರಿ ಬಿಡುವುದಿಲ್ಲ, ಇದರಿಂದ ಮಾಲೀಕರಿಗೆ ಬಾಡಿಗೆ ನಷ್ಟವಾಗುವುದು. ರಾತ್ರಿವೇಳೆ ಮಧ್ಯೆ ದಾರಿಯಲ್ಲಿ ಲಾರಿ ಬಿಟ್ಟು ಡ್ರೈವರ್ ಮತ್ತು ಕಂಡಕ್ಟರ್ ಊಟ ಮಾಡಲು ಅವಕಾಶವಿರುವುದಿಲ್ಲ ಎಂದು ಡ್ರೈವರ್ ಹೇಳಿದ. ಇದರಿಂದ ಸರಕಾರಕ್ಕೆ ಪ್ರಯೋಜನವಿಲ್ಲ, ತೆರಿಗೆ ವಸೂಲಾಗುವುದಿಲ್ಲ. ಒಂದು ತಿಂಗಳಿಗೆ ಒಂದು ದಿವಸ ಯಾರೋ ತಪ್ಪಿಸಿಕೊಂಡು ಹೋಗುವರೆಂದು ಗೇಟ್ ಇಟ್ಟಿದ್ದಾರೆ. ಹಿಂದೆ ಇದಿರಲಿಲ್ಲ, 1971 ರಿಂದ ಅದನ್ನು ಮಾಡಿರಬೇಕು. ಅದಕ್ಕಿಂತ ಮುಂಚೆ ಇರಲಿಲ್ಲ. 1971ನೇ ಇಸವಿಯಿಂದೀಚೆಗೆ ಆ ಗೇಟು ಬಂದಿದೆ. ಕಳೆದ ಸಾರಿ ಭಾಷಣ ಮಾಡುವಾಗ ಕೂಡ ಅದನ್ನು ತೆಗೆದು ಹಾಕಬೇಕೆಂದು ಹೇಳಿದೆ. ಇದರಿಂದ ನೂರು ರೂಪಾಯಿ ನಷ್ಟವಾದರೂ ಚಿಂತೆ ಇಲ್ಲ ಇಂಥ ಗೇಟುಗಳನ್ನು ಕೂಡಲೇ ರದ್ದು ಮಾಡಬೇಕು. ಈ ಮಾರ್ಗದಲ್ಲಿ ಒಂದು ದಿನಕ್ಕೆ 200, 300 ಲಾರಿಗಳು ತಿರುಗಾಡುತ್ತವೆ. ಪೂನ, ಬೊಂಬಾಯಿ, ಮಾರ್ಗದಲ್ಲಿ ಹಾಗೂ ಮದ್ರಾಸ್ ಮುಂತಾದ ಮಾರ್ಗಗಳಲ್ಲಿ ಎಷ್ಟು ಲಾರಿಗಳು ತಿರುಗಾಡುತ್ತವೆ ಎನ್ನುವುದು ನನಗೆ ಗೊತ್ತಿಲ್ಲ. ಈ ಮಾರ್ಗದಲ್ಲಿ ಒಂದು ಲಾರಿಗೆ 50 ರೂಪಾಯಿಯಂತೆ ಸಾಮಾನ್ಯವಾಗಿ 300 ಲಾರಿಗಳಿಗೆ ಎಷ್ಟಾಗುತ್ತದೆ ಎನ್ನುವುದನ್ನು ಲೆಕ್ಕಾಚಾರ ಮಾಡಿ ಸರ್ಕಾರಕ್ಕೆ ಆ ಗೇಟಿನಿಂದ ಎಷ್ಟು ಉತ್ಪತ್ತಿ ಬರುತ್ತಿದೆ ಎನ್ನುವುದನ್ನು ನೋಡಿ. ಅದರಿಂದ ಬಹಳ ಉತ್ಪತ್ತಿ ಬರುತ್ತಿದ್ದರೆ ಇಡುವುದು ಒಳ್ಳೆಯದು. ಆದರೆ ನನಗೆ ತಿಳಿದಮಟ್ಟಿಗೆ ಅದರಿಂದ ಉತ್ಪತ್ತಿ ಇಲ್ಲ. ಒಂದು ಗೇಟಿಗೆ ಪೋಸ್ಟಿಂಗ್ ಆರ್ಡರ್ ತೆಗೆದುಕೊಳ್ಳಬೇಕಾದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಎಷ್ಟೋದುಡ್ಡನ್ನು ಕೊಟ್ಟು ಹೋಗುತ್ತಾರೆನ್ನುವ ವರ್ತಮಾನ ಬಂದಿದೆ. ಆದ್ದರಿಂದ ದಯವಿಟ್ಟು ಇದನ್ನು ನಿಲ್ಲಿಸಬೇಕು. ನಾನು ಸ್ವತಃ ಕಂಡಿರುವುದನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಗ್ಗೆ ಹೇಳಬೇಕಾದರೆ ಒಟ್ಟು ವರಮಾನದಲ್ಲಿ ಸೇಕಡ 80 ಭಾಗ ಕಾಫಿ ಒಂದರಿಂದಲೇ ಬರುತ್ತದೆ. ಅಷ್ಟೊಂದು ತೆರಿಗೆಯನ್ನು ಕೊಡುವಂಥ ಕಾಫಿ ಬೆಳೆಗಾರರಿಗೆ ಹೆಚ್ಚಿನ ಸಹಾಯ ಸಿಕ್ಕಬೇಕು. ಅವರು ಎಲ್ಲೆಲ್ಲಿ ವಾಸ ಮಾಡುತ್ತಿದ್ದಾರೆ ಅಲ್ಲಿ ಮತ್ತು

(ಶ್ರೀ ಆರ್. ಗುಂಡೂರಾವ್)

ಕಾಫಿ ತೋಟಗಳಿರುವ ಕಡೆ ಉತ್ತಮವಾದ ರಸ್ತೆಗಳು ಮತ್ತು ಇತರ ಸೌಕರ್ಯಗಳನ್ನು ಒದಗಿಸಿ ಕೊಡಬೇಕು. ದೊಡ್ಡ ದೊಡ್ಡ ಅಣೆಕಟ್ಟೆಗಳನ್ನು ಕಟ್ಟಲು ಸರ್ಕಾರದವರು ಹೊರಟಿದ್ದಾರೆ. ಅಣೆಕಟ್ಟೆಗಳನ್ನು ಕಟ್ಟಬೇಕು. ಅಣೆಕಟ್ಟೆಗಳನ್ನು ಕಟ್ಟಬಾರದು, ದೇಶಕ್ಕೆ ಅದರಿಂದ ಪ್ರತಿಫಲ ಸಿಕ್ಕಬಾರದು ಎಂದು ನಾನು ಹೇಳುತ್ತಿಲ್ಲ. ಆದರೆ ಎಲ್ಲಿ ಅಣೆಕಟ್ಟೆಗಳನ್ನು ಕಟ್ಟಿದರೆ ಯಾವ ಭಾಗ ಮುಳುಗಡೆಯಾಗುತ್ತದೆ ಎನ್ನುವುದು ಮುಖ್ಯ. ಉದಾಹರಣೆಗೆ ಹೇಳಬೇಕಾದರೆ ಕೊಡಗು ಜಿಲ್ಲೆ ಮೈಸೂರು ದೇಶದಲ್ಲಿ 80 ಪರ್ಸೆಂಟ್ ಮೇಲ್ಪಟ್ಟು ಕಾಫಿ ಬೆಳೆಯುವ ಜಿಲ್ಲೆ. ಆ ಜಿಲ್ಲೆಯಲ್ಲಿ ಎಷ್ಟು ಉತ್ಪತ್ತಿ ಬರುತ್ತಿದೆ ಎನ್ನುವುದು ಗೊತ್ತಿದೆ. ಕಾವೇರಿ ಜಲಾನಯನ ಭೂಮಿಯಲ್ಲಿ ಮೂರು ಅಣೆಕಟ್ಟೆಗಳನ್ನು ಕಟ್ಟುವ ಪ್ರಯತ್ನ ನಡೆದಿದೆ. ಹೇಮಾವತಿ ಕಟ್ಟೆ ಈಗಾಗಲೇ ಪ್ರಾರಂಭವಾಗಿದೆ. ಇದರಿಂದ 14-18 ಗ್ರಾಮಗಳು ಮುಳುಗಡೆಯಾಗುತ್ತವೆ. ಸಾಧಾರಣವಾಗಿ 2-3 ಸಾವಿರ ಎಕರೆಗೆ ಮೇಲ್ಪಟ್ಟು ಕಾಫಿ ತೋಟ ಮುಸುಗಡೆಯಾಗುತ್ತದೆ. ಹಾರಂಗಿ ಯೋಜನೆಯಿಂದ ಐದಾರು ಸಾವಿರ ಎಕರೆ ಕಾಫಿ ತೋಟ ಮುಳುಗಡೆಯಾಗುತ್ತದೆ. ಹೊಸದಾಗಿ ಹೊಸಪಟ್ಟಣ ನೀರಾವರಿ ಯೋಜನೆಯನ್ನು ತಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದಾರೆ. ನಾವು ಅದರ ಬಗ್ಗೆ ಈಗಾಗಲೇ ಸಾಕಷ್ಟು ವಿರೋಧ ಮಾಡಿದ್ದೇವೆ. ಒಂದು ಭಾಗ ಮುಳುಗಡೆಯಾಗಿ ಬೇರೆ ಭಾಗದಲ್ಲಿ ಅದಕ್ಕಿಂತ ಹೆಚ್ಚು ಉತ್ಪನ್ನ ಬರುವಂಥ ಬೆಳೆಯನ್ನು ತೆಗೆಯುವುದಾದರೆ ಅದರ ಬಗ್ಗೆ ಯೋಚನೆ ಮಾಡಬಹುದು. ನೀರಾವರಿ ಯೋಜನೆಗಳನ್ನು ಮಾಡಿ, ಅದರಿಂದ ಜಮೀನು ಮುಳುಗಡೆಯಾದರೆ ನೀರಾವರಿ ಸೌಲಭ್ಯ ಸಿಕ್ಕುವ ಪ್ರದೇಶದಲ್ಲಿ ಬತ್ತ, ರಾಗಿ ಅಥವಾ ಗೋಧಿ ಬೆಳೆಯಬಹುದು. ಇದರಿಂದ ಮುಳುಗಡೆಯಾಗುವ ಪ್ರದೇಶದಲ್ಲಿ ನಷ್ಟವಾಗುವುದಕ್ಕಿಂತ ಹೆಚ್ಚು ಉತ್ಪತ್ತಿ ಬರುವುದಾದರೆ ಅಡ್ಡಿ ಇಲ್ಲ. ಈಗ ಇರುವುದಕ್ಕಿಂತ 100 ಪರ್ಸೆಂಟ್ ಅಥವಾ 50 ಪರ್ಸೆಂಟ್ ಹೆಚ್ಚು ಉತ್ಪತ್ತಿ ಬರುವುದಾದರೆ ಇಡೀ ಕೊಡಗು ಜಿಲ್ಲೆ ಮುಳುಗಡೆಯಾದರೂ ನನ್ನ ವಿರೋಧವಿಲ್ಲ. ಕಂಬದಕಡ, ಹೇಮಾವತಿ, ಅಣೆಕಟ್ಟನ್ನು 200 ಅಡಿ ಎತ್ತರ ಕಟ್ಟಿದರೂ ಕೂಡ ಒಂದೇ ಒಂದು ಎಕರೆ ಕಾಫಿ ತೋಟವನ್ನು ಬೇರೆ ಯಾವುದೇ ಜಿಲ್ಲೆಯಲ್ಲಿ ಮಾಡಲಿಕ್ಕೆ ಸಾಧ್ಯವಿದೆಯೋ ಎಂದು ಯೋಚನೆ ಮಾಡಬೇಕು. ಇಡೀ ದೇಶದಲ್ಲಿ 40 ಪರ್ಸೆಂಟ್ ವಿದೇಶಿ ವಿನಿಮಯವನ್ನು ಕೊಡತಕ್ಕ ಕಾಫಿ ಉದ್ಯಮವನ್ನು ಮುಳುಗಿಸಿ ಬೆಳೆಯುವ ಬೆಳೆ ಯಾದರೂ ಏನು ? ಬತ್ತ, ರಾಗಿ, ಹುರುಳಿ ಬೆಳೆಯಬಹುದು. ಅದರಿಂದ ಏನು ಪ್ರಯೋಜನ ? ಇದನ್ನು ಬೆಳೆಯಬೇಕಾದ್ದು ಎಲ್ಲಿ ಬರಗಾಲವಿದೆಯೋ ಆ ಭಾಗದಲ್ಲಿ. ಕಾಫಿ ಬೆಳೆಯ ಉದ್ಯಮದಿಂದ ಹೆಚ್ಚು ಉತ್ಪತ್ತಿ ಬರುವುದಕ್ಕೆ ಪ್ರಯತ್ನ ಪಡಬೇಕೇ ಹೊರತು ಕಾಫಿ ತೋಟಗಳನ್ನು ಮುಳುಗಿಸಿ, ಆ ಉದ್ಯಮವನ್ನು ಹಾಳು ಮಾಡಿ, ಯಾವುದೇ ತರಹ ಉತ್ಪತ್ತಿ ತರದೆ ಇರುವುದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತಿದ್ದೇನೆ. ಕಾಫಿ, ಏಲಕ್ಕಿ ಇದರಿಂದ ಬರುವ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಕಡಮೆಯಾದರೆ ಎಷ್ಟು ಬತ್ತ ರಾಗಿ ಬೆಳೆದರೂ ಅಷ್ಟು ಉತ್ಪತ್ತಿ ಸರ್ಕಾರಕ್ಕೆ ಬರುವುದಿಲ್ಲ. ಆದುದರಿಂದ ಕಾಫಿ ಬೆಳೆಯುವ ಪ್ರದೇಶವನ್ನು ರಕ್ಷಣೆ ಮಾಡತಕ್ಕದ್ದು ಅರ್ಥಮಂತ್ರಿಗಳ ಜವಾಬ್ದಾರಿ ಎಂದು ಹೇಳುತ್ತಿದ್ದೇನೆ. ಯಾವುದೇ ಒಂದು ಭಾಗದಲ್ಲಿ ಒಂದು ಬೆಳೆಯಾಗುವ ಪ್ರದೇಶ ಮುಳುಗಡೆಯಾಗುವಾಗ ಅದೇ ಬೆಳೆಯನ್ನು ಬೇರೆ ಕಡೆ ಇನ್ನೂ ಹೆಚ್ಚು ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದಕ್ಕೆ ಅವಕಾಶವಿದ್ದರೆ ಆಗ ಮುಳುಗಡೆಯಾಗುವುದಕ್ಕೆ ಅವಕಾಶ ಕೊಡಬಹುದು. ಮಂಡ್ಯ ಜಿಲ್ಲೆಯಲ್ಲಿರುವ ಜಮೀನು ಮುಳುಗಡೆಯಾಗಿ ಬೆಂಗಳೂರು ಜಿಲ್ಲೆಯಲ್ಲಿ ಹೆಚ್ಚು ಪ್ರದೇಶದಲ್ಲಿ ನೀರಾವರಿ ಮಾಡಲು ಒಂದು ಅಣೆಕಟ್ಟೆಯನ್ನು ಕಟ್ಟುವುದಾದರೆ ಅದರಿಂದ ಯಾವುದೇ ರೀತಿಯ ಹೆಚ್ಚು ನಷ್ಟವಾಗುವುದಿಲ್ಲ. ಕಾರಣ ಯಾವ ಬೆಳೆಯಾಗುವಂಥ ಪ್ರದೇಶ ಮುಳುಗಡೆಯಾಯಿತೋ ಅದೇ ಬೆಳೆಯನ್ನು ಇನ್ನೂ ಹೆಚ್ಚು ಪ್ರದೇಶದಲ್ಲಿ ಬೆಳೆಯಲು ಅವಕಾಶವಾಗುವುದರಿಂದ ಅದಕ್ಕೆ ಯಾರದೂ ವಿರೋಧವಿರುವುದಿಲ್ಲ. ಅದರಿಂದ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಸರ್ಕಾರಕ್ಕೆ ಬರುವುದರಲ್ಲಿ ವ್ಯತ್ಯಾಸವಾಗುವುದಿಲ್ಲ. ಆದರೆ ಕೆಲವು ಪ್ರಮುಖ ಬೆಳೆಗಳನ್ನು ವಿಶಿಷ್ಟ ಬೆಳೆಗಳನ್ನು ಮುಳುಗಡೆ ಮಾಡಿದರೆ ಸರ್ಕಾರಕ್ಕೆ ಬರುವ ಆದಾಯದಲ್ಲಿ ಬಹಳ ಕಡಿಮೆಯಾಗುತ್ತದೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್‌ನಲ್ಲಿ 80 ಪರ್ಸೆಂಟ್ ಆದಾಯವನ್ನು ಕೊಡುವ ಕಾಫಿ ತೋಟಗಳನ್ನು ಮುಳುಗಡೆ ಮಾಡಿದರೆ ಸರ್ಕಾರಕ್ಕೆ ಬೊಕ್ಕಸಕ್ಕೆ ಹಣ ಬರುವುದು ಪೂರ್ತಿ ನಷ್ಟವಾಗುತ್ತದೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಅರ್ಥ ಮಂತ್ರಿಗಳ ಮುಂದೆ ಮಂಡಿಸುವುದಕ್ಕೆ ಇಷ್ಟಪಡುತ್ತೇನೆ.

ಸೇವಿಂಗ್ಸ್ ವಿಚಾರವನ್ನು ತೆಗೆದುಕೊಂಡರೆ ಸರ್ಕಾರಿ ಇಲಾಖೆಗಳಲ್ಲಿ ಸ್ಮಾಲ್ ಸೇವಿಂಗ್ಸ್ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಸೆಮಿ ಗವರ್ನಮೆಂಟ್ ಇನ್‌ಸ್ಟಿಟ್ಯೂಷನ್ಸ್‌ನಲ್ಲಿ ಎಂದರೆ ಸಣ್ಣ ಸಣ್ಣ ಸೊಸೈಟಿಗಳಲ್ಲಿ, ಅಗ್ರಿಕಲ್ಚರಲ್ ಕೋ ಆಪರೇಟಿವ್ ಮಾರ್ಕೆಟಿಂಗ್ ಇನ್‌ಸ್ಟಿಟ್ಯೂಷನ್

ಮತ್ತು ಮುನಿಸಿಪಾಲಿಟಿಗಳಿಗೆ ಕೂಡ ಇದನ್ನು ಅನ್ವಯಿಸುವುದಕ್ಕೆ ಪ್ರಯತ್ನ ಪಟ್ಟರೆ ಆದಾಯ ಹೆಚ್ಚು ಬರಬಹುದು ಎಂದು ನನ್ನ ಸಲಹೆ.

ಇನ್‌ಫರ್ಮೇಷನ್ ಇಲಾಖೆ ಬಹಳ ಚೆನ್ನಾಗಿ ಇನ್ನೂ ಹೆಚ್ಚು ಕೆಲಸ ಮಾಡಬೇಕಾಗಿದೆ. ಕೊಡಗು ಜಿಲ್ಲೆಯಲ್ಲಿ ಮತ್ತು ಇತರ ಕಡೆ ಅನೇಕ ತರಹ ಪ್ರಕೃತಿ ಸೌಂದರ್ಯವಾದ ಸ್ಥಳಗಳಿವೆ, ಸುಂದರವಾದ ಪ್ರದೇಶಗಳಿವೆ, ದೊಡ್ಡ ದೊಡ್ಡ ಅರಣ್ಯಗಳಿವೆ, ಕಿತ್ತಳೆ ತೋಟಗಳಿವೆ. ಉದಾಹರಣೆಗೆ ಹೇಳಬೇಕು ಎಂದರೆ ಬಾದಾಮಿ ಸಸರ ಎಂದು ಕಾಫಿ ತೋಟಗಳಲ್ಲಿ ಹೂ ಬಿಡುವ ಕಾಲದಲ್ಲಿ ನೋಡುವುದಕ್ಕೆ ಚೆಂದ. ಅನೇಕ ಜನ ಇದನ್ನು ನೋಡಿ ಆನಂದ ಪಡುತ್ತಾರೆ ಅದರ ಫಿಲ್ಮ್ ತೆಗೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಅನೇಕ ಜನರಿಗೆ ಕರ್ನಾಟಕದ ಜನರಿಗೂ ಅನೇಕರಿಗೆ ಕಾಫಿ ತೋಟದ ಹೂ ಬಿಡುವ ಕಾಲದಲ್ಲಿ ಅದನ್ನು ನೋಡಲು ಹೇಗಿರುತ್ತದೆನ್ನುವುದು ಗೊತ್ತಿಲ್ಲ. ಮಾರ್ಚಿ ಮತ್ತು ಏಪ್ರಿಲ್ ತಿಂಗಳಲ್ಲಿ ಮಳೆ ಬಿದ್ದ ಕೂಡಲೇ ಹೂ ಬಿಡುವ ಕಾಲದಲ್ಲಿ ಅವನ್ನೆಲ್ಲ ಫಿಲಂ ಮೂಲಕ ತೆಗೆದಿಟ್ಟು ಪ್ರಚಾರ ಮಾಡುವುದರಿಂದ ಬಹಳ ಜನರಿಗೆ ಅನುಕೂಲವಾಗುತ್ತದೆ. ಕಾಫಿ ಬೆಳೆ ಹೇಗೆ ಬರುತ್ತದೆ, ಹೂವು ಫಸಲು ಯಾವ ರೀತಿ ಬಿಡುತ್ತದೆ ಎನ್ನುವುದನ್ನೂ, ಅನೇಕ ತರಹ ಕಾಡು ಪ್ರಾಣಿಗಳನ್ನೂ ಅವು ಇರುವಂಥ ಸ್ಥಳಗಳನ್ನೂ, ಕಾವೇರಿ ಹುಟ್ಟುವಂಥ ಸ್ಥಳ, ಇಡಿ ದಕ್ಷಿಣ ಇಂಡಿಯಾ ದೇಶಕ್ಕೆ ಹೆಸರುವಾಸಿಯಾದ ತಲಕಾವೇರಿಯಲ್ಲಿ ಅಕ್ಟೋಬರ್ 17ನೇ ತಾರೀಖು ದೊಡ್ಡ ಜಾತ್ರೆಯಾಗುತ್ತದೆ, ಅಂಥ ಪ್ರದೇಶಗಳನ್ನೂ ಫಿಲಂ ರೂಪದಲ್ಲಿ ತೆಗೆದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಇನ್‌ಫರಮೇಷನ್ ಇಲಾಖೆಯಲ್ಲಿರುವ ಫಿಲಂ ಯೂನಿಟ್ಟು ಬಹಳ ಸಣ್ಣದಾಗಿರುವುದರಿಂದ ಮತ್ತು ಇಲ್ಲಿ ಸರಿಯಾದ ಟೆಕ್ನಿಕಲ್ ಪರ್ಸನಲ್ ಇಲ್ಲದಿರುವುದರಿಂದ ಈಗ ಸರಿಯಾಗಿ ಪ್ರಚಾರ ಮಾಡಲಾಗುತ್ತಿಲ್ಲ ನಾನು ಕೂಡ ಈಚೆಗೆ ನಮ್ಮ ಕೊಡಗು ಭಾಗಕ್ಕೆ ಬಂದ ಡೆವಲಪ್‌ಮೆಂಟ್ ಕಮೀಷನರನ್ನು ವಿಚಾರ ಮಾಡಿದಾಗ ಅವರು ಅಲ್ಲಿ ಒಂದು ಬಹಳ ಹಳೆಯ ಫಿಲಂನ್ನು ಜನತೆಗೆ ತೋರಿಸಲು ಅಲ್ಲಿ ತಂದಿದ್ದರು. ಆಗ ಅವರು ನಮ್ಮಲ್ಲಿರುವುದು ಹಳೆಯ ಮೆಷಿನರಿ. ಇದನ್ನು ಸರಿಮಾಡಬೇಕಾದರೆ ನಾಲ್ಕಾರು ತಿಂಗಳಾಗಿ ವಿಧಾನವಾಗುತ್ತಿದೆ ಎಂದೂ ಆಗ ಹೇಳಿದರು.

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಅಶೋಕಾ ಹೋಟಲು ಹಾಗೂ ಸಿನಿಮಾ ಮಂದಿರಗಳ ಬಗ್ಗೆ ಟೀಕೆ ಮಾಡುತ್ತಾ, ಇದನ್ನು ಇರಬಾರದು ಎಂದು ವಿರೋಧ ಮಾಡಿದರು. ಇದು ಸರಿಯಲ್ಲ. ನಮ್ಮಲ್ಲಿ ಇಂತಹ ಅಶೋಕಾ ಹೊಟಲುಗಳು ಬಹಳ ಹೆಚ್ಚಾಗಿ ಆಗಬೇಕು ಮತ್ತು ಬೆಂಗಳೂರಿನಲ್ಲಿ ಇನ್ನೂ ಹೆಚ್ಚು ಸಿನಿಮಾ ಮಂದಿರಗಳೂ ಆಗಬೇಕು. ಇದನ್ನು ಬರೀ ಲಕ್ಸುರಿಗಾಗಿ ಮಾಡುತ್ತಾರೆಂದು ಯಾರೂ ಭಾವಿಸಬಾರದು. ನಮ್ಮ ದೇಶದಲ್ಲಿ ಟೂರಿಸಂ ಅಭಿವೃದ್ಧಿ ಮಾಡಬೇಕಾದಾಗ ಪರದೇಶಗಳಿಂದ ಬರುವ ಪ್ರವಾಸಿಗರು ನಮ್ಮ ಬೆಂಗಳೂರಿನಲ್ಲಿ ಯಾವ ರೀತಿಯಾದ ಸೌಕರ್ಯಗಳು ಇರುತ್ತವೆ ಎನ್ನುವುದನ್ನು ಕೇಳುತ್ತಾರೆ. ಅಂತಹವರ ಅನುಕೂಲಗಳಿಗಾಗಿ ಅಶೋಕ ಹೋಟಲುಗಳನ್ನು ಏರ್ಪಾಡು ಮಾಡಬೇಕಾಗುತ್ತದೆ. ಇಂಡಿಯಾ ದೇಶದಲ್ಲಿರುವ ಪ್ರಕೃತಿ ಸೌಂದರ್ಯಗಳನ್ನು ನೋಡುವಾಗ ಸಾಕಷ್ಟು ಮಂದಿ ಪರದೇಶದವರೂ ಇಲ್ಲಿಗೆ ಬರುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಪರದೇಶದವರೇ ಇಲ್ಲಿಯವರೆಗೂ ಆಳಿ ಹೋದರು.

ಶ್ರೀ ಆರ್. ಗುಂಡೂರಾವ್.—ಪರದೇಶಗಳಿಂದ ಬರುವ ಪ್ರವಾಸಿಗರು ನಮ್ಮ ದೇಶದಲ್ಲಿರುವ ಅರಣ್ಯಗಳ ಹಾಗೂ ಇನ್ನಿತರ ಸೌಂದರ್ಯಗಳನ್ನು ನೋಡಲು ಬರಬೇಕಾದರೆ ಇವರು ನಮ್ಮ ನಗರದಲ್ಲಿ ತಂಗಲು ಸಾಕಷ್ಟು ಅವಕಾಶಗಳಿವೆಯೋ ಎಂದು ಎಲ್ಲವನ್ನೂ ತಿಳಿದುಕೊಂಡು ಬರುತ್ತಾರೆ. ಇದಕ್ಕಾಗಿ ಹೆಚ್ಚು ಸೌಕರ್ಯಗಳನ್ನು ಟೂರಿಸ್ಟುಗಳಿಗೆ ಮಾಡಿ ಕೊಡಬೇಕಾದ್ದು ನಮ್ಮ ಸರಕಾರದ ಕರ್ತವ್ಯ. ಟೂರಿಸ್ಟರ ಸಂಖ್ಯೆ ಜಾಸ್ತಿಯಾದರೆ ರಾಜ್ಯ ಸರ್ಕಾರಕ್ಕೆ ಜಾಸ್ತಿ ಉತ್ಪತ್ತಿ ಬರುತ್ತದೆ. ಇದೂ ಅಲ್ಲದೆ ನಮ್ಮಲ್ಲಿ ಅಶೋಕ ಹೋಟೆಲ್‌ಗಳಾಗಿರುವುದರಿಂದ ಎಷ್ಟೋ ಜನ ನಿರುದ್ಯೋಗಿಗಳಿಗೆ ಇಲ್ಲಿ ಉದ್ಯೋಗಗಳು ಸಿಕ್ಕಿವೆ. ಇಂತಹ ಹೋಟೆಲುಗಳು ಹೆಚ್ಚು ಮಾಡಿದರೆ ಉದ್ಯೋಗಾವಕಾಶಗಳು ಹೆಚ್ಚಿಗೆ ಸಿಗುತ್ತದೆ. ಹಿಂದೆ ನಮ್ಮ ಮೈಸೂರಿನಲ್ಲಿ ಬೃಂದಾವನ ಗಾರ್ಡನ್ನನ್ನು ಅಭಿವೃದ್ಧಿ ಮಾಡುವಾಗಲೂ ಇಂತಹ ಆಕ್ಷೇಪಣೆಗಳು ಬಂದವು. ಆದರೆ ಅದನ್ನು ಮಾಡಿದ ಮೇಲೆ ಇಲ್ಲಿಗೆ ಪ್ರವಾಸಿಗರು ಹೆಚ್ಚು ಬರಲು ಅನುಕೂಲವಾಯಿತು.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ದೇಶಕ್ಕೆ ಬರುವುದು ಶ್ರವಣಬೆಳಗೊಳದಲ್ಲಿರುವ ಗೋಮಟೇಶ್ವರನನ್ನು ನೋಡುವುದಕ್ಕಾಗಿ.

ಶ್ರೀ ಆರ್. ಗುಂಡೂರಾವ್.—ಯಾರೇ ಆಗಲೀ ನಮ್ಮ ಕರ್ನಾಟಕ ರಾಜ್ಯದಲ್ಲಿರುವ ಸುಂದರವಾದ ಸ್ಥಳಗಳನ್ನು ನೋಡಲು ಬರುವಾಗ ಅವರಿಗೆ ತಕ್ಕ ಸೌಕರ್ಯಗಳನ್ನು ನಾವು ಮಾಡಿ ಕೊಡಬೇಕು. ಇದು ಬಹಳ ಅಗತ್ಯ. ಇದರ ಬಗ್ಗೆ ನಾವು ಟೀಕೆ ಮಾಡುವುದು ಸರಿಯಲ್ಲ. ಈಗ ನಾವು ಬೆಡ್ಡಾದ ಕಾರ್ಯಕ್ರಮ ನಡೆಸಬೇಕು ಎಂದು ಇದ್ದೇವೆ. ಇದನ್ನು ನೋಡಲು ಹೊರ ದೇಶಗಳಿಂದ ಅನೇಕ ಪ್ರವಾಸಿಗರು ಬರುತ್ತಾರೆ. ಇವರು ಬಂದಾಗ ಅವರಿಗೆ ಇಳಿದುಕೊಳ್ಳಲು ಸಾಕಷ್ಟು ಅನುಕೂಲಗಳನ್ನು ಕಲ್ಪಿಸಿಕೊಟ್ಟು ಅವರಿಗೆ ಎಲ್ಲ ಅನುಕೂಲಗಳನ್ನು ಒದಗಿಸಿಕೊಟ್ಟರೆ ಆಗ ಹೆಚ್ಚು ಮಂದಿ ಪ್ರವಾಸಿಗರು ಬರುತ್ತಾರೆ. ಇದನ್ನು ಮಾಡದೆ ಹಳೇ ಕಾಲದ ಯಾವುದೋ ಚಿತ್ರದಲ್ಲಿರಬೇಕೆಂದು ಹೇಳಿದರೆ ಯಾರು ತಾನೇ ಇಲ್ಲಿಗೆ ಬರಲು ಮನಸ್ಸು ಮಾಡುತ್ತಾರೆ. ನಮ್ಮ ಕರ್ನಾಟಕ ರಾಜ್ಯ ಅಭಿವೃದ್ಧಿ ಆಗಬೇಕು ಎಂದು ಹೇಳುತ್ತಾ ಅದಕ್ಕೆ ತಕ್ಕಂತೆ ನಾವು ಟೂರಿಸಂನ್ನೂ ಅಭಿವೃದ್ಧಿ ಮಾಡಬೇಕಾದರೆ ನಮ್ಮ ನಗರದಲ್ಲಿರುವ ಅಶೋಕ ಹೋಟೆಲ್ಲುಗಳು ಇನ್ನೂ ಹೆಚ್ಚು ಹೆಚ್ಚು ಆಗಬೇಕು. ಆಗ ಪರದೇಶದವರು ಕೂಡ ಹೆಚ್ಚು ಹೆಚ್ಚಾಗಿ ಇಲ್ಲಿಗೆ ಬರುತ್ತಾರೆ. ಇದರಂತೆ ನಮ್ಮ ಸಿನಿಮಾ ಮಂದಿರಗಳು ಕೂಡ ನಗರದಲ್ಲಿ ಇನ್ನೂ ಹೆಚ್ಚು ಆಗಬೇಕು. ಈಗಲೇ ಇದರ ಮೇಲೆ ಹೆಚ್ಚು ಟ್ಯಾಕ್ಸನ್ನು ಹಾಕಿರುತ್ತಾರೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಸರಕಾರಕ್ಕೆ ಯಾವ ರೀತಿ ಉತ್ಪತ್ತಿ ಪಡೆಯಬೇಕೆಂದಿದೆಯೋ ಅದರಂತೆ ಮಾಡಬಹುದು. ಇದೇ ರೀತಿ ನಾನಾಗಲೇ ಹೇಳಿದಂತೆ ಕೆಲವು ಲೋಪದೋಷಗಳಿರುವ ಕಡೆ ಅವನ್ನು ಸರಿಪಡಿಸಬೇಕು ಎಂದು ಸಲಹೆ ಮಾಡುತ್ತೇನೆ. ಮತ್ತು ಇಲ್ಲಿ ಮಾನ್ಯ ಮಂತ್ರಿಗಳು ಏನು ಬೇಡಿಕೆಯನ್ನು ಮಂಡಿಸಿದ್ದಾರೆ ಅದನ್ನು ಸಂಪೂರ್ಣವಾಗಿ ಎಲ್ಲರೂ ಒಮ್ಮತದಿಂದ ಒಪ್ಪಬೇಕೆಂದು ಹೇಳುತ್ತೇನೆ ಮತ್ತು ಇದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನೂ ಕೊಟ್ಟು ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನೂ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸದನದ ಒಪ್ಪಿಗೆಗಾಗಿ ಮಂಡಿಸಿರತಕ್ಕ ಕೆಲವಾರು ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ. ಇದರಲ್ಲಿರುವ ಡಿಮ್ಯಾಂಡುಗಳು ಎಂದರೆ ಕಲೆಕ್ಷನ್ ಆಫ್ ಟಾಕ್ಸಸ್, ಸ್ಮಾಲ್ ಸೇವಿಂಗ್ಸ್ ಇತ್ಯಾದಿ ವಿಚಾರಗಳ ಬಗ್ಗೆ ಹೆಚ್ಚು ಹೇಳಲು ಹೋಗುವುದಿಲ್ಲ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಮಾನ್ಯ ಸದಸ್ಯರು ಚರ್ಚೆ ಮಾಡಿರುತ್ತಾರೆ. ಆದುದರಿಂದ ಮತ್ತೆ ಮತ್ತೆ ಅದನ್ನೇ ಇಲ್ಲಿ ನಾನು ಚರ್ಚೆ ಮಾಡಲು ಹೋಗುವುದಿಲ್ಲ.

ಸರಕಾರದವರು ನಮಗೆ ಒದಗಿಸಿರುವ ವರದಿಯಲ್ಲಿರುವ ಲಾಟರಿ ಯೋಜನೆ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇದರ ಬಗ್ಗೆ ಕೆಲವು ಅಂಕೆ ಅಂಶಗಳನ್ನು ಇದರಲ್ಲಿ ಒದಗಿಸಿಕೊಟ್ಟಿದ್ದಾರೆ. ಇದು ಡಿಮ್ಯಾಂಡು 32ರಲ್ಲಿ ಬರುತ್ತದೆ. ಇಂದು ಲಾಟರಿಯಲ್ಲಿ ಒಬ್ಬ ಮನುಷ್ಯನಿಗೆ ಬಹುಮಾನ ರೂಪದಲ್ಲಿ ಹಣ ಬಂದರೂ ಅವನು ಇನ್‌ಕಂಟ್ಯಾಕ್ಸು ರೂಪದಲ್ಲಿ ಹಾಗೂ ಸೇವಿಂಗ್ ಸರ್ಟಿಫಿಕೇಟುಗಳು ಇತ್ಯಾದಿ ರೂಪದಲ್ಲಿ ಕೊಟ್ಟು ಅವನಿಗೆ ಬರುವ ಹಣ ಬಹಳ ಸ್ವಲ್ಪವೇ. ಸುಮಾರು ಒಂದು ಲಕ್ಷ ರೂಪಾಯಿಗಳ ಬಹುಮಾನ ಎಂದು ಇದ್ದರೆ ಅವನ ಕೈಗೆ ಬರುವ ವೇಳೆಗೆ ಅದು ಐವತ್ತು ಸಾವಿರದಷ್ಟು ಮಾತ್ರ ಬರುತ್ತದೆ. ಇದರಲ್ಲಿ ಕೊಟ್ಟಿರುವ ಅಂಕೆ ಅಂಶಗಳ ಪ್ರಕಾರ ನೋಡಿದರೆ, ಲಾಟರಿಯಿಂದ ಬಂದಿರುವ ವರಮಾನ 1969-70ರಲ್ಲಿ 112 ಲಕ್ಷ ಇತ್ತು. 1970-71ರಲ್ಲಿ 216 ಲಕ್ಷ ಇತ್ತು. 1971-72ರಲ್ಲಿ 199 ಲಕ್ಷಕ್ಕೆ ಬಂತು. 1972-73ರಲ್ಲಿ 271 ಲಕ್ಷಕ್ಕೆ ಬಂತು ಮತ್ತು ಕಳೆದ ವರ್ಷ ಎಂದರೆ 973-74ರಲ್ಲಿ 70 ಲಕ್ಷಕ್ಕೆ ಇಳಿದಿದೆ. ಇದರಂತೆ ನೆಟ್ ಇನಕಂ ಕೇವಲ 70 ಲಕ್ಷಕ್ಕೆ ಇಳಿದಿದೆ ಎಂದು ಇದರಲ್ಲಿ ಗೊತ್ತಾಗುತ್ತದೆ. ಇದಕ್ಕಾಗಿ ನಾನು ಸರಕಾರಕ್ಕೆ ಸಲಹೆ ಮಾಡುವುದು ಈ ಲಾಟರಿ ವ್ಯವಹಾರವನ್ನು ಕೈಬಿಡುವುದು ಒಳ್ಳೆಯದು. ಬರಬರುತ್ತಾ ಇದರ ಉತ್ಪನ್ನ ಕೂಡ ಕಡಿಮೆಯಾಗಿ ಬರುತ್ತಿದೆ. ಇದರಿಂದ ಅನೇಕರು ಟಿಕೆಟ್ಟುಗಳನ್ನು ಮಾರಲು ಹೋದರೂ ಅದನ್ನು ಇಂದು ಹೆಚ್ಚು ಜನ ಕೊಳ್ಳುತ್ತಿಲ್ಲ. ಇದನ್ನು ತೆಗೆದು ಬೇರೆ ವಿಚಾರದಲ್ಲಿ ಹೆಚ್ಚು ಉತ್ಪತ್ತಿ ಬರುವ ಬೇರೆ ಕ್ರಮಗಳನ್ನು ಅನುಸರಿಸುವುದು ಒಳ್ಳೆಯದು. ಇಂತಹ ಲಾಟರಿಯನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ. ಇದರ ಏಜಂಟರನ್ನಾಗಿ ನಮ್ಮ ಸರಕಾರ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಎಂದು ಮಾಡಿದೆ. ಇವರು ಸರಿಯಾಗಿ ಪ್ರಚಾರ ಮಾಡುತ್ತಿಲ್ಲ. ಹೊರ ರಾಜ್ಯಗಳ ಟಿಕೆಟ್ಟುಗಳನ್ನೂ ಇಲ್ಲಿ ಮಾರಬಹುದು ಅಲ್ಲಿನ ಟಿಕೆಟ್ಟುಗಳನ್ನು ಇಲ್ಲಿ ಮಾರಬಹುದು ಎಂದು ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಿದರೂ ಅವರಿಂದೇನೂ ಹೆಚ್ಚು ಉತ್ಪತ್ತಿ ಲಾಟರಿ ಯೋಜನೆಯಿಂದ ಬರುತ್ತಿಲ್ಲ. ಇಂದು ಜನರಿಗೆ ಇದರಲ್ಲಿ ಹೆಚ್ಚು ಆಸಕ್ತಿ ಇಲ್ಲ. ಜನರಿಗೆ ಇದರಲ್ಲಿ ಹೆಚ್ಚು ನಂಬಿಕೆಯೂ ಇಲ್ಲ. ಇಂತಹ ಲಾಟರಿ ಯೋಜನೆಯನ್ನು ನಮ್ಮ ಸರಕಾರ ಕೈಬಿಡಬೇಕೆಂದು ಒತ್ತಾಯ ಮಾಡುತ್ತೇನೆ. ಬರಬರುತ್ತಾ ಇದರಿಂದ ಉತ್ಪತ್ತಿ

ಕೂಡ ಕಡಿಮೆಯಾಗುತ್ತಿದೆ. ರಾಜ್ಯದ ಬೊಕ್ಕಸಕ್ಕೆ ಇದರಿಂದೇನೂ ಅಷ್ಟು ಉಪಯೋಗವಿಲ್ಲ. ತಮಿಳುನಾಡು, ಉತ್ತರ ಪ್ರದೇಶ, ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಇವೆ ಎಂದು ಹೇಳಿದ್ದೀರಿ ಹಾಗಾದರೂ ಕೂಡ ಲಾಟರಿ ಟಿಕೆಟ್‌ಗಳ ಮಾರಾಟ ಕಡಿಮೆಯಾಗಿದೆ ಎಂಬುದು ನಿಮ್ಮ ಅಂಕಿಸಂಖ್ಯೆ ಗಳಿಂದ ಗೊತ್ತಾಗುತ್ತದೆ. ಟಿಕೆಟ್‌ಗಳ ಮಾರಾಟವಾಗುವುದಕ್ಕೆ ಬರೇ ಪ್ರಚಾರ ಸಾಧನ ಸಾಲದು ; ಬಹುಮಾನ ಪಡೆದ ವ್ಯಕ್ತಿಗಳಿಗೆ ನೇರವಾಗಿ ಅದರಿಂದ ಉಪಯೋಗ ಆಗಬೇಕು ಹಣಕಾಸಿನ ದೃಷ್ಟಿಯಿಂದ ಅವರಿಗೆ ಹೆಚ್ಚಿಗೆ ಆಸೆ ತೋರಿಸದಿದ್ದರೆ ಈ ಟಿಕೆಟ್‌ಗಳನ್ನು ಖರೀದಿ ಮಾಡು ವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಈ ಲಾಟರಿ ಕೈಬಿಡಬೇಕು, ಇಲ್ಲ ಟಿಕೆಟ್‌ಗಳನ್ನು ಹೆಚ್ಚು ಮಾರಾಟ ಮಾಡಬೇಕು. ಅದರಂತೆ ನೀತಿ ನಿರೂಪಣೆ ಮಾಡುವುದರಲ್ಲಿ ಅರ್ಥ ಇದೆ ಎಂದು ಭಾವನೆ ಮಾಡುತ್ತೇನೆ.

4-30 P.M.

ಇನ್ನು ಪ್ರವಾಸೋದ್ಯಮ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ಇಲಾಖೆಗೆ ಬಹಳ ಕಡಿಮೆ ಹಣ ಇಟ್ಟಿರುವುದರಿಂದ ರಾಜ್ಯ ಸರ್ಕಾರದವರು ಈ ಇಲಾಖೆಯಲ್ಲಿ ಹೆಚ್ಚಿಗೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇದರ ಕಡೆ ಇನ್ನೂ ಹೆಚ್ಚು ಗಮನ ಕೊಡಬೇಕು. ಇನ್‌ಫರ್ಮೇಷನ್ ಅಂಡ್ ಪಬ್ಲಿಸಿಟಿ ವಿಷಯದಲ್ಲಿ ಹೇಳಬೇಕಾದರೆ ಸಣ್ಣ ಪತ್ರಿಕೆಗಳಿಗೆ ಜಾಹಿರಾತು ಕೊಡುವ ವಿಷಯದಲ್ಲಿ ಯಾವರೀತಿ ನೀತಿಯನ್ನು ಸರ್ಕಾರದವರು ಅನುಸರಿಸುತ್ತಿದ್ದಾರೆ ಎನ್ನುವ ಬಗ್ಗೆ ಏನೂ ಗೊತ್ತಾಗುತ್ತಿಲ್ಲ. ಇವತ್ತು ದೊಡ್ಡ ವೃತ್ತ ಪತ್ರಿಕೆಗಳಿಗೆ ಜಾಹಿರಾತನ್ನು ಯಾವರೀತಿ ಕೊಡು ತ್ತಿದ್ದಾರೆಯೋ ಅದೇ ರೀತಿ ಸಣ್ಣ ಪತ್ರಿಕೆಗಳಿಗೂ ಕೂಡ ಕೊಡಬೇಕು. ಅವೂ ಉಳಿಯಬೇಕು, ಬೆಳೆಯಬೇಕು. ಪ್ರಜಾಪ್ರಭುತ್ವದಲ್ಲಿ ಹಲವಾರು ತಪ್ಪುಗಳು ಆಡಳಿತವಲ್ಲಿ ನಡೆಯುವ ಸಂದರ್ಭದಲ್ಲಿ ಎಲ್ಲ ವಿಚಾರಗಳ ಬಗ್ಗೆಯೂ ದೊಡ್ಡ ಪತ್ರಿಕೆಗಳು ಸಾರ್ವಜನಿಕರಿಗೆ ಬೆಳಕನ್ನು ಚೆಲ್ಲತಕ್ಕ ಕಾರ್ಯ ಮಾಡಬಲ್ಲವು ಎಂದು ತಿಳಿದುಕೊಂಡರೆ ತಪ್ಪಾಗುತ್ತದೆ. ದೊಡ್ಡ ಪತ್ರಿಕೆಗಳು ತಾವು ಮಾಡುವ ಕರ್ತವ್ಯವನ್ನು ಮಾಡುತ್ತವೆ. ಸಣ್ಣ ಪತ್ರಿಕೆಗಳಿಗೂ ಅದಷ್ಟು ಬೆಂಬಲ ಕೊಡಬೇಕು. ಮಾತೃಭೂಮಿ ಗುಂಡು, ಮುಂತಾದ ಸಣ್ಣ ಸಣ್ಣ ಪತ್ರಿಕೆಗಳ ಪ್ರತಿಗಳು ನಮ್ಮ ರೂಮುಗಳಿಗೆ ಬರುತ್ತಿವೆ. ಕೆಲವು ಸಾರಿ ಒಳ್ಳೊಳ್ಳೆಯ ಪತ್ರಿಕೆಗಳು ಬರುತವೆ. ಇವು ಪ್ರಾಮುಖ್ಯವಾದ ಅಂಶಗಳನ್ನು ಬೆಳಕಿಗೆ ತರುತ್ತವೆ. ಕೆಲವು ವ್ಯಕ್ತಿಗಳಿಗೆ ಅಥವಾ ಕೆಲವು ವಿಷಯದ ಬಗ್ಗೆ ಅವರಿಗೆ ಸರಿ ಕಂಡಂತಹ ವ್ಯಾಖ್ಯಾನ ಮಾಡಬಹುದು. ಹಿಂದೆ ದಿವಂಗತ ಶೇಷಪ್ಪನವರ ಸಂಪಾದಕತ್ವದಲ್ಲಿ ''ಕಿಡಿ'' ಪತ್ರಿಕೆ ಪ್ರಕಟವಾಗುತ್ತಿತ್ತು. ಈ ಪತ್ರಿಕೆ ಓದಿ ಸಮಾಧಾನ ಮಾಡಿಕೊಳ್ಳತಕ್ಕ ಪ್ರವೃತ್ತಿ ಸಾವಿರಾರು ಜನರ ಮನಸ್ಸಿನಲ್ಲಿತ್ತು. ಅದು ದೊಡ್ಡ ದಿನಪತ್ರಿಕೆ ಆಗಿರಲಿಲ್ಲ. ಅದರಲ್ಲಿ ದೇಶದ ದೊಡ್ಡ ದೊಡ್ಡ ವಿದ್ವಾಂಸರನ್ನು ಹಾಕುತ್ತಾ ಇರಲಿಲ್ಲ. ಅದು ರಾಜ್ಯ ಸರ್ಕಾರದ ಆ ಆಡಳಿತದಲ್ಲಿ ನಡೆಯುತ್ತಾ ಇರತಕ್ಕ ನ್ಯೂನತೆಗಳನ್ನು, ಲೋಪದೋಷ ಗಳನ್ನು, ವ್ಯಕ್ತಿಗಳ ಕೆಟ್ಟ ವಾಡಗಳನ್ನು ವ್ಯಕ್ತಿಶಃ ಟೀಕೆಗಳನ್ನು ನೇರವಾಗಿ ಸಾರ್ವಜನಿಕರ ಗಮನಕ್ಕೆ ತಂದು ಬಹಳ ಪ್ರಾಮುಖ್ಯವಾದ ಕೆಲಸವನ್ನು ಮಾಡುತ್ತಿತ್ತು. ಕಿಡಿ ಪತ್ರಿಕೆ ವ್ಯಕ್ತಿಗಳ ಮನಸ್ಸಿನಲ್ಲಿ ಭೂತಾಕಾರವಾಗಿ ಇರುತ್ತಿತ್ತು. ಮತ್ತು ಅವರನ್ನು ಹೆದರು ಬಡಿಸುತ್ತಿತ್ತು. ಯಾವ ಪತ್ರಿಕೆಗಳಿಗೂ ಕೂಡ ಹೆದರದೇ ಇರುತ್ತಿದ್ದವರು ಕಿಡಿ ಪತ್ರಿಕೆಗೆ ಹೆದರಿ ಅಂಜಿ ಅಂಜಿ ನಡೆದು ಕೊಳ್ಳುತ್ತಿದ್ದರು. ಹೆದರಿಕೆ ಮನೋಭಾವ ತೋರಿಸುತ್ತಿದ್ದರು. ಈಗಲೂ ಕೂಡ ಅಂಥ ಪತ್ರಿಕೆ ಗಳು ಬೇಕಾಗುತ್ತದೆ. ಆದಕ್ಕೋಸ್ಕರ ಸಣ್ಣ ಪತ್ರಿಕೆಗಳಿಗೆ ಏತಕ್ಕೆ ಬೆಂಬಲ ಕೊಡಬಾರದು ! ರಾಜ್ಯಸರ್ಕಾರದವರು ಏತಕ್ಕೆ ಪ್ರೋತ್ಸಾಹ ಕೊಡಬಾರದು ! ಸರ್ಕಾರದ ತಪ್ಪುಗಳನ್ನು ಮುಚ್ಚಿಟ್ಟುಕೊಳ್ಳುತ್ತಾ ಹೋದರೆ ಸಾರ್ವಜನಿಕರಿಗೆ ಗೊತ್ತಾಗದೇ ಹೋದರೆ, ಪ್ರಜಾಪ್ರಭುತ್ವ ಚೆನ್ನಾಗಿ ನಡೆಯುವುದಕ್ಕೆ ಆಗುವುದಿಲ್ಲ. ಆಡಳಿತವಲ್ಲಿ ಇರುವ ತಪ್ಪನ್ನು ಎತ್ತಿ ಎತ್ತಿ ತೋರಿಸ ಬೇಕಾಗುತ್ತದೆ. ಆ ಕೆಲಸವನ್ನು ಸಣ್ಣ ಪತ್ರಿಕೆಗಳು ಮಾಡಬೇಕಾಗುತ್ತದೆ. ಅವು ಹಣಕಾಸಿನ ಪರಿಸ್ಥಿತಿಯಲ್ಲಿ ತೊಂದರೆಗಳಿಗೆ ಸಿಕ್ಕಿಹಾಕಿಕೊಂಡಿರುತ್ತವೆ. ಹಣ ಇಲ್ಲದಿದ್ದರೆ ನಾಳೆ ಬೆಳಗ್ಗೆ ಪತ್ರಿಕೆ ಬರುವುದಕ್ಕಾಗುವುದಿಲ್ಲ. ಕೊನೆ ಪಕ್ಷ ರಾಜ್ಯಸರ್ಕಾರದ ವತಿಯಿಂದ ಕಿಂಚಿತ್ತಾದರೂ ಹಣಕಾಸಿನ ಸಹಾಯ ಸಿಕ್ಕಿದರೆ ಪತ್ರಿಕೆಗಳು ಜೀವಂತವಾಗಿದ್ದು ತಮ್ಮ ಕೆಲಸ ನಡೆಸುವುದಕ್ಕೆ ಸಹಾಯವಾಗುತ್ತದೆ. ಅನೇಕ ಪತ್ರಿಕೆಯವರು ನಮಗೆ ಇದರ ಬಗ್ಗೆ ಪತ್ರ ಬರೆಯುತ್ತಾರೆ. ಜಾಹಿರಾತು ವಿಭಾಗದವರು ಜಾಹಿರಾತು ಕೊಡುವಾಗ ತಮಗೆ ಬೇಕಾದ ಪತ್ರಿಕೆಗಳಿಗೆ ಜಾಹಿರಾತು ಕೊಡುವುದು, ಬೇಡದಿದ್ದವರಿಗೆ ಕೊಡದೇ ಬಿಡುವುದು, ಈ ಕೆಲಸ ಸ್ಪಷ್ಟವಾಗಿ ಮಾಡುತ್ತಾ ಬಂದಿದ್ದಾರೆ. ತಮ್ಮ ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕ

(ಶ್ರೀ ಎಸ್. ಬಂಗಾರಪ್ಪ)

ಕೆಲವು ಅಧಿಕಾರಿಗಳು ತಮ್ಮ ಹತ್ತಿರದವರ ಹೆಸರಿನಲ್ಲಿ, ತಮ್ಮ ಸಂಬಂಧೀಕರ ಹೆಸರಿನಲ್ಲಿ ಕೆಲವು ಪತ್ರಿಕೆಗಳನ್ನು ಬೆಂಗಳೂರಿನಲ್ಲಿ ನಡೆಸುತ್ತಾ ಇದ್ದಾರೆ. ಸರ್ಕಾರ ಕೊಡುವ ಜಾಹಿರಾತನ್ನು ಪಡೆದು ಹಣವನ್ನು ಲಪಟಾಯಿಸುತ್ತಿದ್ದಾರೆ. ಅಧಿಕಾರಿಗಳ ರಕ್ತ ಸಂಬಂಧೀಕರ ಹೆಸರಿನಲ್ಲಿ ಇಂಥ ಪತ್ರಿಕೆಗಳು ನಡೆಯುತ್ತಾ ಇರುವ ವಿಷಯ ರಾಜ್ಯ ಸರ್ಕಾರದ ಗಮನಕ್ಕೆ ಬೇಕಾದರೆ ತರುತ್ತೇನೆ. ಯಾರ ಸಂಪಾದಕತ್ವದಲ್ಲಿ ಇವು ಇರುತ್ತವೆ, ಜಾಹಿರಾತು ಎಷ್ಟೆಷ್ಟು ಕೊಟ್ಟಿದ್ದಾರೆ ಎನ್ನುವುದನ್ನೂ ವಿಚಾರ ಮಾಡಬೇಕಾಗುತ್ತದೆ. ತಾವು ಸರ್ಕ್ಯುಲರ್ ಹೊರಡಿಸಿ ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟಿನಲ್ಲಿ ಯಾರ ಯಾರ ಅಧಿಕಾರಿಗಳ ಸಂಬಂಧಿಕರ ಹೆಸರಿನಲ್ಲಿ ಇಂಥ ಪತ್ರಿಕೆಗಳು ಇವೆ ಎನ್ನುವ ವಿಷಯವನ್ನು ತಿಳಿಸಬೇಕು. ತಾವು ಆದೇಶ ಹೊರಡಿಸಿ ಎಷ್ಟೆಷ್ಟು ಪತ್ರಿಕೆಗಳು ಅಧಿಕಾರಿಗಳ ಸಂಬಂಧೀಕರ ಹೆಸರಿನಲ್ಲಿ ಇವೆ, ಜಾಹಿರಾತು ಎಷ್ಟು ಕೊಟ್ಟಿದ್ದಾರೆ, ಹಣ ಎಷ್ಟು ಹೋಗಿದೆ ಎನ್ನುವುದನ್ನು ವಿಚಾರಮಾಡಬೇಕು. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ, ಎನ್ನುವಂತೆ ಮಾಡಿ ಕೆಲವಕ್ಕೆ ಅವಕಾಶ ಕೊಟ್ಟು ಸ್ವತಂತ್ರ್ಯ ಜೀವನ ಮಾಡುವ ವ್ಯಕ್ತಿಗಳನ್ನು ಸದೆ ಬಡಿಯುವುದು, ಪ್ರಜಾಪ್ರಭುತ್ವದ ಲಕ್ಷಣವಲ್ಲ ಪತ್ರಿಕೆಗಳು ಸ್ವತಂತ್ರವಾಗಿ ಉಳಿಯಬೇಕು. ಇದಕ್ಕೆ ಧಕ್ಕೆ ಬರದುಹಾಗೆ ಗಮನ ಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ರಾಜ್ಯ ಸರ್ಕಾರದವರು ಹೊರಡಿಸುತ್ತಾ ಇರತಕ್ಕ ಮಾರ್ಚ್ ಆಫ್ ಕರ್ನಾಟಕ ನಂಬರ್ ಒಂದನೇ ತಾರೀಖಿನ ದಿನ ಬರಬೇಕಾಗಿತ್ತು. ನವೆಂಬರ್ 1ನೇ ತಾರೀಖು ಅದನ್ನೂ ತರಲಿಕ್ಕೆ ಆಗದಿದ್ದಾಗ ನಿಮ್ಮ ಇಲಾಖೆಯವರು ಇದ್ದುದು ಏತಕ್ಕೆ ಎಂದು ಕೇಳಬೇಕಾಗಿದೆ? ಜನವರಿ, ಫೆಬ್ರುವರಿ ಮುಂದೆ ಬರತಕ್ಕ ಸಂಚಿಕೆಗೇ ಕೊಡು 2-3 ತಿಂಗಳಿಗೆ ಒಂದು ಸಾರಿ ಪತ್ರಿಕೆ ಹೊರಕ್ಕೆ ಬರುತ್ತದೆ. ಅಲ್ಲಿಯವರೆಗೆ ಡಿಪಾರ್ಟ್‌ಮೆಂಟ್ ವಲಂತೇ? ರಾಜ್ಯದ ನಾಮಕರಣೋತ್ಸವ ಕರ್ನಾಟಕ ರಾಜ್ಯೋತ್ಸವ ಆತಕ್ಕ ಸಂದರ್ಭದಲ್ಲಿ ರಾಜ ಸರ್ಕಾರ ಈ ಒಂದು ಸಮಾರಂಭಕ್ಕೆ ಕಳೆಯನ್ನು ಕೊಡುವಂತಹ ಮಾರ್ಚ್ ಆಫ್ ಕರ್ನಾಟಕ ಬರಬೇಕಾಗಿತ್ತು. ಈ ಪುಸ್ತಕ ಯಾವಾಗ ಬರಬೇಕಾಗಿತ್ತು ಎನ್ನುವ ತಿಳುವಳಿಕೆ ಇಲ್ಲ. ಈ ಒಂದು ಇಲಾಖೆಯನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ? ಜೊತೆಗೆ 'ಜನಪದ'' ಇದೂ ಕೂಡ ಒಂದು ವೀಕ್ಲಿ ಇನ್ನು 2-3 ಪತ್ರಿಕೆಗಳು ಇದೆ. ಈಗಾಗಲೇ ಮಾನ್ಯ ಸದಸ್ಯರು ಇದರ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಇದರಲ್ಲಿ ಹೆಚ್ಚಿಗೆ ಬರತಕ್ಕ ಅಂಶವಾದರೇ ತಮ್ಮ ಫೋಟೋಗಳು ಮತ್ತು ತಮ್ಮ ವಿಷಯಗಳು. ಅದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅದು ಬೇರೆ ವಿಷಯಗಳನ್ನೂ ಕೂಡ ಒಳಗೊಂಡಿರಬೇಕು.

ತಮ್ಮ ವಿಷಯ ಕುದುರೆ ಕಣ್ಣಿಗೆ ಕಟ್ಟಿಕೊಂಡು ನೇರವಾಗಿ ಹೋಗತಕ್ಕ ರೀತಿ ಪತ್ರಿಕೆ ಆಗಬಾರದು. ಶಾಸನಸಭಾ ಸದಸ್ಯರಾದ ದೇವೇಗೌಡರಿಗೂ, ನನಗೂ ಆ ಪತ್ರಿಕೆಗಳು ಬರುತ್ತವೆ. ಅವನ್ನು ನಾವು ಓದುವುದಕ್ಕೆ ಹೋಗುವುದಿಲ್ಲ. ತಮ್ಮ ಫೋಟೋಗಳನ್ನು ನೋಡಿ, ತಮ್ಮ ವೃತ್ತಾಂತ, ಜೀವನ ಚರಿತ್ರೆ ಕೇಳಿ ಕೇಳಿ ನಮಗೆ ಸಾಕಾಗಿ ಹೋಗಿದೆ. ಆದುದರಿಂದ ತಮ್ಮ ಫೋಟೋ, ತಮ್ಮ ವೃತ್ತಾಂತ ಒಂದು ಸಾರಿ, ಎರಡು ಸಾರಿ ಹಾಕಿದರೆ ಸಾಕು. ತಾವು ಸಚಿವರಾಗಿ ಆದಮೇಲೆ ತಮ್ಮ ವೃತ್ತಾಂತವನ್ನು ಸಂಕ್ಷಿಪ್ತವಾಗಿ ಅಚ್ಚು ಹಾಕಿದರೆ ಅದನ್ನು ನೆನಪು ಇಡತಕ್ಕ ಶಕ್ತಿ ಬೇಕಾದಷ್ಟು ಇದೆ.

Mr DEPUTY SPEAKER.—Old order change the yelcding place to new ಎಂದು ಹೇಳಿದ ಹಾಗೆ ಮೇಲಿಂದ ಮೇಲೆ ಓದುತ್ತಾ ಇದ್ದರೆ ಟೀಕೆ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ.—ಪ್ರಗತಿ ಪಥದಲ್ಲಿ ತಾವು ರಾಜ್ಯವನ್ನು ಕೊಂಡೊಯ್ಯುತ್ತಾ ಇಲ್ಲ ಎನ್ನುವ ಬಗ್ಗೆ ಟೀಕೆ ಮಾಡುವುದಕ್ಕೆ ಸಾಕಷ್ಟು ಪ್ರಕರಣಗಳು ಇರಬೇಕಾದರೆ ಈ ಸಂದರ್ಭದಲ್ಲಿ ತಮ್ಮ ಫೋಟೋ ಜನತೆ ಮುಂದೆ ಇಟ್ಟರೆ, ಅದರ ಬಗ್ಗೆ ಯಾವರೀತಿ ವ್ಯಾಖ್ಯಾನ ಮಾಡಬೇಕೋ ಗೊತ್ತಾಗುತ್ತಾ ಇಲ್ಲ. ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಮತ್ತು ಡಾಕ್ಯುಮೆಂಟರಿ ಫಿಲಮ್ ಬಗ್ಗೆ ಈಗಾಗಲೇ ಹೇಳಿದ್ದಾರೆ. ಅದರ ಬಗ್ಗೆ ವ್ಯಾಖ್ಯಾನಕ್ಕೆ ಹೋಗುವುದಿಲ್ಲ. ಮುಖ್ಯಮಂತ್ರಿಗಳ ಬಗ್ಗೆ ಸಾಕ್ಷ್ಯ ಚಿತ್ರವನ್ನು ತಯಾರು ಮಾಡುವುದಾದರೆ, ಅದಕ್ಕೆ ಅಭ್ಯಂತರವಿಲ್ಲ. ಯಾವ ಸಂದರ್ಭದಲ್ಲೂ ದೊಡ್ಡ ಯೋಜನೆ ಬಗ್ಗೆ ನಿಜವಾಗಿಯೂ ಕಷ್ಟಪಟ್ಟು ದುಡಿಯುತಕ್ಕ ವರ್ಗದ ಬಗ್ಗೆ ಅವರ ಜೀವನದ ಬಗ್ಗೆ, ಇವರ ಬಡತನದ ಬಗ್ಗೆ ಅವರ ಬಟ್ಟೆ, ಅನ್ನ

ವಿಷಯದ ಬಗ್ಗೆ ಸಾಕ್ಷ್ಯಚಿತ್ರ ತರುವುದಾದರೆ ನಿಜವಾಗಿಯೂ ನಮ್ಮ ಒಪ್ಪಿಗೆ ಇದೆ. ಈ ಸಂದರ್ಭ ದಲ್ಲಿ ಮುಖ್ಯ ಮಂತ್ರಿ ದೇವರಾಜ್ ಅರಸ್ ಇರಲಿ, ಯಾರೇ ಇರಲಿ, ಬಡತನವನ್ನು ಹೋಗಲಾಡಿಸು ವುದಕ್ಕೆ ದೊಡ್ಡ ಪ್ರಯತ್ನ ಮಾಡಿ ಸಾರ್ವಜನಿಕರು ಒಪ್ಪತಕ ಕಾರ್ಯಕ್ರಮ ಹಾಕಿಕೊಳ್ಳ ಬೇಕಾದರೆ ನಿಜವಾಗಿ ಸಾಕ್ಷ್ಯ ಚಿತ್ರದಲ್ಲಿ ತಮ್ಮ ಫೋಟೋ ಬರುವುದಕ್ಕೆ ತಾವು ಅರ್ಹರು ಎಂದು ತೀರ್ಮಾನ ಮಾಡೋಣ ಇಲ್ಲದೆ ಇದ್ದರೆ ದೇವಸ್ಥಾನದ ಒಳಗೆ ಹೋಗುವುದು, ಆನೆ ಸೊಂಡಲಿ ನಿಂದ ಹೂವಿನ ಹಾರ ಹಾಕಿಸಿಕೊಳ್ಳುವುದು ಕುದುರೆ ಮುಂದೆ ಹಿಂದೆ ಹೋಗುವುದು ಡ್ರಂ ಹೊಡೆಸುವುದನ್ನು ಇದನ್ನು ಬಿಡಬೇಕು.

ಶ್ರೀ ಟಿ. ಎಂ. ಮಂಜುನಾಥ್.—ನಮಗೆ ಮೇಜುವಾನಿ ದರ್ಬಾರುಗಳನ್ನು ನೋಡಿ ನೋಡಿ ಸಾಕಾಗಿದೆ. ಹಿಂದಿನ ಮಹಾರಾಜರು ಅರಮನೆಯಲ್ಲಿ ದರ್ಬಾರ್ ಮಾಡುತ್ತಾ ಇದ್ದಾರ, ಈಗ ಇವರು ಜನರ ಕಣ್ಣಿಗೆ ಎದುರಿಗೆ ಹೋಗಿ ದರ್ಬಾರು ಮಾಡುತ್ತಿದ್ದಾರೆ. ಸಾರ್ವಜನಿಕರ, ಹಣವನ್ನು ಸ್ವಾರ್ಥ ಪ್ರಚಾರಕ್ಕಾಗಿ, ಜನತೆಯ ಕಣ್ಣಿನಲ್ಲಿ ಮಣ್ಣು ಎರಚುವುದಕ್ಕೆ ಕೋಟಿಗಟ್ಟಲೆ ಖರ್ಚ ಮಾಡುವ ಕಾರ್ಯ ಮಾಡುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಘೋರ್ಪಡೆಯವರು ಕಿರೀಟ ಹಾಕಿಕೊಂಡು ಜಂಬೂ ಸವಾರಿ ಮಾಡಿದ್ದಾರಲ್ಲ !

ಶ್ರೀ ಎಸ್. ಬಂಗಾರಪ್ಪ.—ಇದು ಪ್ರಜಾಪ್ರಭುತ್ವದ ಲಕ್ಷಣ ಅಲ್ಲ, ಇದನ್ನು ನಿಲ್ಲಿಸಬೇಕು, ಮುಖ್ಯ ಮಂತ್ರಿಗಳು ಡಾಕ್ಯುಮೆಂಟರಿ ಫಿಲಂ ಯಾವಾಗ ಮಾಡಿದ್ದಾರೆ ? ಬರಗಾಲ ಇದ್ದು ಹಣ ಇಲ್ಲದೆ, ಉತ್ತರ ಕರ್ನಾಟಕ ಭಾಗದಲ್ಲಿ ಜನ ಭವಣೆ ಪಡುವ ಸಂದರ್ಭದಲ್ಲಿ ಕುಡಿಯುವ ನೀರು ಇಲ್ಲದೆ, ಊಟ ಇಲ್ಲದೆ ಮಾಡುವುದಕ್ಕೆ ಕೆಲಸ ಇಲ್ಲದೆ ಇರುವ ಸಂದರ್ಭದಲ್ಲಿ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟಿನಿಂದ ಕ್ಯಾಮರ ತರಿಸಿ ಫೋಟೋ ಹೊಡಿಸಿಕೊಳ್ಳುವುದು ನಾಚಿಕೆ ಪಡತಕ್ಕ ವಿಷಯ. ಈ ದೃಷ್ಟಿಯಿಂದ ಹೇಳುತ್ತೇನೆ. ಈ ಕಾರ್ಯವನ್ನು ತಾವು ಕೈ ಬಿಡಬೇಕು.

ಶ್ರೀ ಬಿ. ಪಟ್ಟಸ್ವಾಮಯ್ಯ.—ಅಂಬಲಿ ಕುಡಿಯುವವನಿಗೆ ಮೀಸೆ ಹಿಡಿಯುವವನೊಬ್ಬ ಎಂದ ಹಾಗೆ ಇದೆ.

ಶ್ರೀ ಎಸ್. ಬಂಗಾರಪ್ಪ.—ಇನ್ನು ಕೊನೆಯ ವಿಷಯ ಹೇಳಿ ನನ್ನ ಮಾತನ್ನು ಮುಗಿಸು ವುದಕ್ಕೆ ಇಚ್ಛೆಪಡುತ್ತೇನೆ. ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ವಿಷಯದಲ್ಲಿ ಇದರ ಬಗ್ಗೆ ರಾಜ್ಯ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ತಯಾರು ಆಗತಕ್ಕ ಚಿತ್ರ ಕನ್ನಡ, ಹಿಂದಿ, ತುಳು, ತಮಿಳು, ತೆಲುಗು, ಮಲೆಯಾಳಂ ಅಥವಾ ಯಾವುದೇ ಭಾಷೆಯಲ್ಲಿ ಇರಲಿ, ಅದಕ್ಕೆ ನಾವು 50 ಸಾವಿರ ರೂಪಾಯಿ ಸಬ್ಸಿಡಿ ಕೊಡುತ್ತೇವೆ ಎನ್ನುವ ಒಂದು ಮಾತನ್ನು ತಿಳಿಸಿದ್ದಾರೆ ಹಣಕಾಸಿನ ತೊಂದರೆ ಇದ್ದು ನಮ್ಮ ದೇಶದಲ್ಲಿ ಸಿನಿಮಾ ನೋಡಲಿಲ್ಲ ಎಂದು ಇಟ್ಟುಕೊಂಡರೆ ಪ್ರಪಂಚ ಮುಳುಗಿ ಹೋಗುವುದಿಲ್ಲ. ಸಿನಿಮಾ ಇಲ್ಲದಿದ್ದರೆ ಯಾರೂ ಹಾಳಾಗಿ ಹೋಗುವುದಿಲ್ಲ. ರಾಜ್ಯ ಹಾಳಾಗಿ ಹೋಗುವುದಿಲ್ಲ. ನಮ್ಮ ರಾಜ್ಯ ಸರ್ಕಾರದವರು ಇದನ್ನು ಕೈ ಬಿಡಬೇಕು. ಇದರಿಂದ ಸಾರ್ವಜನಿಕರ ಹಣ ಬೇರೆ ಕಡೆಗೆ ಹೋಗುತ್ತದೆ. ನೆರೆ ರಾಜ್ಯದಲ್ಲ ಬೇರೆ ಭಾಷೆಯಲ್ಲಿ ತಯಾರಾಗತಕ್ಕ ಚಿತ್ರಗಳು ಇಲ್ಲ ಬಂದು ನಮ್ಮ ಹಣ ದೋಚಿಕೊಂಡು ಹೋಗುತ್ತವೆ ಎಂಬ ವಿಷಯವನ್ನು ಮನಗಾಣಬೇಕು. ತಾವು ಚಲನಚಿತ್ರ ಅಭಿವೃದ್ಧಿ ಮಂಡಲ ಏನು ಮಾಡಿದ್ದೀರಿ ಅದನ್ನು ಸ್ವಾಗತ ಮಾಡುತ್ತೇನೆ ಇಲ್ಲ ಎಂದು ಹೇಳುವುದಿಲ್ಲ. ಕಚ್ಚಾ ಫಿಲಂ ಮತ್ತು ಬೇರೆ ಸಾಮಾನುಗಳ ಬೆಲೆ ಕಡಿಮೆ ಇದ್ದ ಕಾಲದಲ್ಲ 50 ಸಾವಿರ ರೂಪಾಯಿ ಸಬ್ಸಿಡಿ ನೀಡಿದ್ದು ಇತ್ತೀಚಿನ ಪತ್ರಿಕೆಯಲ್ಲಿ ಬರುವ ಅಂಕಿಅಂಶಗಳು ಓದಿದರೆ ನಮ್ಮ ಭಾಷೆಯಲ್ಲಿ ತಯಾರಾಗತಕ್ಕ ಚಿತ್ರಗಳ ಸಂಖ್ಯೆ ಈ ವರ್ಷ ಮತ್ತೆ ಅಧೋಗತಿಗೆ ಇಳಿದು ಹೋಗುತ್ತಿದೆ. ವರ್ಷದಿಂದ ವರ್ಷಕ್ಕೆ ವರ್ಷ ಕಡಿಮೆಯಾಗುತ್ತಿದೆ. ಸಿನಿಮಾ ನೋಡತಕ್ಕ ಜನಸಂಖ್ಯೆ ಏನು ಇದೆ ಅದು ಮಾತ್ರ ಕಡಿಮೆ ಆಗುತಲೂ ಇಲ್ಲ. ಚಲನಚಿತ್ರ ನೋಡತಕ್ಕ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಇದಕ್ಕಾಗಿ ಜನ ಖರ್ಚು ಮಾಡತಕ್ಕ ಹಣ ಎಲ್ಲಿ ಹೋಗುತ್ತದೆ ? ಬೇರೆ ಭಾಷೆಯಲ್ಲಿ ತಯಾರಾಗುವ ಚಿತ್ರಗಳು ಬೆಂಗಳೂರು ನಗರ ಮತ್ತು ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ನಡೆಯತಕ್ಕದು ನಿರ್ವಿವಾದವಾಗಿದೆ. ತಮಿಳು, ತೆಲುಗು, ಹಿಂದಿ ಮತ್ತೆ ಯಾವುದೇ ಭಾಷೆಯಲ್ಲ ತಯಾರಾಗತಕ್ಕ ಚಿತ್ರಗಳನ್ನು ನೋಡಲು ಹೋದಾಗ ಅದಕ್ಕೆ ಖರ್ಚ ಮಾಡಿದ ಹಣ ಆ ರಾಜ್ಯದ ಜನರಿಗೆ ಸೇರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನೀವು ಮನಗಾಣಬೇಕು. ಈ ದೃಷ್ಟಿಯಿಂದ 50 ಸಾವಿರ ರೂಪಾಯಿ ಸಬ್ಸಿಡಿ ಏನು ಇದೆ ಇದನ್ನು

(ಶ್ರೀ ಎಸ್. ಬಂಗಾರಪ್ಪ)

ಜಾಸ್ತಿ ಮಾಡಬೇಕು ಒಂದು ಲಕ್ಷ ರೂಪಾಯಿ ಚಲನ ಚಿತ್ರ ತಯಾರಿಕೆಗೆ ಕೊಡಬೇಕು ಎನ್ನತಕ್ಕ ವಿಷಯವನ್ನು ಕೂಡ ಫಿಲಂ ಚೇಂಬರ್ ಆಫ್ ಕಾಮರ್ಸ್ ಅವರು ನಮ್ಮ ರಾಜ್ಯದ ಮುಂದೆ ಇಟ್ಟಿದ್ದಾರೆ ಮತ್ತು ಮುಖ್ಯಮಂತ್ರಿಗಳ ಮತ್ತು ತಮ್ಮ ಗಮನದಲ್ಲಿ ಇದೆ ಎಂದು ಕೇಳಿದ್ದೇನೆ. ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು ಎನ್ನತಕ್ಕ ಬಗ್ಗೆ ತಮ್ಮ ಉತ್ತರವನ್ನು ಈಪೊತ್ತು ನಿರೀಕ್ಷಣೆ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಒಂದು ಫಿಲಂ ಅಡ್ವೈಸರಿ ಕಮಿಟಿ ಮಾಡಿದ್ದಾರೆ. ಹೋಂ ಸೆಕ್ರೆಟರಿಯವರು ಶ್ರೀ ಹನುಮಾನ್‌ರವರು ಅದಕ್ಕೆ ಅಧ್ಯಕ್ಷರು ಆಗಿದ್ದಾರೆ. ಇದರಲ್ಲಿ ಕೆ. ಕೆ. ಮೂರ್ತಿ ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾರೆ. ಅವರ ಬಗ್ಗೆ ವ್ಯಾಖ್ಯಾನಕ್ಕೆ ಹೋಗುವುದಿಲ್ಲ. Why the State Government has not given the lise of Directors of the film Development Corporation ? ಅದನ್ನು ಏತಕ್ಕೆ ಮುಚ್ಚಿ ಇಟ್ಟಿದ್ದೀರಿ ಎಂದು ಕೇಳುತ್ತೇನೆ. ಈ ವಿಷಯದಲ್ಲಿ ಅನೇಕ ಲೋಪದೋಷಗಳು ಸ್ವಾರ್ಥಸಾಧನೆಯ ಕೆಲಸಕಾರ್ಯಗಳು ನಡೆದಿವೆ. ನಾನು ನೇರವಾಗಿ ರಾಜ್ಯಸರ್ಕಾರದ ಮೇಲೆ, ತಮ್ಮ ಮೇಲೆ ಆಪಾದನೆ ಮಾಡುವುದಕ್ಕೆ ತಯಾರಿದ್ದೇನೆ. ಕೆ ಕೆ. ಮೂರ್ತಿಯವರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಹಿಂದೆ ಚರ್ಚೆಯಾಗಿದೆ ಅದನ್ನು ನಾನು ಹೇಳಿದ್ದನ್ನೇ ಹೇಳುವುದಕ್ಕೆ ಹೋಗುವುದಿಲ್ಲ ಯಾವ ರೀತಿ ಕೆಲಸಮಾಡುತ್ತಾರೆ ಎನ್ನುವ ಬಗ್ಗೆ ಮುಂದೆ ನೋಡೋಣ. ಫಿಲಂ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಡೈರೆಕ್ಟರ್ಸ್ ಯಾರು ಯಾರು ಇದ್ದಾರೆ ಎನ್ನುವ ಮಾತನ್ನು ಅರಿಯಬೇಕಾಗಿದೆ. ನನ್ನ ಗಮನಕ್ಕೆ ಒಂದು ಹೊಸ ವಿಷಯ ಬಂದಿದೆ. ಇತ್ತೀಚೆಗೆ I have got documentary evi ience to prove that also. ಮಾನ್ಯ ಮುಖ್ಯಮಂತ್ರಿಗಳ ಸಹೋದರರಾದ ಶ್ರೀ ಡಿ. ಕಂಪರಾಜ್ ಅರಸ್ ಅವರನ್ನು ರಾಜ್ಯಸರ್ಕಾರದವರು ಫಿಲಂ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ನಿನ ಒಬ್ಬ ಡೈರೆಕ್ಟರನ್ನಾಗಿ ನೇಮಕ ಮಾಡಿದ್ದಾರೆ V.de G.O No. HD 16 CIF 72 dated 2nd January 1974. ಮಾನ್ಯ ದೇವೇಗೌಡರ ಗಮನಕ್ಕೂ ತರಬಯಸುತ್ತೇನೆ ಇದೇ ವರ್ಷ ಜನವರಿ 2ನೇ ತಾರೀಖು ನಾನು ಹೇಳಿದ ಗವರ್ನ್‌ಮೆಂಟ್ ಆರ್ಡರ್ ಪ್ರಕಾರ, ಆ ಒಂದು ಸ್ಥಾನದಲಿದ್ದಂಥ ರಾಜ್ಯದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಆರ್. ಜೆ. ರೆಬೆಲ್ಲೋ ಅವರಿಗೆ ಹೇಳಿ, ಅವರಿಂದ ರಾಜಿನಾಮೆ ಕೊಡಿಸಿ, ಆ ಸ್ಥಾನಕ್ಕೆ ಡಿ ಕೆಂಪರಾಜ್ ಅರಸ್ ಅವರನ್ನು ಡೈರೆಕ್ಟರನ್ನಾಗಿ ನೇಮಕವಾಡಿದ್ದಾರೆ. ಇವರು ಯಾರು ? ಇವರ ವೃತ್ತಾಂತವನ್ನು ಸ್ವಲ್ಪ ತಿಳಿದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳ ಸಹೋದರರಾದ ಕಾರಣ ಹಕ್ಕಿಲ್ಲ ಎಂದು ವಾದ ಮಾಡುವುದಿಲ್ಲ. ಅವರೂ ಈ ದೇಶದ ಪ್ರಜೆ, ಅವರಿಗೂ ಹಕ್ಕು ಇದೆ. ಆದರೆ ಇವರ ವೃತ್ತಾಂತ ಬೇರೆ ಇದೆ. ಮಾನ್ಯ ಅಧ್ಯಕರ ಗಮನಕ್ಕೂ, ಸರ್ಕಾರದ ಗಮನಕ್ಕೂ ಅದನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. He is a declared insolvent. ಶ್ರೀ ಮಾನ್ ಡಿ. ಕೆಂಪರಾಜ್ ಅರಸರು ಮದ್ರಾಸ್ ಹೈಕೋರ್ಟ್‌ನಲ್ಲಿ ಇನ್‌ಸಾಲ್ವೆನ್ಸಿ ಪಿಟಿಷನ್ ಹಾಕಿ ಡಿಕ್ರೀ ಆಯಿತು ಅನೇಕ ಸಾವಿರ, ಲಕ್ಷ ರೂಪಾಯಿಗಳಿಗೆ. ಉಳಿದದ್ದು ಸಮಾಚಾರ ಗೊತ್ತಿಲ್ಲ. I have got documentary evidence to prove it. Original Suit No. 2442 of 1962. ಕೇಸ್‌ನಲ್ಲಿ ಡಿಕ್ರಿಯಾದ ಮೇಲೆ, execution proceedings ಆಗಿ ಅವರ movablesಗೆ ಅಟ್ಯಾಚ್‌ಮೆಂಟ್ ಆಗಿದೆ. ಅವರು ಹೈಕೋರ್ಟಿನಲ್ಲಿ ಪಿಟಿಷನ್ ಹಾಕಿದ ನಂಬರ್ ಇದೆ. ಅದು 450 of 1966 in the High Court of Judicature at Madras. ಮಾನ್ಯ ಕೆಂಪರಾಜ್ ಅರಸರು ನಾನು ಇನ್‌ಸಾಲ್ವೆಂಟ್ ಎಂದು ಪಿಟಿಷನ್ ಹಾಕಿ ಕೋರ್ಟಿನಿಂದ ಆರ್ಡರ್ ತೆಗೆದುಕೊಂಡಿದ್ದಾರೆ. ಹೈಕೋರ್ಟ್‌ನವರು ಡಿಕ್ಲೇರ್ ಮಾಡಿದ್ದಾರೆ. He is an insolvent under the provisions of the Indian Insolvency Act ಎಂದು declare ಮಾಡಿದ್ದಾರೆ. Film Development Corporation deals with several crores and lakhs of rupoes. ಎಷ್ಟು ಕೋಟಿ ರೂಪಾಯಿಗಳ ಬಂಡವಾಳವನ್ನು ಫಿಲಂ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ಹೂಡುತ್ತೀರಿ, ಯಾವ ಯಾವ ಷೆಡ್ಯೂಲ್ ಬ್ಯಾಂಕ್ಸ್ ಹಣ ಕೊಡುವುದಕ್ಕೆ ಮುಂದೆ ಬಂದಿದೆ ಎನ್ನುವ ವಿಷಯವನ್ನು ತಿಳಿಸಬೇಕು. ಲಕ್ಷಾಂತರ, ಕೋಟ್ಯಾಂತರ ರೂಪಾಯಿ ವ್ಯವಹಾರ ಮಾಡತಕ್ಕ ಈ ಫಿಲಂ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಲ್ಲಿ ಡೈರೆಕ್ಟರ್ಸ್ ಯಾರು ಇರಬೇಕು ? ಅಧ್ಯಕ್ಷರ ಮೂಲಕ ಕೇಳುತ್ತೇನೆ, ಕೋಟ್ಯಾಂತರ ರೂಪಾಯಿ ವ್ಯವಹಾರ ಮಾಡತಕ್ಕ ಈ ಸಂಸ್ಥೆಯಲ್ಲಿ ಹಣದ ಬಗ್ಗೆ ನಷ್ಟೇ ಇರಬೇಕು ಸಾರ್ವಜನಿಕ ಹಣ ಲೋಪವಾಗಬಾರದು. ಮ್ಯಾನೇಜಿಂಗ್ ಡೈರೆಕ್ಟರ್ ಆಗುವುದಕ್ಕೆ ವ್ಯಕ್ತಿ

ಚಾರಿತ್ರ್ಯ ಒಳ್ಳೆಯದಾಗಿರಬೇಕು, ಹಣ ಹಾಳಾಗಿ ಹೋಗದೆ ಹಾಗೆ ನೋಡಿಕೊಳ್ಳುವ ಬುದ್ಧಿ ಇರಬೇಕಾಗುತ್ತದೆ. ಅದು ಬಿಟ್ಟು ಮುಖ್ಯ ಕಾರ್ಯದರ್ಶಿಗಳಿಂದ ರಾಜೀನಾಮೆ ಕೊಡಿಸಿ, ಅವರ ಜಾಗದಲ್ಲಿ A declared insolvent has been apppointed by the Government. ನಾನು ಕೇಳುತ್ತೇನೆ, ಯಾವ ಆಧಾರದ ಮೇಲೆ ಅವರನ್ನು ಡೈರೆಕ್ಟರನ್ನಾಗಿ ನೇಮಕ ಮಾಡಿದ್ದೀರಿ. ಮುಖ್ಯಮಂತ್ರಿಗಳ ಸ್ವಾರ್ಥ ಅರ್ಥವಾಗುವುದಿಲ್ಲ. ನೀವು ಅವರ ಪ್ರಭಾವಕ್ಕೆ ಒಳಗಾಗಲಿಲ್ಲವೇ ? ನಾನು ಚಾರ್ಜ್ ಮಾಡುತ್ತೇನೆ, ದಯವಿಟ್ಟು ಉತ್ತರ ಕೊಡಬೇಕು. ಕೆಂಪರಾಜ್ ಅವರು ಕಂಟ್ರಾಕ್ಟರ್ ಆಗುವುದಕ್ಕೆ ಹೋಗಿದ್ದರು, ಬಿಸಿನೆಸ್ ಪೀಪಲ್ ಆಗುವುದಕ್ಕೆ ಹೋಗಿದ್ದರು. ಹಿಂದೆ ಡೈರೆಕ್ಟರ್ ಆಗಿದ್ದರು. ಎಲ್ಲಾ ಆದಮೇಲೆ ಕೊನೆಗೆ ಇನ್‌ಸಾಲ್ವೆನ್ಸಿ ತೆಗೆದುಕೊಂಡು ಕೂತಿರತಕ್ಕ ವ್ಯಕ್ತಿ, ಮದ್ರಾಸಿನಲ್ಲಿ 5 ವರ್ಷ ಜೀವನ ಮಾಡಿರತಕ್ಕ ವ್ಯಕ್ತಿ, ಕರ್ನಾಟಕದಲ್ಲಿ ವಾಸ ಮಾಡುತ್ತಾ ಇರಲಿಲ್ಲ. ಅಂತಹ ಇನ್‌ಸಾಲ್ವೆಂಟ್ ವ್ಯಕ್ತಿಯನ್ನು ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ಹಾಕಿ ಕೋಟ್ಯಾಂತರ ರೂಪಾಯಿ ಅವರ ಕೈಯಲ್ಲಿ ಕೊಡುತ್ತೀರಿ, ಯಾವ ನಂಬಿಕೆ ಮೇಲೆ ಸಾರ್ವಜನಿಕರು ಹೋಗಬೇಕು ?

ಶ್ರೀ ಟಿ. ಎಂ. ಮಂಜುನಾಥ್.—ಅದೂ ಇನ್‌ಸಾಲ್ವೆಂಟ್ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ದುರ್ವ್ಯವಹಾರ ಮಾಡತಕ್ಕ ವ್ಯಕ್ತಿಗಳನ್ನು ಜವಾಬ್ದಾರಿ ಸ್ಥಾನದಲ್ಲಿ ಕೂಡಿಸುತ್ತೀರಿ, ಸಾರ್ವಜನಿಕ ಹಣ ಹಾಳಾಗುವುದಿಲ್ಲವೇ ? ಸ್ವಾರ್ಥದ ರಾಜ್ಯ ಆಗುವುದಿಲ್ಲವೇ? ಅದಕ್ಕೆ ಹಣಕಾಸಿನ ಮಂತ್ರಿಗಳಿಂದ ಉತ್ತರ ನಿರೀಕ್ಷೆ ಮಾಡುತ್ತೇನೆ. ಇದಕ್ಕೆ ಸ್ವಜನಪಕ್ಷಪಾತ ಎನ್ನುವ ಮಾತನ್ನು ಉಪಯೋಗ ಮಾಡುತ್ತೇನೆ. ಇದು ಪ್ರಜಾಪ್ರಭುತ್ವದಲ್ಲಿ ಇರಬಾರದು. ಮಾನ್ಯ ಮುಖ್ಯಮಂತ್ರಿಗಳನ್ನು ನೇರವಾಗಿ ಅಪಾದನೆ ಮಾಡುತ್ತಿದ್ದೇನೆ. ಈ ದೃಷ್ಟಿಯಿಂದ ಅಧ್ಯಕ್ಷರ ಮೂಲಕ ನಾನು ಸರ್ಕಾರವನ್ನು ಕೇಳುತ್ತೇನೆ. ಇದು ಸ್ವಜನಪಕ್ಷಪಾತವಾಗುವುದಿಲ್ಲವೇ ? ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವ ಅಂಶ ಆಗುವುದಿಲ್ಲವೇ ? ಇದಕ್ಕೆ ಯಾವ ರೀತಿ ಉತ್ತರ ಕೊಡುತ್ತೀರಿ ಎಂದು ನಿರೀಕ್ಷಣೆ ಮಾಡುತ್ತೇನೆ. ಅದಕ್ಕೋಸ್ಕರ ಅವರನ್ನು ಕೂಡಲೇ ತೆಗೆದುಹಾಕಬೇಕು ಎಂದು ಮಾನ್ಯ ಘೋರ್ಪಡೆಯವರನ್ನು ಕೇಳುತ್ತೇನೆ. ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕುವುದಕ್ಕೆ ಮೊದಲು ಯಾವ ದಾಕ್ಷಿಣ್ಯಕ್ಕೂ ಒಳಗಾಗದೇ ಆ ವ್ಯಕ್ತಿಯನ್ನು ತೆಗೆದು ಬಿಸಾಕಬೇಕು. ಮಾನ್ಯ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದು ನಾವು ಕೇಳಬೇಕಾದ ಸಂದರ್ಭ ಬರುತ್ತದೆ. ರಾಜ್ಯಸರ್ಕಾರದವರು ನೇರವಾಗಿ ಇದರ ಬಗ್ಗೆ ಉತ್ತರ ಕೊಡಬೇಕು ಎನ್ನುವ ಮಾತನ್ನು ಹೇಳಿ, ಉಳಿದಿರತಕ್ಕ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಇಚ್ಛೆ ಪಡುವುದಿಲ್ಲ; ಈ ನಾಲ್ಕು ವಿಷಯಗಳನ್ನು ಹೇಳುವುದಕ್ಕೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

The Chairman (SMT. WINNIFRED F. FERNANDES) in the Chair

5-00 P.M.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು 1974-75ನೇ ಸಾಲಿಗೆ ಸಂಬಂಧಪಟ್ಟ ಕೆಲವು ಇಲಾಖೆಗಳ ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದನ್ನು ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ನಾಲ್ಕು ಮಾತನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಅಧ್ಯಕ್ಷರೆ, ಅರ್ಥಸಚಿವರ ಕೆಲಸ ಬಹಳ ಜವಾಬ್ದಾರಿಯುತವಾದಂಥದ್ದು. ಈ ಇಲಾಖೆ ಆರ್ಥಿಕ ಪರಿಸ್ಥಿತಿಗೆ ಜೀವನಾಡಿ. ಈ ಇಲಾಖೆಗೆ ಹೆಚ್ಚಿನ ಜವಾಬ್ದಾರಿ ಇದೆ. ಏತಕ್ಕೆಂದರೆ ಯಾವುದಕ್ಕೇ ಆಗಲಿ ಆಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಇಲ್ಲದೆ ಇರಬಹುದು ಟೆಕ್ನಿಕಲ್ ಸ್ಯಾಂಕ್ಷನ್ ಆಗದೇ ಇರಬಹುದು, ಆದರೆ ಫೈನಾನ್ಸಿಯಲ್, ಸ್ಯಾಂಕ್ಷನ್ ಬಹಳ ಮುಖ್ಯವೆಂಬುದನ್ನು ಮರೆಯಬಾರದು. ಹಣಕಾಸಿನ ಮಂಜೂರಾತಿ ವಿಷಯದಲ್ಲಿ ಅನೇಕ ಸಂದರ್ಭದಲ್ಲಿ ಕೆಲವರಿಗೆ ಬೇಜಾರು ಆಗಬಹುದು. ಹಾಗೆ ಆಗದ ರೀತಿಯಲ್ಲಿ ವರ್ತಿಸಬೇಕಾಗುತ್ತದೆ. ಈಗ ಸೇಲ್ಸ್ ಟ್ಯಾಕ್ಸ್ ಮತ್ತು ಇನ್ನಿತರ ಅನೇಕ ಟ್ಯಾಕ್ಸ್‌ಗಳು ಇವೆ, ಅವುಗಳಿಂದ ಹಣ ವಸೂಲು ಆಗುತ್ತಿದೆ. ಪ್ರತ್ಯಕ್ಷವಾಗಿಯೂ ಆಗುತ್ತಿದೆ ಅಪ್ರತ್ಯಕ್ಷವಾಗಿಯೂ ಆಗುತ್ತಿದೆ. ಆ ಹಣ ಸರಿಯಾಗಿ ಖರ್ಚಾಗುತ್ತಿದೆಯೇ ಮತ್ತು ಸರಿಯಾಗಿ ವಸೂಲು ಮಾಡುತ್ತಿದ್ದಾರೆಯೇ ಎನ್ನುವುದು ಬಹಳ ಮುಖ್ಯವಾದದ್ದು. ಎಲ್ಲಿಯವರೆಗೆ ಆಡ

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು)

ಳಿತದಲ್ಲಿ ಪ್ರಾಮಾಣಿಕತೆ ಇರುತ್ತದೆ ಅಲ್ಲಿಯವರೆಗೆ ಇದು ಚೆನ್ನಾಗಿ ನಡೆಯುತ್ತದೆ. ಅದು ಅಧಿಕಾರಿಗಳಿಗೆ ಸಂಬಂಧಪಟ್ಟಿದು . ಸಾರ್ವಜನಿಕರು ಮತ್ತು ಅಧಿಕಾರಿಗಳು ಇವರಿಬ್ಬರೂ ಒಂದು ಗಾಡಿಗೆ ಎರಡು ಚಕ್ರಗಳು ಇದ್ದ ಹಾಗೆ. ಅನೇಕ ಸಂದರ್ಭಗಳಲ್ಲಿ ಸೇಲ್ಸ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ಅವರ ಲೆಕ್ಕದ ಪ್ರಕಾರ 100 ಕೋಟಿ, 150 ಕೋಟಿ ರೂಪಾಯಿ ಬರುತ್ತದೆ. ಆದರೆ ಕಾರ್ಯತಹ ವಸೂಲಾಗಿರುವುದನ್ನು ನೋಡಿದರೆ ಅಷ್ಟು ಬಂದಿರುವುದಿಲ್ಲ. ಇದನ್ನು ಶ್ರೀ ರಾಜಗೋಪಾಲಚಾರಿ ಅವರು 1935ರಲ್ಲಿ ಮನಗಂಡು ಅಧಿಕಾರಿಗಳಲ್ಲಿ ದಕ್ಷತೆ ಇಲ್ಲದೇ ಇದ್ದರೆ ಹಣ ಫಿಲ್‌ಫರೇಜ್ ಆಗುತ್ತದೆ ಎಂದಿದ್ದರು. ಆಡಿಟ್ ಬ್ರಾಂಚ್‌ನವರು "Checked and found correct to the best of my knowledge and information" ಎಂದು ಬರೆಯುತ್ತಾರೆ ಇನು ಅಚ್ಚುಕಟ್ಟಾದ ಜವಾಬ್ದಾರಿ. ಚೆಕ್ಡ್ ಅಂಡ್ ಫೌಂಡ್ ಕರೆಕ್ಟ್ ಎಂದು ಇರುವುದರಿಂದ ಯಾರೂ ಕಂಡು ಹಿಡಿಯುವುದಕ್ಕೆ ಆಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅವರೇ ಅಧಿಕಾರಿಗಳಿಗೆ ಹೇಳಿಕೊಡುತ್ತಾರೆ. ಸಾರ್ವಜನಿಕ ಕ್ಷೇತ್ರದಲ್ಲಿ, ಸರ್ಕಾರಿ ಕ್ಷೇತ್ರದಲ್ಲಿ ಬೇಸಿಕ್ ಹಾನೆಸ್ಟಿ. ನ್ಯಾಷನಲ್ ಕ್ಯಾರೆಕ್ಟರ್ ಇರಬೇಕು ಎನ್ನುವುದನ್ನು ಒಪ್ಪಿಕೊಳ್ಳೋಣ. ಅದು ಏನೇ ಇರಲಿ, ಎರಡು ಏಜೆನ್ಸಿ ಇರಬೇಕು. ಒಂದು ಕೋ ಆರ್ಡಿನೇಷನ್ ಇರಬೇಕು. ಸೇಲ್ಸ್ ಟ್ಯಾಕ್ಸನ್ನು ಕಲೆಕ್ಟ್ ಮಾಡುವುದಕ್ಕೆ ಹೋಗುತ್ತಾರೆ ಆಗ ವಿಜಿಲೆನ್ಸ್ ಸೆಲ್‌ಗೂ ಇದಕ್ಕೂ ಕೋ ಆರ್ಡಿನೇಷನ್ ಇರಬೇಕು. ಈ ಸಂದರ್ಭದಲ್ಲಿ ಇನ್ನೊಂದು ಸಲಹೆಯನ್ನು ಕೊಡಬಯಸುತ್ತೇನೆ. ಆಡಿಟ್ ಬ್ರಾಂಚ್‌ನವರಿಗೆ ಕಲವು ಅಧಿಕಾರಿಗಳು ಇವೆ. ಅವರು ಕಲವು ಇಲಾಖೆಗಳ ಮೇಲೆ ಅಧಿಕಾರಗಳನ್ನು ಇಟ್ಟುಕೊಂಡಿದ್ದಾರೆ. ತಮಗೇ ಗೊತ್ತಿದ್ದ ಹಾಗೆ ಹಿಂದಿನ ಕಾಲದಲ್ಲಿ Controller of Accounts is the highest authority in the State ಎಂದು ಇತ್ತು. ಆಗ ಲೆಕ್ಕಾಚಾರ ಸರಿಯಾಗಿತ್ತು. ಒಂದು ಕಾಲದಲ್ಲಿ 12 ಕೋಟಿ ರೂಪಾಯಿ ರಿಜರ್ವ್ ಫಂಡ್ ಇದ್ದ ಕಾಲವಿತ್ತು. ಈಗ ಡಿಫಿಸಿಟ್ ಬಡ್ಜೆಟ್ ಆಗವುದಕ್ಕೆ ಏನು ಕಾರಣ ? ನಮ್ಮ ಹಣ ಸಂಪತ್ತು ಸರಿಯಾಗಿ ಉಪಯೋಗವಾಗುತ್ತಿದೆಯೇ ಎಂಬುದನ್ನು ಯೋಚನೆ ಮಾಡಿದರೆ ಆಗ ಅರ್ಥವಾಗುತ್ತದೆ. ಅದು ಏನೇ ಇರಲಿ ಪ್ರೀ ಆಡಿಟ್ ಸಿಸ್ಟಂ ಬಂದಿವೆ ಕೆಲವು ಕಡೆ ಪೋಸ್ಟ್ ಆಡಿಟ್ ಇದೆ ಅನೇಕ ಸಲ ಅಬಜಕ್ಷನ್ ಹೋಗುತ್ತದೆ. ಆಡಿಟ್ ಡಿಪಾರ್ಟ್‌ಮೆಂಟಿನಲ್ಲಿ ಅರಿತಂಥ, ನುರಿತಂಥ ಸೀನಿಯರ್ ಆಡಿಟರ್‌ಗಳು ಕೆಲವು ಕಡೆ ಇಲ್ಲ. ಇದಕ್ಕೆ ಏನು ಕಾರಣವೆಂದು ಈ ಸಂದರ್ಭದಲ್ಲಿ ಅನೇಕ ಸಾರಿ ಹೇಳಿದ್ದೇವೆ . ಯೂನಿಫಾರಂ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ. ಕೆಲವು ಕಡೆಯಲ್ಲಿ ಇದೆ, ಕೆಲವು ಕಡೆಯಲ್ಲಿ ಇಲ್ಲ. ನನಗೆ ಸೀನಿಯಾರಿಟಿ ಸಿಗಲಿಲ್ಲವೆಂದು ಅತೃಪ್ತ ನೌಕರರು ಇದ್ದಾರೆ. ಅವರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಅನೇಕ ಸಂದರ್ಭಗಳಲ್ಲಿ ಒತ್ತಿ ಒತ್ತಿ ಕೇಳಿದ್ದೇವೆ.

ಹಾಗೆಯೇ ಸ್ಮಾಲ್ ಸೇವಿಂಗ್ಸ್ ಸ್ಕೀಮ್ ಏನು ಇದೆ, ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಪಾದಯಾತ್ರೆ ಹೋಗಿದ್ದರು, ಅದು ಅಷ್ಟರಮಟ್ಟಿಗೆ ಫಲಪ್ರದವಾಗಿದೆ ? ಅದು ಬರೀ ರೂರಲ್ ಏರಿಯಾಸ್‌ನಲ್ಲಿ ಆಗಿದೆಯೋ ಅಥವಾ ಅರ್ಬನ್ ಏರಿಯಾದಲ್ಲಿ ಆಗಿದೆಯೋ ? ಅರ್ಬನ್ ಏರಿಯಾದಲ್ಲಿ ಆಗಿಲ್ಲ ರೂರಲ್ ಏರಿಯಾದಲ್ಲಿ ಆಗಿಲ್ಲವೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ, ಯೋಜನೆ ಮಾಡಿದಾಗ ನಮಗೆ ಅರ್ಥವಾಗುತ್ತದೆ. ಪಿಗ್ಮಿ ಸಿಸ್ಟಂನ್ನು ಕಮರ್ಷಿಯಲ್ ಬ್ಯಾಂಕ್‌ನಲ್ಲಿ ಮಾಡುತ್ತಿದ್ದಾರೆ ಅದೇ ರೀತಿ ಮಾಡಿದರೆ ಅನುಕೂಲವಾಗುತ್ತದೆ. ಸ್ಮಾಲ್ ಸೇವಿಂಗ್ಸ್‌ಗೆ ಬರೀ ಮತದಾರರನ್ನು, ಅಧಿಕಾರಿಗಳನ್ನು ಹಿಡಿದರೆ ಅಷ್ಟು ಸಹಾಯಕವಾಗುವುದಿಲ್ಲ. ಆದುದರಿಂದ ಈ ಪಿಗ್ಮಿ ಸಿಸ್ಟಂನ್ನು ಇಂಟರ್‌ಡ್ಯೂಜ್ ಮಾಡಬೇಕೆಂದು ಹೇಳುತ್ತೇನೆ. ಈ ಸಿಸ್ಟಂನ್ನು ಸರ್ಕಾರಿ ಅಧಿಕಾರಿಗಳಲ್ಲಿ, ಕಾರ್ಪೋರೇಷನಲ್ಲೂ ಸಹ ಇಂಟರ್‌ಡ್ಯೂಸ್ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಲಾಟರಿ ಬಗ್ಗೆ ಅನೇಕ ಜನ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಇವತ್ತು ನಮಗೆ ಹಣಬೇಕಾಗಿದೆ, ಎಂಟರ್‌ಟೇನ್‌ಮೇಂಟ್ ಟ್ಯಾಕ್ಸ್ ಇದೆ, ಸೇಲ್ಸ್ ಟ್ಯಾಕ್ಸ್ ಇದೆ, ಬೆಟ್ಟಿಂಗ್ ಟ್ಯಾಕ್ಸ್ ಇದೆ ಎಂದು ಹೇಳುವ ಜನ ಇವತ್ತು ಸಿನಿಮಾ ಥಿಯೇಟರ್‌ಗಳ ಹತ್ತಿರ ಬೆಳಗ್ಗೆ 9 ಗಂಟೆಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ ಜನಗಳು ಕ್ಯೂನಲ್ಲಿ ನಿಂತಿರುತ್ತಾರೆ. ಇದಕ್ಕೆ ಕಾರಣ, ಈ ದಿನಗಳು ಜಾಸ್ತಿ ಏರುತ್ತಿರುವುದರಿಂದ ಜೀವನದಲ್ಲಿ ಜಿಗುಪ್ಸೆಯಾಗಿ ಸ್ವಲ್ಪ ಆರಾಮ ಮತ್ತು ಪಡೆಯುವುದಕ್ಕೋಸ್ಕರವಾಗಿ, ಮನಸ್ಸಿಗೆ ನೆಮ್ಮದಿಯನ್ನು ಪಡೆಯುವುದಕ್ಕೋಸ್ಕರವಾಗಿ ಬರುತ್ತಾರೆ. ಬಂದವೇಳೆ ಟ್ಯಾಕ್ಸ್ ಕೊಡುತ್ತಾರೆ. ಹಾಗೆ ಕೆಲವರು ಲಾಟರಿ ಸರ್ಕಾರವೆಂದು ಹೇಳಿದರು, ಜನಗಳ ಹತ್ತಿರ ಹಣವಿದೆ ಲಕ್ಷೂರಿಯಾಗಿ ಖರ್ಚು ಮಾಡುವರು ಮಾಡಲಿ ಅದರಲ್ಲಿ ತಪ್ಪು ಏನು ಇದೆ ?

ಶ್ರೀ ಟಿ. ಎಂ. ಮಂಜುನಾಥ್.—ತಾವು ಹೇಳಿದಿರಿ ಬೇಜಾರು ಆಗಿರುತ್ತದೆ ಆದಕ್ಕೋಸ್ಕರ ಅವರು ಸಿನಿಮಾ ಮಂದಿರಗಳಿಗೆ ಬರುತ್ತಾರೆ ಎಂದು, ಬೇಜಾರು ಆಗುವಂತೆ ಮಾಡುವವರು ನೀವೇ, ಟ್ಯಾಕ್ಸನ್ನು ತೆಗೆದುಕೊಳ್ಳುವವರೂ ನೀವೇ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಸಿನಿಮಾ ಮಂದಿರದಲ್ಲಿ ಹಾಡು ಕೇಳುತ್ತಾರೆ, ಮನಸ್ಸಿಗೆ ನೆಮ್ಮದಿ ಪಟ್ಟುಕೊಂಡು ಹೋಗುತ್ತಾರೆ. ಲಾಟರಿ ಬಗ್ಗೆ ಹೇಳತಕ್ಕಂಥ ಕಾಲದಲ್ಲಿ ಕರ್ನಾಟಕ ಸ್ಟೇಟ್ ಲಾಟರಿ ಎಂದು ಒಂದೇ ಒಂದು ಅಧಿಕೃತವಾದದ್ದು ಇದೆ. ಅದು ಸರ್ಕಾರದವರ ಹತೋಟಿಯಲ್ಲಿ ನಡೆಯುತ್ತಿದೆ. ಎರಡು ವರ್ಷಗಳ ಹಿಂದೆ ಕರ್ನಾಟಕ ಲಾಟರಿ ಬೋರ್ಡ್ ಅಂತ ರಚನೆ ಮಾಡುವುದಕ್ಕೆ ದಯೆ ಯೋಚನೆ ಮಾಡಿದ್ದರು. ಏತಕ್ಕೋ ಇನ್ನೂ ಅದು ಕಾರ್ಯಗತವಾಗಿಲ್ಲ. ಅಂತಹ ಒಂದು ಏಜೆನ್ಸಿ ಇದ್ದು ಅದರ ಅಫಿಶಿಯಲ್ಸ್ ನಾನ್ ಅಫಿಶಿಯಲ್ಸ್ ಇದ್ದರೆ ಹಣ ಬರುವುದು ಹೋಗುವುದು ಸರಿಯಾಗಿ ಆಗುತ್ತಿದೆಯೋ ಇಲ್ಲವೋ ಎನ್ನುವ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತಿತ್ತು. ಈಗ ಸರ್ಕಾರದ ಕಡೆಯಿಂದಿರುವುದರಿಂದ ಮಾಲ್ ಪ್ರಾಕ್ಟೀಸ್ ಆಗುವುದಕ್ಕೆ ಕಾರಣವಾಗಿದೆ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಅಲ್ಲಿ ವಿನಿಯೋಗ ಆಗದೆ ಇರುವ ಎಷ್ಟು ಹಣವಿದೆ; ಅದನ್ನೇನು ಮಾಡುತ್ತೀರಿ, ಹೇಗೆ ವಿಲೇವಾರಿ ಮಾಡುತ್ತೀರಿ ಎಂದು ಕೇಳುತ್ತೇನೆ. ಕರ್ನಾಟಕ ಸ್ಟೇಟ್ ಲಾಟರಿ ಬೋರ್ಡ್ ಆಗಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಇನ್ನು ಟ್ರಜರಿ ಹಾಗೂ ಅಕೌಂಟ್ಸ್ ಆಡ್ಮಿನಿಸ್ಟ್ರೇಷನ್ ವಿಷಯ ಹೇಳಿದ್ದಾರೆ. ನಿಮಗೆ ಇದರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಸರ್ವೀಸಸ್‌ನಲ್ಲಿ ಕೇವಲ 3 ಪರ್ಸೆಂಟ್ ಜನ ಇದ್ದಾರೆ; ನಮ್ಮ ಸಂಸ್ಥಾನದಲ್ಲಿ ಮೂರನೇ ಒಂದು ಭಾಗದಷ್ಟು ಹಣ ಅವರ ಮೇನ್‌ಟೆನೆನ್ಸ್‌ಗಾಗಿ ಖರ್ಚಾಗುತ್ತಿದೆ. ಅವರು 30 ವರ್ಷಗಳ ಕಾಲ ದುಡಿದ ಮೇಲೆ ಅವರಿಗೆ ಪೆನ್‌ಷನ್ ಕೊಡುತ್ತೀರಿ. ಸರ್ಕಾರದಲ್ಲಿ ಒಂದು ಕಾನೂನು ಇದೆ ರಿಟೈರ್ ಆಗುವುದಕ್ಕೆ ಮೊದಲು ಅಂದರೆ 6 ತಿಂಗಳ ಹಿಂದೆಯೇ ಅವರ ಪೆನ್‌ಷನ್ ಪೇಪರ್ ಕ್ಲಿಯರ್ ಆಗಬೇಕು ಎಂದು ಇದೆ. ಅನೇಕ ಸಂದರ್ಭಗಳಲ್ಲಿ ರಿಟೈರಾಗಿ 3 ವರ್ಷ ಆದಮೇಲೂ ಪೆನ್‌ಷನ್ ಸಿಕ್ಕಿಲ್ಲ. ಎಷ್ಟೋ ಜನಕ್ಕೆ ಸತ್ತು ಹೋದ ಮೇಲೂ ಪೆನ್‌ಷನ್ ಸಿಕ್ಕಿಲ್ಲ. ಆದುದರಿಂದ ಪೆನ್‌ಷನ್‌ದಾರರ ಬಗ್ಗೆ ಅನುಕಂಪವನ್ನು ತೋರಿಸಬೇಕು ಏತಕ್ಕೆಂದರೆ ಅವರು ಸರ್ಕಾರಕ್ಕೋಸ್ಕರ 30–35 ವರ್ಷಗಳ ಸೇವೆಯನ್ನು ಸಲ್ಲಿಸಿದರೂ ಕೂಡ ನೀವು ಕೊಡತಕ್ಕ 5—3 ರೂಪಾಯಿಗಳ ಪೆನ್‌ಷನ್ ಸಾಲದು, ಇನ್ನು ಹೆಚ್ಚಿನ ರೀತಿಯಲ್ಲಿ ಅವರಿಗೆ ಪೆನ್‌ಷನ್ ಕೊಡಬೇಕೆಂದು ಹೇಳುತ್ತೇನೆ. ಹಾಗೆಯೇ ಡೆಕ್ಕನ್ ಸ್ಟೇಟ್ಸ್‌ನಿಂದ ವಿದ್ಯಾ ಇಲಾಖೆಗೆ ಬಂದಿರುವ ಮಾಸ್ಟರ್‌ಗಳಿಗೂ ಹೆಚ್ಚಿನ ಸಹಾಯ ಮಾಡಬೇಕು ಮತ್ತು ಪೆನ್‌ಷನ್ ಹೆಚ್ಚಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ರಿಟೈರ್‌ಮೆಂಟ್ ಬೆನಿಫಿಟ್ಸನ್ನು ಅವರಿಗೆ ಕೊಡುವ ಕಾಲಕ್ಕೆ ಅವರು ವಯಸ್ಸಾದವರು ಆಗಿರುತ್ತಾರೆ. ಆದುದರಿಂದ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಾಗಿ ಅವನ್ನು ಕೂಡಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಅಡ್ವರ್ಟೈಜ್‌ಮೆಂಟ್ ಇನ್‌ಫರ್ಮೇಷನ್, ಮತ್ತು ಪಬ್ಲಿಸಿಟಿ ಬಗ್ಗೆ ಹೇಳುವುದಾದರೆ ಇವತ್ತು 'ಮಾರ್ಚ್ ಆಫ್ ಕರ್ನಾಟಕ' ಮತ್ತು 'ಜನಪದ ಸಾಹಿತ್ಯ' ಎನ್ನುವ ಒಂದೆರಡು ಪತ್ರಿಕೆಗಳನ್ನು ಹೊರಡಿಸುತ್ತಿದ್ದಾರೆ. ಅದರಿಂದ ಅಷ್ಟು ಸಹಾಯಕವಾಗುವುದಿಲ್ಲ. ಮುಖ್ಯವಾಗಿ ನನ್ನ ಮಿತ್ರರು ಹೇಳಿದ ಹಾಗೆ ರೇಡಿಯೋ ಮೂಲಕವಾಗಲೀ, ಅಥವಾ ಭಾಷಣದ ಮೂಲಕವಾಗಲೀ, ಪತ್ರಿಕೆಯ ಮೂಲಕವಾಗಲೀ, ನಮ್ಮ ಸರ್ಕಾರದ ಪ್ರಗತಿ ಏನು ಇದೆ ಎತ್ತ ಸಾಗುತ್ತಿದೆ, ಎರಡು ವರ್ಷಗಳಲ್ಲಿ ತಾವು ಏನು ಪ್ರಗತಿಯನ್ನು ಸಾಧಿಸಿದ್ದೀರಿ ಎನ್ನುವ ಅಂಕಿಅಂಶಗಳನ್ನು ಹೆಚ್ಚಿನ ರೀತಿಯಲ್ಲಿ ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ಪ್ರಕಟ ಮಾಡಬೇಕು.

ಸ್ವಾಮಿ, ಈ ಪಬ್ಲಿಸಿಟಿ ಅಂಡ್ ಇನ್‌ಫರ್ಮೇಷನ್‌ಗೆ ಏತಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎಂದರೆ 100ಕ್ಕೆ 80ರಷ್ಟು ಜನ ಎಡಗೈ ಹೆಬ್ಬೆಟ್ಟು ಗುರುತು ಹಾಕುವರೇ ಹೊರತು ಅವರಿಗೆ ಅಷ್ಟು ತಿಳುವಳಿಕೆ ಜ್ಞಾನ ಇರುವುದಿಲ್ಲ. Information and publicity plays a very prominent role ಆದುದರಿಂದ ಈ ಒಂದು ಫಿಲಂ ಡಿವಿಷನ್ ಎನ್ನುವುದು ಇದೆ ಅದಕ್ಕೂ ಇದಕ್ಕೂ ಒಂದಕ್ಕೊಂದಕ್ಕೆ ಲಿಂಕ್ ಇದೆ. ಅದರಲ್ಲೂ ಸಹ ಪತ್ರಿಕಾಕರ್ತರು ಇದ್ದಾರೆ. ಅವರು ಹೇಳತಕ್ಕಂಥ ವಿಷಯ ಜನ ಸಾಮಾನ್ಯರೆಲ್ಲರಿಗೂ ಗೊತ್ತಾಗಬೇಕು. ಕೆಲವು ಸಮಯದಲ್ಲಿ ಈ ಪಬ್ಲಿಸಿಟಿಕೆ ಎಕ್ಸ್‌ಪೆಂಡಿಚರ್ ಹೆಚ್ಚಾಗಿದೆ. ಇದರಿಂದ ಅನೇಕ ಕಂಪನಿಗಳು ಲಕ್ಷಾಂತರ ರೂಪಾಯಿ ದುಡಿಯುತ್ತಿದ್ದಾರೆ. ಹೀಗೆ ಇರತಕ್ಕಂಥ ಕಾಲದಲ್ಲಿ ಈ ಬಗ್ಗೆ ಇನ್‌ಫರ್ಮೇಷನ್ ಅಂಡ್ ಪಬ್ಲಿಸಿಟಿಗೆ ಹೆಚ್ಚು

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಪ್ರಾಮುಖ್ಯತೆ ಕೊಡಬೇಕು. ಈಗ ಎಷ್ಟೋ ಪ್ರೆಸ್ ಇಟ್ಟಿದ್ದೀರಿ. ಅವನ್ನು ನೋಡಿದರೆ ಹಳೇ ಕಾಲದ ರೀತಿಯಲ್ಲೇ ಇದೆ. ಅದನ್ನು ಮಾಡ್ರನೈಸ್ ಮಾಡಬೇಕು. ಮತ್ತು ಇನ್ನು ಹೆಚ್ಚು ಪಬ್ಲಿಸಿಟಿ ಮಾಡಿ ಬೇಕಾದಷ್ಟು ಪುಸ್ತಕಗಳನ್ನು ಅಚ್ಚು ಹಾಕಿಸಿ ಅನೇಕ ವಿಷಯಗಳನ್ನು ಜನತೆಯ ಮುಂದೆ ಇಡುವ ಹಾಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಇವಕ್ಕೆ ಉತ್ತೇಜನ ಕೊಡಬೇಕೆಂದು ಹೇಳ ಬಯಸುತ್ತೇನೆ.

ಇನ್ನು ಈಗ ತಾನೇ ಶ್ರೀಮಾನ್ ಬಂಗಾರಪ್ಪನವರು ಹೇಳಿದರು. ಯಾರೋ ಒಬ್ಬರು ಇನ್ ಸಾಲ್ವೆನ್ಸಿ ಆಗಿರಬಹುದು. ಆ ವ್ಯಕ್ತಿಯನ್ನು ಡಿಫೆಂಡ್ ಮಾಡುವುದಕ್ಕೆ ನಾವು ಇಲ್ಲಿ ಇಲ್ಲ. ಅವರು ಪ್ರೊಡ್ಯೂಸರ್, ಆಕ್ಟರ್, ಡೈರೆಕ್ಟರ್ ಆಗಿದ್ದವರು. ಆದರೆ ಅವರು ಮಾಡಿರತಕ್ಕಂಥ ಸೇವೆ ಯನ್ನು ಮರೆಯಬಾರದು. ಕನ್ನಡದವರೂ ಅದರಲ್ಲೂ ಮೈಸೂರಿನವರು ಹೊರಗೆ ಹೋಗಿ ಕನ್ನಡ ಚಿತ್ರವನ್ನು ತೆಗೆಯುವುದಕ್ಕೆ ಎಷ್ಟು ಕಷ್ಟಪಟ್ಟಿದ್ದಾರೆ ನೋಡಿ. ಅದೇ ಹೊರಗಿನವರು ಬೆಂಗಳೂರಿಗೆ ಬಂದು ತಮಿಳು, ತೆಲಗು, ಹಿಂದಿ ಚಿತ್ರವನ್ನು ಎಷ್ಟು ತೆಗೆದಿದ್ದಾರೆ ನೋಡಿ. ನಮ್ಮ ರಾಜ್ಯದಲ್ಲಿ ಕನ್ನಡ ಫಿಲಂ ಬರುವುದಕ್ಕೆ ಅವರು ಬಹಳ ಉತ್ತೇಜನ ಮಾಡಿದ್ದಾರೆ. ಈವೊತ್ತು ಫಿಲಂ ಡಿಸ್ಟ್ರಿಬ್ಯೂಟಿಂಗ್ ಏಜೆನ್ಸಿ ಆಗಲಿ, ಪ್ರೊಡ್ಯೂಸಿಂಗ್ ಏಜೆನ್ಸಿಯಾಗಲಿ ಅದು ಹೊರಗಿನವರ ಕೈಯಲ್ಲಿ ಇದೆ. ನಮ್ಮ ಕರ್ನಾಟಕದವರ ಕೈಯಲ್ಲಿ ಏನು ಇದೆ ಹೇಳಿ ? ಈ ಕನ್ನಡ ಚಿತ್ರಕ್ಕೆ ಒಂದು ಲಕ್ಷ ರೂಪಾಯಿ ಅಲ್ಲ ಎರಡು ಲಕ್ಷ ರೂಪಾಯಿ ಸಬ್ಸಿಡಿ ಕೊಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ನಮ್ಮ ದೇಶದ ಕಲೆಗೆ ಉತ್ತೇಜನ ಕೊಡಬೇಕು ಮತ್ತು ನಮ್ಮ ಕಲಾವಿದರಿಗೆ ಉತ್ತೇಜನ ಕೊಡಬೇಕು ಮತ್ತು ನಮ್ಮ ಹಿಂದಿನ ಸಂಸ್ಕೃತಿಯನ್ನು ಉಳಿಸಬೇಕು ಎಂದು ಹೇಳುತ್ತೇನೆ. ಈ ಟ್ರೆಡಿಷನಲ್ ಕನ್‌ಸರ್ವೇಟೀವ್ ಏನು ಇದೆ ಆ ಹಿಂದಿನದನ್ನು ಹೇಳಿಕೊಳ್ಳುವಂಥ ಜನ ನಾವು. ಬ್ರಿಟನ್‌ನಲ್ಲೂ ಇದೇ ಪದ್ಧತಿ ಇತ್ತು. ಆದುದರಿಂದ ಈ ಫಿಲಂ ಡಿವಿಷನ್ ಏನು ಇದೆ ಇದಕ್ಕೆ ಹೆಚ್ಚಿನ ಒಂದು ಪ್ರಾಧಾನ್ಯತೆ ಕೊಡಬೇಕು, ಮತ್ತು ಈ ಬಗ್ಗೆ ರಚನಾತ್ಮಕವಾಗಿ ಟೀಕೆ ಟಿಪ್ಪಣಿಗಳನ್ನು ಕೊಡ ಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ಇನ್‌ಫರ್ಮೇಷನ್ ಬಗ್ಗೆ ಹೇಳುವುದಾದರೆ ಬೆಂಗಳೂರಿನಲ್ಲಿ ಹಳೇಕಾಲದ ಮಿರ್ಜಾ ಸಾಹೇಬರ ಕಾಲದ ಬಂಗಲೆಯಲ್ಲಿ ಒಂದು ರೇಡಿಯೋ ಸ್ಟೇಷನ್ ಇದೆ. ಅದನ್ನು ಮಾಡ್ರನೈಸ್ ಮಾಡಿ ಆಲ್ ಇಂಡಿಯಾ ರೇಡಿಯೋ ಸ್ಟೇಷನ್ ಆಗಿ ಮಾಡುವುದಕ್ಕೆ ಕೇಂದ್ರ ಸರ್ಕಾರದವರೊಡನೆ ಪತ್ರವ್ಯವಹಾರ ಮಾಡಬೇಕೆಂದು ಕೇಳಿಕೊಂಡಿದ್ದೇನೆ. ಏತಕ್ಕೆಂದರೆ ರೈತರ ಸಲುವಾಗಿ ಪ್ರೋಗ್ರಾಂ ಹಾಕತಕ್ಕಂಥ ಕಾಲದಲ್ಲಿ, ಮತ್ತು ಮಕ್ಕಳಿಗೆ ಒಂದು ಪ್ರೋಗ್ರಾಂ ಹಾಕತಕ್ಕಂಥ ಕಾಲದಲ್ಲಿ ಈ ಒಂದು ರೇಡಿಯೋ ಸ್ಟೇಷನ್ ಅನ್ನು ಮಾಡ್ರನೈಸ್ ಮಾಡಬೇಕು ಎಂದು ಹೇಳುತ್ತೇನೆ. ನಾನು ಚಂಡೀಘರಿಗೆ ಹೋಗಿದ್ದಾಗ ಇಂದಿರಾ ಹಾಲಿಡೇ ಹೋಂ, ನೆಹರೂ ಲೋಕ, ಬಾಲ ಲೋಕ ಎಂದು ಮಕ್ಕಳಿಗೆ ಮಾಡಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.— ಅವಕ್ಕೆ ಹಾಕಿರುವ ದುಡ್ಡು ಯಾರದ್ದು ?

ಶ್ರೀ ಕೆ. ಆರ್. ಶ್ರೀನಿವಾಸಲು ನಾಯುಡು.—ಯಾರದ್ದೋ ಆಗಲಿ ಅದಕ್ಕೂ ಧೈರ್ಯ ಬೇಕು. ಮಾನ್ಯ ಸದಸ್ಯರಿಗೆ ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಮಹಾತ್ಮಾ ಗಾಂಧಿಯವರು ನಮಗೆ ಏನು ಒಂದು ತತ್ವವನ್ನು ತೋರಿಸಿಹೋಗಿದ್ದಾರೆ ಅದರಂತೆ ನಡೆಯ ಬೇಕು. ನಾವು ಯಾವ ಒಂದು ಕೆಲಸ ಮಾಡಬೇಕಾದರೂ ಶಾಂತಿಯಿಂದ ಮಾಡಬೇಕೇ ಹೊರತು ಕ್ರಾಂತಿಯಿಂದ ಏನೂ ಮಾಡುವುದ ಕ್ಕಾಗುವುದಿಲ್ಲ. ಈ ಒಂದು ತತ್ವವನ್ನು ಅವರು ತೋರಿಸಿ ಹೋಗಿದ್ದಾರೆ. ಅದನ್ನು ನಾವು ತಿಳಿದು ಕೊಳ್ಳಬೇಕು.

ಇನ್ನು ಖೆಡ್ಡಾ ವಿಷಯ. ಹಿಂದಿನ ಕಾಲದಲ್ಲಿ ಇದನ್ನು ಸ್ವಲ್ಪ ನಡೆಸಿ ಹಾಗೆಯೇ ನಿಲ್ಲಿಸಿ ಬಿಟ್ಟರು. ಆದರೆ ಪಬ್ಲಿಸಿಟಿ ಅಂಡ್ ಇನ್‌ಫರ್ಮೇಷನ್ ಇದೆಯಲ್ಲಾ ಅದು ಈ ಬಗ್ಗೆ ಒಂದು ಹೆಚ್ಚಿನ ರೀತಿಯಲ್ಲಿ ಜವಾಬ್ದಾರಿ ವಹಿಸಿ ಜನಸಾಮಾನ್ಯರಿಗೆ ಎಡಗೈ ಹೆಬ್ಬೆಟ್ಟಿನ ಗುರುತು ಹಾಕು ವಂಥ ಜನರಿಗೆ ಒಂದು ತಿಳುವಳಿಕೆಯನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸಲಹೆ ಕೊಡುತ್ತೇನೆ.

ಇನ್ನು ಲೋನ್ಸ್ ಟು ಗವರ್ನ್‌ಮೆಂಟ್ ಸರ್ವೆಂಟ್ಸ್ ಬಗ್ಗೆ ಹೇಳುವುದಾದರೆ ಪಾಪ ಕೆಲವು ಸರ್ಕಾರಿ ಅಧಿಕಾರಿಗಳು ಮನೆ ಕಟ್ಟುವುದಕ್ಕೆ ಇದನ್ನೇ ನೆಚ್ಚಿಕೊಂಡು ಸಾಲ ಸೋಲ ಮಾಡಿ ಒಡವೆಗಳನ್ನು ಗಿರವಿ ಇಟ್ಟಿದ್ದಾರೆ, ಮೊದಲು ಅವರಿಗೆ 45 ತಿಂಗಳ ಸಂಬಳ ಕೊಡುತ್ತಾ ಇದ್ದರು,

ಆಮೇಲೆ ಅವರಿಗೆ 60 ತಿಂಗಳ ಸಂಬಳ ಕೊಡುತ್ತಾ ಇದ್ದರು. ಈಗ ಎಕಾನಮಿ ಮೆಷರ್‌ನಿಂದ ಅದನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಪಾಪ ಆ ಬಡವರಿಗೆ ತಮ್ಮ ಜೀವನದಲ್ಲಿ ಒಂದು ಮನೆ ಕಟ್ಟುವುದೇ ಆಗಲಿ ಅಥವಾ ಮಕ್ಕಳಿಗೆ ಒಂದು ವಿದ್ಯಾಭ್ಯಾಸ ಮಾಡಿಸುವುದೇ ಆಗಲಿ, ಇದೆ ಅವರ ಒಂದು ಜೀವನದ ಗುರಿ. ವರ್ತಕನಾದರೆ ಅವನು ಯಾವ ಏಜನ್ಸಿಯಿಂದಾದರೂ ಆಗಲಿ ಅಥವಾ ಯಾವು ದಾದರೂ ವ್ಯಾಪಾರ ಮಾಡಿ ಲಕ್ಷಾಂತರ ರೂಪಾಯಿ ಗಳಿಸಿರುತ್ತಾನೆ. ದೊಡ್ಡ ಕಾರು ಇಟ್ಟು ಕೊಂಡಿರುತ್ತಾನೆ. ಸಾಧಾರಣವಾಗಿ ಒಬ್ಬ ಅಧಿಕಾರಿ ತನ್ನ ಜೀವಮಾನದಲ್ಲಿ ಒಂದು ಮನೆ ತಪ್ಪಿ ದರೆ ಮಕ್ಕಳ ವಿದ್ಯಾಭ್ಯಾಸ ಅಷ್ಟೇ ಮಾಡುವುದು. ಇದನ್ನು ಎಕ್ಸ್‌ಪ್ಲಾಯಿಟ್ ಮಾಡುವುದು ಸರಿಯಲ್ಲ. ಕೆಲವರು ಆ ಸಾಲಗಾರರಿಗೆ ಬಡ್ಡಿ ಕೊಡದೆ ಕಷ್ಟದಲ್ಲಿದ್ದಾರೆ. ಆದುದರಿಂದ ತಾವು ಈ ಎಕಾನಮಿ ಮೆಷರ್ ಈಗ ಏನು ತಂದಿದ್ದೀರೋ ಅದನ್ನು ತೆಗೆದು ಒಂದು ಹೆಚ್ಚಿನ ರೀತಿಯಲ್ಲಿ ಅವರಿಗೆ ಸಹಾಯ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಪೊಲಿಟಿಕಲ್ ಪೆನ್‌ಷನರ್ಸ್ ಬಗ್ಗೆ ಒಂದು ಮಾತು ಹೇಳುತ್ತೇನೆ: ಪಾಪ ಕೈ ಇಲ್ಲದೇ ಇದ್ದವರು, ಕಾಲು ಇಲ್ಲದೇ ಇದ್ದವರು, ಕುರುಡರು, ಕುಂಟರು, ಈ ಡೆಸ್ಟಿಟ್ಯೂಟ್ಸ್ ಏನು ಇದ್ದಾರೆ ಇವರಿಗೆಲ್ಲಾ 30 ರೂಪಾಯಿ ಪೆನ್‌ಷನ್ ಕೊಡುತ್ತಿದ್ದಾರೆ. ಇವರಿಗೆ ಕೊನೇಪಕ್ಷ 50 ರೂಪಾಯಿಗಳನ್ನಾದರೂ ಕೊಡಬೇಕು ಎಂದು ಹೇಳುತ್ತೇನೆ. ಬೇರೆ ಯಾವುದಾದರೂ ಒಂದರಲ್ಲಿ ಲೆಕ್ಕ ಕಡಿಮೆ ಮಾಡಿ ಇವರಿಗೆ ಸ್ವಲ್ಪ ಸಹಾಯ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಮೊನ್ನೆ ತಾನೇ ಒಂದು ರಾಕೆಟನ್ನು ಕಂಡ ಹಿಡಿದರು. ಅದಕೆ ಸುಮಾರು 25 ಲಕ್ಷ ರೂಪಾಯಿ ಆಗುತ್ತದೆ. ಆದುದರಿಂದ ಇಂಥಾದ್ದರಲ್ಲಿ ಯಾವುದಾದರಲ್ಲಿ ಖರ್ಚನ್ನು ಕಡಮೆ ಮಾಡಿ ಈ ಡೆಸ್ಟಿಟ್ಯೂಟ್ಸ್‌ಗೆ ಕೊಡತಕ್ಕ ಪೆನ್‌ಷನ್ 30 ರೂಪಾಯಿಂದ 50 ರೂಪಾಯಿಗೆ ಏರಿಸಬೇಕೆಂದು ಹೇಳುತ್ತೇನೆ. ಅವ ರಿಗೆ ಈ ರೀತಿಯಾಗಿ ಒಂದು ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

[MADAM SPEAKER in the Chair.]

ಇಷ್ಟು ಮಾತುಗಳನ್ನು ಹೇಳಿ ಮಾನ್ಯ ಅಧ್ಯಕ್ಷಣಿಯವರು ನನಗೆ ಮಾತನಾಡಲು ಇಷ್ಟು ಕಾಲಾವ ಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. 'ಜೈ ಕರ್ನಾಟಕ'

MADAM SPEAKER.—How much time is required for the Hon. Minister for Finance to reply ?

Sri M. Y. GHORPADE.—Half an hour.

MADAM SPEAKER.—Sri Konandur Lingappa may speak on these Demands.

† ಶ್ರೀ ಕೋಣಂದೂರ ಲಿಂಗಪ್ಪ (ತೀರ್ಥಹಳ್ಳಿ) —ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಾನು ಕೆಲವೇ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ಆಡಲು ಬಯಸುತ್ತೇನೆ. ಟ್ಯಾಕ್ಸ್, ಇನ್‌ಕಂ ಅಂಡ್ ಎಕ್ಸ್‌ಪೆಂಡಿಚರ್ ಬಗ್ಗೆ ನನ್ನ ಸ್ನೇಹಿತರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಸವಿಸ್ತಾರ ವಾಗಿ ಹೇಳಿದ್ದಾರೆ. ಅಲ್ಲದೆ ನಾವು ಇದರ ಬಗ್ಗೆ ಎಷ್ಟೇ ರಚನಾತ್ಮಕವಾದ ಸಲಹೆಗಳನ್ನು ಕೊಡುತ್ತಾ ಇದ್ದರೂ ಕೂಡ ಅದರ ಕಡೆ ಕೇಳದೇ ಇರತಕ್ಕಂಥಾದ್ದು ಕೋಣನ ಮುಂದೆ ಕಿಂಜರಿ ಬಾರಿಸಿದ ಹಾಗಾಗಿದೆ. ನಾವು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟರೂ ಕೂಡ ಸರ್ಕಾರ ಅದನ್ನು ಅಂಗೀಕಾರ ಮಾಡಿ ಅನುಷ್ಠಾನಕ್ಕೆ ತರತಕ್ಕಂಥಾ ಜವಾಬ್ದಾರಿಯನ್ನು ಪ್ರದರ್ಶನ ಮಾಡದೇ ಇದ್ದರೆ ನಾವು ಯಾರನ್ನು ಕೇಳಬೇಕು ?

ಅಧ್ಯಕ್ಷರು.—ಇನ್ನು ಗಟ್ಟಿ ಚಂದ್ರಶೇಖರ್‌ರವರು ಒಬ್ಬರು ಮಾತನಾಡಲು ಇರುವುದರಿಂದ ಮಾನ್ಯ ಲಿಂಗಪ್ಪನವರು ಭಾಷಣವನ್ನು 5 ನಿಮಿಷದಲ್ಲೇ ಮುಗಿಸಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೇ, ಅವರ ಮಾತು ಕೇಳಿ ಬಹಳ ದಿವಸವಾಗಿದೆ. ನಾನು ಆದಷ್ಟು ಬೇಗ ಮುಗಿಸುತ್ತೇನೆ.

ನಾನು ಈ ಬಗ್ಗೆ ಸಲಹೆ ಕೊಡುವುದು ಏನೆಂದರೆ ನೀವು ಪರವಾನದ ಬಗ್ಗೆ ತೆರಿಗೆ ಹಾಕುವ ಬದಲು ವೆಚ್ಚದ ಮೇಲೆ ಒಂದು ಮಿತಿಯನ್ನು ಹಾಕಿದರೆ ಅಂದರೆ ಒಬ್ಬ ಮನುಷ್ಯನಿಗೆ 100 ರೂಪಾಯಿಗಿಂತಕಡಿಮೆ ಇಲ್ಲದೆ ಅಥವಾ 1000 ರೂಪಾಯಿ ಗಿಂತ ಹೆಚ್ಚಿಲ್ಲದೆ ವೇತನ ಕೊಡುವದಿಲ್ಲ ಎನ್ನುವ ಒಂದು ಮಿತಿಯನ್ನು ಹಾಕಿದರೆ ಅದರಿಂದ ಸರ್ಕಾರಕ್ಕೆ 30 ರಿಂದ 36 ಕೋಟಿ ರೂಪಾಯಿಯಷ್ಟು ಉಳಿತಾಯವಾಗುತ್ತದೆ ಎಂದು ಸಾಕಷ್ಟು ಸಲ ಈ ಸರ್ಕಾರಕ್ಕೆ ಲೆಕ್ಕ ಹಾಕಿ ಹೇಳಿದ್ದೇನೆ.

ಆದರೆ ಸರ್ಕಾರಕ್ಕೆ ಈ ಬಗ್ಗೆ ಆಸಕ್ತಿಯೇ ಇಲ್ಲ. ಅದರ ಬದಲು ಬಡಬಗ್ಗರ ಮೇಲೆ ಹೆಚ್ಚಿನ ತೆರಿಗೆಗಳನ್ನು ಹಾಕುವುದರ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿದ್ದಾರೆ. ನಮ್ಮ ಸ್ನೇಹಿತರಾದ ತಿಮ್ಮಪ್ಪನವರು ಹೇಳಿದ ಹಾಗೆ, ಕೆಲವೇ ಜನ ಉಪಯೋಗಿಸತಕ್ಕ ಭೋಗವಸ್ತುಗಳು ಯಾವುವು ಇದ್ದಾವೆ ಅವುಗಳ ಮೇಲೆ ಪರವಾನಿಗೆ ಟ್ಯಾಕ್ಸನ್ನು ಹಾಕಿದ್ದರೆ ಯಾರೂ ಬೇಡ ಎಂದು ಹೇಳುವುದಿಲ್ಲ. ಆದರೆ ಈಗ ಏನಾಗಿದೆ ಎಂದರೆ, ಶ್ರೀ ಜಾರ್ಜ್ ಫರ್ನಾಂಡೆಯವರು ಆಗರ್ಭ ಶ್ರೀಮಂತರು, ಕೋಟ್ಯಾಧೀಶ್ವರರು, ಇಂಥವರ ಮೇಲೆ ಕೈ ಹಾಕುವುದಕ್ಕೆ ಹೋಗುವುದಿಲ್ಲ. ಆದರ ಬದಲು ಸ್ಕೈಕರ್, ಟ್ರೈಸಿಕಲ್ ಇಂಥವುಗಳ ಮೇಲೆ ತೆರಿಗೆಯನ್ನು ಹಾಕಿ ಅದರಲ್ಲಿಯೂ ವಾಪಸ್ ಬಂದರು. ಆದ್ದರಿಂದ ನಾನು ಈ ಭೋಗವಸ್ತುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಬೇಕು ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವನ್ನು ಹೊಂದಿಲ್ಲ. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ, ಮ್ಯಾಂಗನೀಸ್ ನಮ್ಮಲ್ಲಿ ಬೇಕಾದಷ್ಟು ಸಿಕ್ಕುತ್ತಿದೆ. ಇದನ್ನು ಕೋಣಂದೂರಿನಿಂದ ಹಿಡಿದು ಸೊಂಡೂರಿನವರೆಗೂ ತೆಗೆಯಲಿಕ್ಕೆ ಅನೇಕ ಕಂಪನಿಗಳವರು ಇದ್ದಾರೆ. ಇದರಿಂದ ಅಪಾರ ಲಾಭ ಬರುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಈ ಬಗ್ಗೆ ಅಪಾರವಾದ ತೆರಿಗೆಗಳನ್ನು ಸರ್ಕಾರದವರು ಹಾಕಬೇಕು ಇಲ್ಲವೇ ಇದನ್ನು ರಾಷ್ಟ್ರೀಕರಣ ಮಾಡಿ ಎನ್ನುವ ಸಲಹೆಗಳನ್ನು ಕೊಟ್ಟಿದಾಗ್ಯೂ ಕೂಡ ಸರ್ಕಾರದವರು ಇದರ ಬಗ್ಗೆ ನಿರ್ಲಕ್ಷ್ಯದಿಂದ ಇದ್ದಾರೆಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಇನ್ನು ಇನ್‌ಫರ್ಮೇಷನ್ ಮತ್ತು ಫಿಲಂ ಯೂನಿಟ್ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಅಪೇಕ್ಷೆಪಡುತ್ತೇನೆ. ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ಸುದ್ದಿ ಪ್ರಸಾರ ಶಾಖೆ ಎನ್ನುವುದು ನಮ್ಮ ರಾಜ್ಯದಲ್ಲಿ ಒಂದು ಇದೆಯೋ? ಇದರ ಬಗ್ಗೆ ಸಾಕಷ್ಟು ಜನ ಮಾತನಾಡಿದ್ದಾರೆ. ಈ ಪ್ರಸಾರ ಶಾಖೆ ಸರ್ಕಾರದಲ್ಲಿ ಜೀವಂತವಾಗಿದೆಯೋ ಇಲ್ಲವೋ ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಕಾರಣ ಏನೆಂದರೆ, ಪ್ರಸಾರ ಶಾಖೆಯಿಂದ ನಿಜವಾಗಿಯೂ ಸಾಮಾನ್ಯ ಜನರಿಗೆ, ಹಳ್ಳಿಯ ಜನರಿಗೆ ಏನನ್ನು ಇವರು ಪ್ರಸಾರ ಮಾಡಿದ್ದಾರೆ? ಏನು ತಿಳುವಳಿಕೆಯನ್ನು ಇವರು ಕೊಟ್ಟಿದ್ದಾರೆ? ಈ ಇಲಾಖೆಯ ವತಿಯಿಂದ, ಮಾರ್ಚ್ ಆಫ್ ಮೈಸೂರು ಎನ್ನುವ ಪತ್ರಿಕೆಯನ್ನು ಹೊರಡಿಸುತ್ತಿದ್ದಾರೆ. ಇದನ್ನು ಯಾರು ಓದುತ್ತಾರೆ ಯಾರಿಗೆ ಕಳುಹಿಸುತ್ತಾರೆ, ಎನ್ನುವುದು ನಮಗೆ ಗೊತ್ತಾಗುವುದಿಲ್ಲ. ಮಾರ್ಚ್ ಆಫ್ ಕರ್ನಾಟಕ ಎಂದು ಕೆಟ್ಟ ಇಂಗ್ಲೀಷಿನಲ್ಲಿ ಬರೆದು ಎಲ್ಲಿಗೆ ಕಳುಹಿಸುತ್ತಾರೋ ಎನ್ನುವುದು ನಮಗೆ ಗೊತ್ತಾಗುವುದಿಲ್ಲ. ಇವತ್ತಿನ ದಿವಸ ಇಂಗ್ಲೀಷಿನಲ್ಲಿ ಪ್ರಕಟ ಮಾಡತಕ್ಕ ಈ ಪತ್ರಿಕೆಯನ್ನು ಎಷ್ಟು ಜನ ಓದಿ ವಿಷಯಗಳನ್ನು ತಿಳಿದುಕೊಂಡಿದ್ದಾರೆ, ಎಷ್ಟು ಜನಕ್ಕೆ ಇದರಿಂದ ಜ್ಞಾನ ಉಂಟಾಗಿದೆ ಎನ್ನುವುದು ಗೊತ್ತಾಗಿಲ್ಲ. ಇದು ಕೇವಲ ಸರ್ಕಾರದ ಡಣ್ಣಾಡಂಗೂರ ಹೊಡೆಯತಕ್ಕ ಪತ್ರಿಕೆಯಾಗಿದೆ ಇದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವ ಬದಲು, ಮಂತ್ರಿಗಳ ಮಾತನ್ನು ಪ್ರಕಟ ಮಾಡತಕ್ಕಂಥ ಸರ್ಕಾರದ ಮುಖ ಪತ್ರ ಎಂದು ಡಿಕ್ಲೇರ್ ಮಾಡಿ ಒಂದು ಹೊಸ ದಿನಪತ್ರಿಕೆಯನ್ನೇ ಮಾಡಲಿ ಯಾರು ಬೇಡ ಎಂದು ಹೇಳುತ್ತಾರೆ. ಏಕೆಂದರೆ, ಕೆಲವಾರು ಪತ್ರಿಕೆಗಳಲ್ಲಿ ಬರುವ ಇವರ ಫೋಟೋಗಳನ್ನು ನೋಡಿ ನೋಡಿ ನಮಗೆ ವಾಕರಿಕೆ ಬರಲಿಕ್ಕೆ ಶುರುವಾಗಿದೆ. Too much is too bad. ಪ್ರತಿ ದಿವಸ ಬೆಳಿಗ್ಗೆ ಪತ್ರಿಕೆಯನ್ನು ನೋಡಿದರೆ, ಮುಖ ಪುಟದಲ್ಲಿ ಬರುವುದು ಇವರ ಫೋಟೋಗಳೇ. ದೊಡ್ಡದಾಗಿ ಪ್ರಜಾಪ್ರಭುತ್ವ ಎಂದು ಹೇಳುತ್ತಾರೆ; ನಮ್ಮ ಮಾನ್ಯ ದೇವೇಗೌಡರ ಫೋಟೋ ಒಂದು ಸಾರಿಯೂ ಮುಖಪುಟದಲ್ಲಿ ಬರಲಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ವಾಕರಿಕೆಯಾಗಿಬಿಟ್ಟರೆ ?

ಶ್ರೀ ಕೋಣಂದೂರು ಲಿಂಗಪ್ಪ.—ಅಪರೂಪಕ್ಕೆ ಬಂದರೆ ವಾಕರಿಕೆಯಾಗುವುದಿಲ್ಲ. ಸ್ವಂತವಾಗಿ ಢಾಣ ಡಂಗೂರು ಹೊಡೆಯತಕ್ಕದ್ದು ಏನು ಇದೆ. ಇದನ್ನು ಇನ್ನು ಮೇಲೆ ಬಿಡಬೇಕು.

ಇನ್ನು ಮೇಲೆ, ಇವರು ಪ್ರೆಸ್ ಅಂಡ್ ನ್ಯೂಸ್ ಸೆಕ್ಷನ್‌ನಲ್ಲಿ ಏನು ಮಾಡಿದ್ದಾರೆಂದರೆ, ಇವರು 3290 ಪ್ರೆಸ್ ನೋಟ್ಸ್, 10 ಫೀಚರ್ ಆರ್ಟಿಕಲ್ಸ್, ಮತ್ತು 600 ಮೆಸೇಜಸ್‌ನ್ನು ಮಾಡಿದ್ದಾರೆ. ಬರೀ ಸ್ಪೀಚಸ್ ಮತ್ತು ಆರ್ಟಿಕಲ್ಸ್. ಇವರು ಯಾರಿಗೆ ಸ್ಪೀಚಸ್ ಅನ್ನು ಬರೆದು ಕೊಟ್ಟವರು? ಇದು ಚೆನ್ನಾಗಿದೆ. ಏಕೆಂದರೆ ಇವೆಲ್ಲವನ್ನು ಬರೆದು ಕೊಡುವುದಕ್ಕೆ ಒಂದು ಡಿಪಾರ್ಟಮೆಂಟ್ ಇರುವುದಾದರೆ, ನಾವು ಇದನ್ನು ಸ್ವಲ್ಪ ವಿಚಾರಮಾಡಬೇಕಾಗುತ್ತದೆ. ಇಲ್ಲಿ ಇವರು ತಮ್ಮ ಸ್ವಂತದ್ದಕ್ಕೆ ಇದನ್ನೆಲ್ಲಾ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ಇದನ್ನೆಲ್ಲಾ ತಾವು ವಿಚಾರ ಮಾಡಬೇಕು. ಈ ಡಿಪಾರ್ಟ್‌ಮೆಂಟಿನಲ್ಲಿ ಕೆಲವರು ದಕ್ಷರು ಇದ್ದಾರೆ. ಅವರನ್ನು ಯಾರು ಮೇಲಕ್ಕೆ ತರುತ್ತಿದ್ದಾರೆ? ಅವರೆಂದರೇನು ಎನ್ನುವವರು ದಕ್ಷರು ಇದ್ದಾರೆ, ಅವರನ್ನು ಮೇಲೆ ಬರುವುದಕ್ಕೆ ಬಿಡುವುದಿಲ್ಲ. ಮತ್ತು ಮೇಲಕ್ಕೆ ತರುವುದಕ್ಕೆ ಯಾರೂ ಯಾವ ಆಸಕ್ತಿಯನ್ನೂ ವಹಿಸಿಲ್ಲ. ಅವರನ್ನು ತಡೆದು ಯಾರೋ ಬಂದು ಕೂತಿದ್ದಾರೆ. ಈ ಡಿಪಾರ್ಟ್‌ಮೆಂಟಿನ ದಕ್ಷತೆಗೆ ಇದು ಏನು ಕೆಲಸ ಮಾಡುತ್ತಿದೆ ಎನ್ನುವುದೇ ಸಾಕ್ಷಿಯಾಗಿದೆ. ಇವರು ಚಿತ್ರಗಳನ್ನು ತೆಗೆಯುತ್ತಾರೆ. ಇನ್‌ಫರ್ಮೇಷನ್ ಡಿವಿಷನ್ ನಮ್ಮ ಜಿಲ್ಲೆಯೊಳಗೂ ಒಂದು ಇದೆ. ಹಾಗೆಯೇ ನಾನು ಐರ್‍ಲೆಂಡ್ ಮತ್ತು ಕಾರವಾರಕ್ಕೂ ಹೋಗಿದ್ದೆ. ಅಲ್ಲಿಯೂ ಈ ಒಂದು ಇನ್‌ಫರ್ಮೇಷನ್ ಡಿವಿಷನ್ ಇದೆ. ಅಲ್ಲಿ ಒಬ್ಬರು ಆಫೀಸರ್ ಇದ್ದಾರೆ. ಅವರಿಗೆ ಏನು ಮಾಡಬೇಕು ಎನ್ನುವುದೇ ಗೊತ್ತಿಲ್ಲ. ಅವರಿಗೆ ಏನು ಹೇಳುವುದು, ಅಲ್ಲಿರತಕ್ಕ ಕೆಲವು ಜನ ಪತ್ರಿಕೋದ್ಯಮಿಗಳನ್ನು ಜೊತೆಗೆ ಕರೆದುಕೊಂಡು ತಿರುಗಾಡುವುದು ಆಗಿದೆ. ರೈತರ ಸಮಸ್ಯೆ ಏನು ಇವೆ, ಗೇಣಿದಾರರ ಸಮಸ್ಯೆ ಏನು ಇದೆ,ಕಾರ್ಮಿಕರ ಸಮಸ್ಯೆ ಏನು ಇದೆ ಇದರ ಬಗ್ಗೆ ಜನರಿಗೆ ಯಾವ ತರಹದ ತಿಳುವಳಿಕೆಯನ್ನು ಕೊಡಬೇಕು ಎಂದು ವಿಚಾರ ಮಾಡದೆ, ಮನಸ್ಸಿಗೆ ಬಂದ ಹಾಗೆ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಗೋವಾದಲ್ಲಿ, ನಮ್ಮ ಕರ್ನಾಟಕದ ಸಂಸ್ಕೃತಿ ಪ್ರಸಾರ ಮಾಡತಕ್ಕ ಒಂದು ಬ್ರಾಂಚ್ ಇದೆ. ಅಲ್ಲಿ ಏನು ಕೆಲಸ ಆಗಿದೆ ಎಂದರೆ ಇಂಗ್ಲೀಷಿನಲ್ಲಿ, ಮರಾಠಿಯಲ್ಲಿ, ಎಲ್ಲಾ ಪ್ರಕಟಣೆಗಳು ಇದ್ದುದನ್ನು ನಾನು ಕಣ್ಣಾರೆ ನೋಡಿಕೊಂಡು ಬಂದಿದ್ದೇನೆ. ಅವರು ನಮ್ಮ ಕರ್ನಾಟಕ ಸಂಸ್ಕೃತಿಯ ಜ್ಞಾನವನ್ನು, ನಮ್ಮ ಕರ್ನಾಟಕ ವಿಷಯವನ್ನು ಅಲ್ಲಿಯ ಜನರಿಗೆ ಪ್ರಚಾರ ಮಾಡತಕ್ಕ ಕೆಲಸಕಾರ್ಯಗಳನ್ನು ಮಾಡಿಲ್ಲ.

ಕಡೆಯದಾಗಿ ಫಿಲಂ ಯೂನಿಟ್ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಇದರ ಬಗೆ ಮಾನ್ಯ ಗುಂಡೂರಾಯರು ಮಾತನಾಡುತ್ತಾ ಒಂದು ವಿಷಯವನ್ನು ಹೇಳಿದರು. ನಮ್ಮ ರಾಜ್ಯದ ಕಾಡುಗಳಲ್ಲಿ ಒಳ್ಳೆಯ ಪ್ರಾಣಿಗಳು ಇವೆ, ಹುಲಿ, ಸಿಂಹ, ಇತ್ಯಾದಿಗಳು ಇವೆ, ಇವುಗಳೆಲ್ಲಾ ಚಿತ್ರವನ್ನು ತೆಗೆಯಬೇಕು, ಇದಕ್ಕೆ ಬೇಕಾದ ಸೌಕರ್ಯ ನಮ್ಮಲ್ಲಿದೆ ಎನ್ನುವ ಮಾತನ್ನು ಹೇಳಿದರು. ಪ್ರಾಣಿಗಳು ವಿಚಿತ್ರ ಪ್ರಾಣಿಗಳು ಕಾಂಗ್ರೆಸ್ ಎನ್ನುವ ಕಾಡಲ್ಲಿ ಸೇರಿಕೊಂಡಿವೆ. ಇವನ್ನೆಲ್ಲಾ ಒಂದು ಚಿತ್ರವನ್ನು ತೆಗೆದು ತೋರಿಸಬೇಕು. ಇಂಥ ಚಿತ್ರ ನಮ್ಮ ರಾಷ್ಟ್ರದಲ್ಲಿ ಹಿಂದೂ ಇಲ್ಲ, ಮುಂದೆ ಬರುವುದೂ ಇಲ್ಲ. ಇನ್ನು ಸಿನಿಮಾಗಳನ್ನು ತೆಗೆಯಲಿಕ್ಕ, ಫಿಲಂ ಯೂನಿಟ್ ಅನ್ನು ಮಾಡಿದ್ದಾರೆ. ಇದರ ಬಗ್ಗೆ ಒಂದು ಕಾರ್ಪೋರೇಷನ್ ಮಾಡಿ, ಇದನ್ನು ಸಂಪೂರ್ಣವಾಗಿ ಸರ್ಕಾರ ತೆಗೆದುಕೊಳ್ಳುವುದರ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇದನ್ನು ಸರ್ಕಾರದವರೇ ತೆಗೆದುಕೊಂಡು ಒಳ್ಳೆಯ ಕೆಲಸಗಳನ್ನು ಮಾಡಬೇಕು ಮತ್ತು ಈಗ ಯಾರನ್ನು ಡೈರೆಕ್ಟರ್ ಆಗಿ ಮಾಡಿದ್ದೀರೋ, ಅವರು ಇನ್‌ಸಾಲ್ವೆಂಟ್ ಎಂದು ಕೆಲವರು ಹೇಳಿದರು. ಅವರು ನಮ್ಮ ಮುಖ್ಯ ಮಂತ್ರಿಗಳ ಸಹೋದರರಾಗಿರಬಹುದು, ಅಂಥವರನ್ನೆಲ್ಲಾ ಇಲ್ಲಿಗೆ ನೇಮಕ ಮಾಡುತ್ತಾ ಹೋದರೆ, ನೀವು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಗಾಂಧಿ ಸ್ಮಾರಕ ಸಮಿತಿಯನ್ನು ಮಾಡುವಾಗ ಇವರನ್ನೂ ಇಡಬೇಕಾಗುತ್ತದೆ. ಅಲ್ಲಿ ನಡೆಯತಕ್ಕ ಕೆಲಸಕಾರ್ಯಗಳನ್ನು ದಕ್ಷತೆಯಿಂದ ನೋಡಿಕೊಳ್ಳುವವರು ಇರಬೇಕು. ಹಾಗೆಯೇ ನಮ್ಮ ಕನ್ನಡದ ಸಿನಿಮಾಗಳಿಗೆ ಸಬ್ಸಿಡಿ 50 ಸಾವಿರ ರೂಪಾಯಿಗಳನ್ನು ತಾವು ಏನು ಕೊಡುತ್ತಿದ್ದೀರಿ? ಇದನ್ನು ಸುಮ್ಮನೆ ವಿಶಾಲ ಮನೋಭಾವದಿಂದ ಕೊಡಬಾರದು. ಮಾನ್ಯ ನಿಜಲಿಂಗಪ್ಪನವರಿಗೆ ಇಂಥ ವಿಶಾಲ ಮನೋಭಾವ ಇದ್ದು, ಅವರು ನಾವೆಲ್ಲರೂ ಭಾರತೀಯರು ಎಂದು ಹೇಳಿ, ಕಾಶ್ಮೀರಕ್ಕೂ ಮುಖ್ಯಮಂತ್ರಿಗಳಾಗಲಿಲ್ಲ. ವಿಶಾಲ ಮನೋಭಾವ ಎನ್ನುವ ಹೆಸರನ್ನು ಹೇಳಿ, ನಮ್ಮ ಕಾಲಿನ ಮೇಲೆ ಕಲ್ಲು ಹಾಕಿಕೊಂಡು ಊರಿಗೆ ಬೆಳಕನ್ನು ಮಾಡತಕ್ಕ ಮನೋಭಾವ ಬೇಡ. 50 ಸಾವಿರ ಅಲ್ಲದಿದ್ದರೆ ಒಂದು ಲಕ್ಷ ರೂಪಾಯಿಗಳನ್ನು ಸಬ್ಸಿಡಿಯಾಗಿ ಕೊಡಿ, ಆದರೆ ಅದನ್ನು ನಮ್ಮ ಕನ್ನಡ ಸಿನಿಮಾಗಳಿಗೆ ಮಾತ್ರ ಮೀಸಲಾಗಿಡಬೇಕು. ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುತ್ತೇನೆ. ನೀವು ಬೇರೆ ಸಿನಿಮಾಗಳವರಿಗೂ ಸಬ್ಸಿಡಿ ಕೊಡಬೇಕು ಎಂದರೆ, ಬೇರೆಯವರು ನಿಮ್ಮ ಕನ್ನಡ ಸಿನಿಮಾಗಳಿಗೆ ಎಷ್ಟು ಸಬ್ಸಿಡಿ ಕೊಟ್ಟಿದ್ದಾರೆ? ನಮಗೆ ಸ್ಟುಡಿಯೋಗಳನ್ನು ಅವರು ಕೊಡುವುದಿಲ್ಲ. ಬೆಂಗಳೂರಿನಲ್ಲಿ ಕೆಲವು

(ಶ್ರೀ ಕೋಣಂದೂರು ಲಿಂಗಪ್ಪ)

ಕನ್ನಡ ಸಿನಿಮಾಗಳಿಗೆ ಅವನ್ನು ಪ್ರದರ್ಶನ ಮಾಡಲು ಸಿನಿಮಾ ಮಂದಿರಗಳೇ ಸಿಕ್ಕುತ್ತಿದಿಲ್ಲ. ಹೀಗೆ ಇರುವಾಗ, ನಮಗೆ ವಿಶಾಲ ಮನೋಭಾವ ಏಕೆ ? ನಮ್ಮ ಕನ್ನಡದ ಸಿನಿಮಾಗಳನ್ನು ಉದ್ಧಾರ ಮಾಡಲಿಕ್ಕೆ, ಒಳ್ಳೆಯ ಸಿನಿಮಾಗಳನ್ನು ತೆಗೆಯಲಿಕ್ಕೆ 50 ಸಾವಿರ ರೂಪಾಯಿಗಳಲ್ಲ. ಒಂದು ಲಕ್ಷ ರೂಪಾಯಿಗಳನ್ನು ಕೊಡಿ, ಆದರೆ, ಈ ಸಂದರ್ಭದಲ್ಲಿ, ಕನ್ನಡ ಸಿನಿಮಾ ತೆಗೆದರೆ 50 ಸಾವಿರ ರೂಪಾಯಿ ಸಿಕ್ಕುತ್ತದೆ ಎಂದು ಅದನ್ನೇ ಒಂದು ಸಂಪಾದನೆಯಾಗಿಟ್ಟುಕೊಂಡಿರುವವರ ಬಗ್ಗೆ ಎಚ್ಚರ ವಹಿಸಿ ಅವರಿಗೆ ಖಂಡಿತಾ ಸಬ್ಸಿಡಿಯನ್ನು ಕೊಡಕೂಡದು. ಅದರಿಂದ ಕನ್ನಡಕ್ಕೆ ಕರ್ನಾಟಕಕ್ಕೆ ಗೌರವ ಬರುವುದಿಲ್ಲ ಒಳ್ಳೆಯ ಸಿನಿಮಾಗಳಿಗೆ ಒಂದು ಲಕ್ಷ ರೂಪಾಯಿಗಳಾದರೂ ಚಿಂತೆಯಿಲ್ಲ, ಅವರಿಗೆ ಹಣವನ್ನು ಕೊಡಬೇಕೆಂದು ಕೇಳಿಕೊಂಡು, ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P. M.

† ಶ್ರೀ ಗಟ್ಟೀ ಚಂದ್ರಶೇಖರ್ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಅಧಿವೇಶನದಲ್ಲಿ ಯಾವ ವಿಷಯದಲ್ಲೂ ಮಾತನಾಡಲಿಲ್ಲ. ಕಾರಣ, ಕಳೆದ ವರ್ಷ ಮಾತನಾಡಿದ ವಿಷಯಗಳ ಮೇಲೆ ಕ್ರಮ ತೆಗೆದುಕೊಂಡಿದ್ದು ನೋಡಿದರೆ, ನಾವು ಏನು ಹೇಳಿದರೂ ಅದು ಕಂಠಶೋಷಣೆ ಆಗುತ್ತದೆಯೇ ಹೊರತು ಪ್ರಯೋಜನವಾಗುವುದಿಲ್ಲವೆಂದು ಮನವರಿಕೆಯಾಗಿದೆ. ಆದಾಗ್ಯೂ, ಈ ಹೊತ್ತು ಅನೇಕ ವರ್ತಕ ಸಹೋದರರಿಗೆ ಸಂಬಂಧಪಟ್ಟ ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಕೆಲವು ಮಾತುಗಳನ್ನು ಆಡಬೇಕೆಂದು ಇಚ್ಛೆಪಟ್ಟಿದ್ದೇನೆ. ಇವತ್ತು ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳಿಂದ ವರ್ತಕ ಸಮಾಜಕ್ಕೆ ಆಗುತ್ತಾ ಇರತಕ್ಕ ಹಿಂಸೆ, ದಬ್ಬಾಳಿಕೆಯಿಂದಾಗಿ ಇಡೀ ವರ್ತಕ ಸಮಾಜವೇ ಸರ್ಕಾರಕ್ಕೆ ವಿರೋಧವಾಗಿದೆ. ಕಳೆದ ವರ್ಷ ಸೇಲ್ಸ್ ಟ್ಯಾಕ್ಸ್ ಬಗ್ಗೆ ನಾನು ಕೆಲವು ಸಲಹೆಗಳನ್ನು ಕೊಟ್ಟಿದ್ದೆ. ದುರ್ದೈವ ಕರ್ಮ ಸಂಯೋಗದಿಂದ ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಮೂವರು ಬಹಳ ಒಳ್ಳೆಯವರು ಇದ್ದಾರೆ. ಅರ್ಥ ಸಚಿವರು ರಾಜ ಮನೆತನದಲ್ಲಿ ಹುಟ್ಟಿ, ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡಿ, ಕೆಳಮಟ್ಟದಲ್ಲಿ ಏನು ನಡೆಯುತ್ತಿದೆ ಎನ್ನುವುದು ಅವರಿಗೆ ಅರ್ಥವಾಗುವುದಿಲ್ಲ. ಅದೇ ರೀತಿ ಕಾರ್ಯದರ್ಶಿಯವರೂ ಕೂಡ ದೊಡ್ಡ ಮನೆತನದಿಂದ ಬಂದು, ದೊಡ್ಡ ಐ. ಎ. ಎಸ್. ಅಧಿಕಾರಿಗಳಾಗಿ ಗಂಭೀರವಾದ ದಕ್ಷ ಅಧಿಕಾರಿಗಳು, ಕಮಿಷನರ್‌ರವರ ಬಗ್ಗೆ ಹೇಳಬೇಕಾದರೆ, ಅವರು ಕೇವಲ ದೇವರು ಇದ್ದ ಹಾಗೆ. ಅವರ ಹತ್ತಿರ ಮಾತನಾಡಿದರೆ, ಎಳೆ ಮಕ್ಕಳ ಹತ್ತಿರ ಮಾತನಾಡಿದ ಹಾಗಾಗುತ್ತದೆ. ಅವರು ಅಷ್ಟು ನಿಷ್ಕಳಂಕ ಮನಸ್ಸಿನವರು. ಈ ಮೂವರು ಈ ಇಲಾಖೆಯಲ್ಲಿರುವುದು ನಮ್ಮ ದುರ್ದೈವ. ಸೇಲ್ಸ್ ಟ್ಯಾಕ್ಸ್‌ನಿಂದ ಈ ವರ್ಷ 75 ಕೋಟಿ ರೂಪಾಯಿಗಳ ಆದಾಯ ಬರುತ್ತದೆ ಎಂದು ಅರ್ಥ ಸಚಿವರು ಹೇಳಿದರು. ಈ ಮೂರು ಜನರೇ ಲೆಕ್ಕ ಹಾಕಿ 75 ಕೋಟಿ ರೂಪಾಯಿ ಆದಾಯ ಬರುತ್ತದೆ ಎಂದು ಹೇಳಿರುವುದು, ವಾಸ್ತವಿಕವಾಗಿ, ಸೇಲ್ಸ್ ಟ್ಯಾಕ್ಸ್ ವಸೂಲಾದರೆ, 275 ಕೋಟಿ ರೂಪಾಯಿಗಳು ಬರಬಹುದು. ಸೇಲ್ಸ್ ಟ್ಯಾಕ್ಸ್ ಒಂದನ್ನೇ ಸರಿಯಾಗಿ ವಸೂಲು ಮಾಡಿದರೆ, ದೇಶದಲ್ಲಿ ಬೇರೆ ಯಾವುದೇ ಟ್ಯಾಕ್ಸ್‌ಗಳನ್ನು ಹಾಕಬೇಕಾದುದಿಲ್ಲ. 75 ಕೋಟಿ ರೂಪಾಯಿಗಳು ಸರಕಾರಕ್ಕೆ ಬರತಕ್ಕದ್ದು, 50 ಕೋಟಿ ರೂಪಾಯಿಗಳು ಇಲಾಖೆಯವರಿಗೆ ಹೋಗತಕ್ಕದ್ದು, 50 ಕೋಟಿ ಇಲಾಖೆ ಅಧಿಕಾರಿಗಳಿಗೆ ಕೊಟ್ಟಾಗ ವರ್ತಕರು 150 ಕೋಟಿ ರೂಪಾಯಿಗಳನ್ನು ಕದಿಯುತ್ತಾರೆ. ಇದಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ, ಕಳೆದ ವರ್ಷ ಮೈಸೂರಿನಿಂದ ಸರಕಾರಕ್ಕೆ ರಿಪೋರ್ಟ್ ಬಂದಿದೆ. ಸೇಲ್ಸ್ ಟ್ಯಾಕ್ಸ್ ಡೆಪ್ಯುಟಿ ಕಮಿಷನರ್‌ರವರು 8 ಜನ ವರ್ತಕರ ಲೆಕ್ಕವನ್ನು ತನಿಖೆ ಮಾಡಿ, ಆಯಿಲ್ ಸೀಡ್ಸ್‌ಗೆ 4 ಪರ್ಸೆಂಟ್ ಇರತಕ್ಕ ಟ್ಯಾಕ್ಸನ್ನು ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಅವರವರ ಹೆಸರಿಗೆ ಬಿಲ್ ಹಾಕಿರತಕ್ಕದ್ದನ್ನು ಪತ್ತೆ ಹಚ್ಚಿ ಕಂಡುಹಿಡಿದಿದ್ದಾರೆ. ಇದರಿಂದ 10—20 ಲಕ್ಷ ಟರ್ನ್ ಓವರ್ ಮಾಡುವವರು 75 ಸಾವಿರ, ಒಂದೂವರೆ ಲಕ್ಷ ಲೆಕ್ಕ ಕೊಟ್ಟಿದ್ದಾರೆ. ಅದರ ಬಗ್ಗೆ ಈ ದಿನ ಅಧಿಕಾರಿಗಳು ಗಮನ ಕೊಟ್ಟಿರಲಿಲ್ಲ, ಮತ್ತು ಅವರು ಆದಾಯದಲ್ಲಿ ಅವರ ಭಾಗ ತೆಗೆದುಕೊಂಡು ಬಿಟ್ಟು ಬಿಟ್ಟಿದ್ದಾರೆ ಎಂದು ಗೊತ್ತಾಗುತ್ತದೆ. ಈ ರೀತಿ ಮಾಡಿರುವ ಇಲಾಖೆ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನು ಇದುವರೆಗೆ ತೆಗೆದುಕೊಂಡಿಲ್ಲ. ನಾನು ಕಳೆದ ಸಲ ಹೇಳಿದೆ ಸೈಕಲ್ ಟೈರ್ ಮೇಲೆ ಮಲ್ಟಿ ಪಾಯಿಂಟ್ ಬಿಟ್ಟು ಸಿಂಗಲ್ ಪಾಯಿಂಟ್ ಹಾಕಿ ಎಂದು. ಇದರಿಂದ ಟ್ಯಾಕ್ಸ್ ಕದಿಯುವುದು ನಿಂತುಹೋಗುತ್ತದೆ. ವಿಸ್ಕಿ, ಬ್ರಾಂದಿ ಇವುಗಳ ಮೇಲೆ ಬೇಕಾದಷ್ಟು ಟ್ಯಾಕ್ಸ್ ಹಾಕಿ. ಆದರೆ, ಪುಸ್ತಕದವರಿಗೂ ಮತ್ತು ಶಾಸಕರಿಗೂ ಮತ್ತು ಅಧಿಕಾರಿಗಳಿಗೂ ಟ್ಯಾಕ್ಸನ್ನು ಮಾಫಿ

ಮಾಡಿ. ಏಕೆಂದರೆ, ಇದರಿಂದ ಅವರಿಗೆ ಬಹಳ ತೊಂದರೆಯಾಗುತ್ತದೆ. ಚೆಕ್ ಪೋಸ್ಟ್ ವಜಾ ಮಾಡಿ ಎಂದು ಸಲಹೆ ಕೊಟ್ಟಿದ್ದೆ. ಚೆಕ್ ಪೋಸ್ಟ್‌ನಲ್ಲಿ ಒಬ್ಬ ಸೇಲ್ಸ್ ಟ್ಯಾಕ್ಸ್ ಅಧಿಕಾರಿ ಇದ್ದರೆ ಮೂರು ತಲೆ ತಲಾಂತರದವರೆಗೂ ಅವನು ಸುಖವಾಗಿ ಜೀವನ ಮಾಡಬಹುದು. ಇಂತಹ ದಬ್ಬಾಳಿಕೆ ನಡೆಯುತ್ತಿದ್ದರೂ ಕೂಡ ಸರ್ಕಾರದವರು ಇದರ ಬಗ್ಗೆ ಗಮನ ಕೊಡುತ್ತಾ ಇಲ್ಲ. ಅವರು ಈ ಬಗ್ಗೆ ಕಠಿಣ ಮನಸ್ಸಾಗಬೇಕು. ಅಂತಹವರನ್ನು ಹಿಡಿದರೆ, ಕುವ ರಸ್ವಾಮಿ ತಪ್ಪು ತಿಳಿದುಕೊಳ್ಳುವುದಿಲ್ಲ, ಬಹಳ ಮೆಚ್ಚುತ್ತಾನೆ ಇದರಲ್ಲಿ ನಡೆಯುವ ಭ್ರಷ್ಟಾಚಾರ ಕಂಡು ಹಿಡಿದು ಟ್ಯಾಕ್ಸ್ ಸರಿಯಾಗಿ ವಸೂಲು ಮಾಡಿ, ಸಾಮಾನ್ಯ ಜನರಿಗೆ, ಮತ್ತು ಸಣ್ಣ ಸಣ್ಣ ವರ್ತಕರಿಗೆ ತೊಂದರೆಯಾಗುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ವರ್ಷ ನನ್ನ ಮಗನ ಮದುವೆ ಮಾಡಬೇಕು. ಸೇಲ್ಸ್ ಟ್ಯಾಕ್ಸ್ ಆಫೀಸರ ಮನೆಯಲ್ಲಿ ಹೆಣ್ಣು ನೋಡುತ್ತಿದ್ದೇನೆ. ಏಕೆಂದರೆ, ಬಹಳ ಕಾಲದವರೆಗೆ ಅವನು ಸಂತೋಷವಾಗಿರಬಹುದು. ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎನ್ನುವ ರೀತಿ ನಡೆಯುತ್ತಿದೆ. ಅಧಿಕಾರಿಗಳ ದ್ವೇಷ ಕಟ್ಟಿಕೊಂಡು ವ್ಯಾಪಾರ ಮಾಡಿದರೆ ನಮ್ಮ ಮೇಲೆ ಕಣ್ಣು ಇಟ್ಟಿರುತ್ತಾರೆ. ಆದುದರಿಂದ, ಇಂತಹ ಒಂದು ಅನ್ಯಾಯ ನಡೆಯುತ್ತಾ ಇರುವುದನ್ನು ತಪ್ಪಿಸಿ, ಸಣ್ಣ ಪುಟ್ಟ ವರ್ತಕರಿಗೆ ಆಗುತ್ತಿರುವ ಕಿರುಕುಳ ವನ್ನು ತಪ್ಪಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಪ್ರತಿ ವರ್ಷವೂ ಈ ತೆರಿಗೆಗಳ ಬಗ್ಗೆ ಸಲಹೆ ಕೊಡುವಾಗ, ಮಾನ್ಯ ಸದಸ್ಯರು, ಒಂದು ಮಾತನ್ನು ತಪ್ಪದೇ ಹೇಳುತ್ತಿದ್ದರು. ಅದು ಏನೆಂದರೆ, ಸೇಲ್ಸ್‌ಟ್ಯಾಕ್ಸ್ ಸರಿಯಾಗಿ ವಸೂಲಾದರೆ, ಇನ್ನೂ ಹೆಚ್ಚು ಆದಾಯ ಬರುತ್ತದೆ ಎಂದು. ಮಾನ್ಯ ಮಂಜುನಾಥ್‌ರವರು ಹೇಳಿದರು 70 ಕೋಟಿ ರೂಪಾಯಿ ಗಳಷ್ಟೇ ಅಲ್ಲ, 100 ಕೋಟಿ ಬರಬಹುದು ಎಂದು. ಅಮೇಲೆ, 120 ಕೋಟಿ ಕೂಡ ಬರಬಹುದೆಂದು ಕೆಲವರು ಹೇಳಿದರು. ಹೀಗೆ ಪ್ರತಿಯೊಬ್ಬರೂ ಒಂದು ಊಹೆ ಮೇಲೆ ಇಷ್ಟು ಬರಬಹುದು ಎಂದು ಹೇಳಿದರು. ಆದರೆ, ನಿಷ್ಪಷ್ಟವಾಗಿ ಅದರ ಬಗ್ಗೆ ಯಾರು ಲೆಕ್ಕ ಮಾಡಿ ಹೇಳುತ್ತಾ ಇಲ್ಲ. ಈ ರೀತಿ ಊಹೆಮಾಡುವುದರಿಂದ, ಸರಕಾರಕ್ಕೆ ಯಾವ ಒಂದು ಅನುಕೂಲವೂ ಆಗುವುದಿಲ್ಲ. ಅಥವಾ ಈ ವಿಷಯದಲ್ಲಿ ರಚನಾತ್ಮಕವಾದ ಒಂದು ಸಲಹೆ ಕೊಟ್ಟಂತೆ ಆಗುವುದಿಲ್ಲ. ಇದರ ಬಗ್ಗೆ ಸರಕಾರದ ವತಿಯಿಂದ ಕೆಲವು ಕ್ರಮಗಳನ್ನು ನಾವು ಕೈಕೊಂಡಿದ್ದೇವೆ ಈ ಸೇಲ್ಸ್ ಟ್ಯಾಕ್ಸ್‌ನಿಂದ ನಾವು ಎಷ್ಟರಮಟ್ಟಿಗೆ ಆದಾಯ ಹೆಚ್ಚಿಸಲಿಕ್ಕೆ ಸಾಧ್ಯ ಎಂಬುದರ ಬಗ್ಗೆ ಒಂದು ಸ್ಪಷ್ಟವಾದಂಥ ಚಿತ್ರ ನಮಗೆ ಸಿಕ್ಕಬೇಕಾದರೆ, ಸ್ಟ್ಯಾಟಿಸ್ಟಿಕ್ಸ್ ಏನಿದೆ ಅದು ಸರಿಯಾಗಿ ನಮಗೆ ಸಿಕ್ಕಬೇಕು. ಈ ದೃಷ್ಟಿ ಯಿಂದ ಕೋಡ್ ನಂಬರ್ ಎಂದು ಮಾಡಿದ್ದೇವೆ ಮತ್ತು ಅದರ ಪ್ರಕಾರ ಮಾಹಿತಿಗಳನ್ನು ಕೊಡ ಬೇಕೆಂದು ಮಾಡಿದ್ದೇವೆ. ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಸೇಲ್ಸ್ ಟ್ಯಾಕ್ಸ್ ಅಡ್ವೈಸರಿ ಕಮಿಟಿಯಲ್ಲಿ ಎಷ್ಟು ಬಿರುಸಾಗಿ ಅದರ ಬಗ್ಗೆ ಚರ್ಚೆ ಯಾಯಿತು, ಮತ್ತು ಕೋಡ್ ನಂಬರ್ಸ್ ಮಾಡಿದಾಗ, ವರ್ತಕರು ಏನು ಹೇಳಿದರು ಎಂಬುದು ಗೊತ್ತಿದೆ. ಮಾಹಿತಿ ಕೊಡುವುದಕಾಗುವು ದಿಲ್ಲ, ಕ್ಲಾರ್ಕ್ ಇಡುವುದಕ್ಕಾಗುವುದಿಲ್ಲವೆಂದು ಬೇಕಾದಷ್ಟು ವಿರೋಧ ವರ್ತಕರಿಂದ ಅದಕ್ಕೆ ಬಂತು. ಆದರೂ ಕೂಡ, ಸರ್ಕಾರ ಈ ವಿಚಾರ ಕೈಬಿಡಲಿಲ್ಲ. ಅದನ್ನು ಮಾಡಲೇಬೇಕು ಮತ್ತು ಮಾಹಿತಿಯನ್ನು ಪಡೆಯಲೇ ಬೇಕು, ಇಲ್ಲದೇ ಹೋದರೆ, ಸೇಲ್ಸ್ ಟ್ಯಾಕ್ಸ್ ಮಾಡರ್ನೈಜ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದೆವು. ಈಗ ಸಂತೋಷದಿಂದ ಹೇಳುವ ಮಾತೇನೆಂದರೆ, ಎಲ್ಲಾ ಚರ್ಚೆಯಾಗಿ ಅದಕ್ಕೆ ಒಪ್ಪಿದ್ದಾರೆ. ಕೋಡ್ ನಂಬರ್ಸ್ ಸ್ವಲ್ಪ ಮಟ್ಟಿಗೆ ಸಿಂಪ್ಲಿಫೈ ಮಾಡಿ, ದೊಡ್ಡ ದೊಡ್ಡ ವರ್ತಕರಿಗೆ ಮತ್ತು ಜಾಸ್ತಿ ಟರ್ನ್ ಓವರ್ ಇರತಕ್ಕ ವ್ಯಾಪಾರಿಗಳಿಗೆ ಅದನ್ನು ಅನ್ವ ಯಿಸಿದ್ದೇವೆ. ಅದು ಯಶಸ್ವಿಯಾಗಿ ನಡೆದರೆ ಆ ಮೇಲೆ ಅದನ್ನು ಎಲ್ಲರಿಗೂ ಅನ್ವಯಿಸುವುದಕ್ಕೆ ಸಾಧ್ಯ ವಾಗುತ್ತದೆ. ಈಗ ಕಂಪ್ಯೂಟರೈಜೇಷನ್ ಪ್ರಾರಂಭ ಮಾಡಿದ್ದೇವೆ. ಕಂಪ್ಯೂಟರ್ ಯಾವ ರೀತಿ ಕೆಲಸ ಮಾಡುತ್ತಿದೆ, ಯಾವರೀತಿ ಮಾಹಿತಿ ಸಂಗ್ರಹಿಸಿ ಕೊಡುತ್ತದೆ ಅದನ್ನು ಮಾನ್ಯ ಸದಸ್ಯರು ನೋಡಬೇಕೆಂದು ಹೇಳುತ್ತೇನೆ. Some good work is being done. ಆದುದರಿಂದ, ನನಗೆ ವಿಶ್ವಾಸ ಇದೆ, ಮುಂದೆ ಬರುವ ಎರಡು—ಮೂರು ವರ್ಷಗಳಲ್ಲಿ ಸೇಲ್ಸ್ ಟ್ಯಾಕ್ಸ್ ಅಡ್ಮಿನಿ ಸ್ಟ್ರೇಟಿವ್ ಏನಿದೆ, ಮತ್ತು ಅದರಿಂದ ಬರತಕ್ಕ ಆದಾಯ ಏನಿದೆ ಅದನ್ನು ಇನ್ನಷ್ಟು ಎಫಿಷಿಯೆಂಟ್ ಆಗಿ ಕಲೆಕ್ಟ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಬರೀ ಹೆದರಿಸಿ, ಬೆದರಿಸಿ ವರ್ತಕರ ಮೇಲೆ, ಅಧಿಕಾರಿ ಗಳು ಯಾವ ಕ್ರಮ ತೆಗೆದುಕೊಂಡರೂ ಅದನ್ನು ಸರಿಪಡಿಸಲಿಕ್ಕೆ ಸಾಧ್ಯವಿಲ್ಲ. ಬೇಗ ಮಾಹಿತಿ ಯನ್ನು ಸಂಗ್ರಹಿಸಿ, ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯ ಇದೆ. ಹೆದರಿಸಿ, ಬೆದರಿಸಿ ಮಾಡುವು ದಕ್ಕಾಗುವುದಿಲ್ಲ. ಯಾರೇ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ, ಎರಿದು ಭಾಷಣ ಮಾಡು ತ್ತೀರಿ, ಅವರು ಹೇಳುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ, ಒಬ್ಬ ಎಂ. ಎಲ್. ಎ. ಅವರು ಇದರಲ್ಲಿ ಬಹಳ ಅನ್ಯಾಯವಾಗಿದೆ ಎಂದು ಸಭೆಯಲ್ಲಿ ಭಾಷಣ ಮಾಡುತ್ತಾರೆ.

ಶ್ರೀ ಟಿ. ಎಂ. ಮಂಜುನಾಥ್.— ಇಂದು ವುಡ್ ಪ್ರೊಡಕ್ಷನ್ ಒಂದಕ್ಕೆ ಎರಡರಷ್ಟು ಜಾಸ್ತಿ ಯಾಗಿದೆ; ಮತ್ತು ಟಾರ್ಗೆಟ್ಟನ್ನು ಸಹ ಮೊದಲಿಗಿಂತ ಎರಡರಷ್ಟು ಜಾಸ್ತಿ ಮಾಡಿದಿರಿ ; ಆದ ಕಾರಣ ತೆರಿಗೆ ಹಣ ಏತಕ್ಕೆ ಜಾಸ್ತಿಯಾಗಬಾರದು ? ಈ ಬಗ್ಗೆ ಏನು ಕ್ರಮ ತೆಗೆದು ಕೊಂಡಿ ದ್ದೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಈ ಬಗ್ಗೆ ರಿಪೋರ್ಟ್‌ನಲ್ಲಿ ಒಂದು ಪ್ಯಾರಾದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ :

"Sales Tax being the single largest source of revenue to the State, it is necessary for purposes of tax policy to have adequate data on the turn over of various commodities and their tax yields. This data would be useful in formulating policies in regard to enhancement or reduction of rates, grant of exemptions and shifting of commodities from the single-point to the multi-point system and vice-versa. It would also enable an accurate assessment of tax evasion. Once accurate information on the dealers accounts is available, the actual collection can be watched with reference to the demand and where substantial arrears exist special efforts can be made to collect them immediately.

A beginning has been made in the computation of Sales Tax accounts during 1973-74. Code numbers have been assigned to various assessing officers, commodities and dealers. Dealers are required to furnish monthly returns in new forms which have been evolved for the purpose. These returns are processed at the Government Computer Centre. Once particulars of important dealers are lodged in the master files of the Computer Centre commodity-wise or yield wise analysis can be carried out any time and the results of the analysis made use of in decision-making.

As an experimental measure this system has been applied to dealers with an annual turn-over of Rs. 1 lakh and more in the Bangalore City division. With the experience gained it will be extended to cover the entire State in due course." ಇದು ನಮ್ಮ ಉದ್ದೇಶ ಇದನ್ನು ಜಾರಿಗೆ ತಂದರೆ ಆಗ ನಮಗೆ ಸರಿಯಾದ ಅಂಕಿ ಅಂಶಗಳು ಸಿಗುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—ಅದನ್ನು ಒಪ್ಪಿಕೊಳ್ಳುತ್ತೇನೆ. ಈಗ ತಾವು ವರ್ತಕರು ಕೊಟ್ಟ ಅಂಕಿ ಅಂಶಗಳನ್ನು ಇಟ್ಟುಕೊಂಡು ಅದರ ಆಧಾರದ ಮೇಲೆ ಲೆಕ್ಕ ಹಾಕುತ್ತೀರಿ. ಆದರೆ ಪ್ರತಿವರ್ಷವೂ ವರ್ತಕರು ತೆರಿಗೆಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ತಮ್ಮ ಹೆಸರನ್ನು ಬದಲಾವಣೆ ಮಾಡಿಕೊಳ್ಳುತ್ತಿದ್ದಾರೆ. ದೊಡ್ಡ ದೊಡ್ಡ ಫರಮ್‌ಗಳು ಸಣ್ಣ ಸಣ್ಣ ಫರಮ್ ಆಗಿ ಬದಲಾವಣೆಗೊಳ್ಳುತ್ತಿವೆ. ಹೊಸದಾಗಿ ಬ್ರಾಂಚ್‌ಗಳನ್ನು ಪ್ರಾರಂಭ ಮಾಡಿ ಹಳೆಯುವನ್ನು ಮುಚ್ಚುತ್ತಿದ್ದಾರೆ. ಈ ಕಾರಣದಿಂದ ಸರ್ಕಾರಕ್ಕೆ ಸರಿಯಾದ ಅಂಕಿ ಅಂಶಗಳು ಸಿಗುತ್ತಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಏನಾದರು ಬದಲಾವಣೆ ಮಾಡಬೇಕು ಎನ್ನುವುದಿದ್ದರೆ ಆ ಬಗ್ಗೆ ರಚನಾತ್ಮಕವಾಗಿ ಹೇಳಿ ; ಇಲ್ಲದಿದ್ದರೆ ಯಾರಿಗೂ ಅನುಕೂಲವಾಗುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ನನ್ನ ಅಭಿಪ್ರಾಯ ಇಷ್ಟೆ. ಈ ದೇಶದಲ್ಲಿ ತಯಾರಾಗತಕ್ಕಂಥ ಮತ್ತು ಉತ್ಪಾದನೆಯಾಗತಕ್ಕಂಥ ಪದಾರ್ಥಗಳ ಬಗ್ಗೆ ಸರಿಯಾದ ಅಂಕಿ ಅಂಶಗಳು ಸಿಗಬೇಕು ಎನ್ನುವುದಿದ್ದರೆ ತಮ್ಮಲ್ಲಿರತಕ್ಕಂಥ ಅಧಿಕಾರಿಗಳು ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು. ಕೇವಲ ವರ್ತಕರನ್ನೇ ತಾವು ನಂಬಿಕೊಂಡಿದ್ದರೆ ತಮಗೆ ಸರಿಯಾದ ಅಂಕಿ ಅಂಶ ಗಳು ಸಿಗುವುದಿಲ್ಲ. ಮತ್ತು ಟ್ಯಾಕ್ಸ್ ಸರಿಯಾಗಿ ವಸೂಲಿಯಾಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ತಾವು ಜನರಲ್ ಆಗಿ ಭಾಷಣ ಮಾಡಿದರೆ ಹೇಗೆ? ಎಲ್ಲ ವ್ಯಾಪಾರಸ್ಥರು ಮತ್ತು ಅಧಿಕಾರಿಗಳು ಪ್ರಾಮಾಣಿಕತೆಯಿಂದ ಇದ್ದರೆ ನಾವು ಕಾನೂನು ಮಾಡುವ ಅವಶ್ಯಕತೆಯೇ ಇಲ್ಲ. ಎಲ್ಲವೂ ಅಟೋಮ್ಯಾಟಿಕ್ ಆಗಿ ನಡೆಯುತ್ತದೆ. ಆದರೆ ಅದು ಇಲ್ಲದಿರುವುದರಿಂದ ನಾವು ಕಾನೂನು ಮಾಡಬೇಕಾಗುತ್ತದೆ. ಹೊಸ ಹೊಸ ಪದ್ಧತಿಯನ್ನು ಜಾರಿಗೆ ತರಬೇಕಾಗುತ್ತದೆ. ಈ ಬಗ್ಗೆ ತಾವು ನಮಗೆ ಪ್ರಾಕ್ಟಿಕಲ್ ಸಜೆಷನ್ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಗಟ್ಟಿ ಚಂದ್ರಶೇಖರ್.—ಟರ್ನ್ ಓವರ್ ಒಂದು ಲಕ್ಷ ಇರಬೇಕು ಎಂದು ಏನು ಹೇಳಿದ್ದೀರಿ ಅದನ್ನು ಎರಡು ಲಕ್ಷಕ್ಕೆ ಏತಕ್ಕೆ ಹೆಚ್ಚಿಸಬಾರದು? ಈ ರೀತಿ ಮಾಡಿದರೆ ಸಣ್ಣಸಣ್ಣ ಬೀಡಿ ಅಂಗಡಿಯವರಿಗೆ ಅನುಕೂಲವಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಅದನ್ನೂ ಯಾರೂ ಒಪ್ಪುವುದಿಲ್ಲ.

ಶ್ರೀ ಗಟ್ಟಿ ಚಂದ್ರಶೇಖರ್.—ನಾನೇನಾದರು ದೂರು ಕೊಟ್ಟರೆ ಎಂ. ಎಲ್. ಎ. ಬಂದು ಅದನ್ನು ತನಿಖೆ ಮಾಡುವುದು ಬೇಡ ಎಂದು ಹೇಳುತ್ತಾರೆ ಎಂದು ಹೇಳಿದಿರಿ. ಅಂದರೆ ಇನ್ನೊಬ್ಬರು ಒಂದು ಹೇಳಿದರೆ ಅದನ್ನು ವಿಚಾರಣೆ ಮಾಡುವುದಿಲ್ಲ ಎಂದು ಅರ್ಥವಾಯಿತು?

ಶ್ರೀ ಎಂ. ವೈ. ಘೋರ್ಪಡೆ.—ತಾವು ಮಾತನಾಡುವ ಧಾಟಿಯಲ್ಲಿಯೇ ನನಗೆ ಉತ್ತರ ಕೊಡುವುದಕಾಗುವುದಿಲ್ಲ.

ಇನ್ನು ಮಲ್ಟಿ ಪಾಯಿಂಟ್ ಮತ್ತು ಸಿಂಗಲ್ ಪಾಯಿಂಟ್ ಬಗ್ಗೆ ಸರ್ಕಾರದ ಧೋರಣೆಯನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಎಲ್ಲೆಲ್ಲಿ ಸಿಂಗಲ್ ಪಾಯಿಂಟ್ ಹಾಕುವುದಕ್ಕೆ ಸಾಧ್ಯವಿದೆಯೋ ಅಂತಹ ಕಡೆಗಳಲ್ಲಿ ಸಿಂಗಲ್ ಪಾಯಿಂಟ್ ಹಾಕುತ್ತಿದ್ದೇವೆ. ಆದರೆ ಎಲ್ಲಿ ಮ್ಯಾನುಫ್ಯಾಕ್ಚರಿಂಗ್ ಪಾಯಿಂಟ್‌ನಿಂದ ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲವೋ ಅಂತಹ ಕಡೆಗಳಲ್ಲಿ ತಯಾರಾಗುವ ವಸ್ತುಗಳನ್ನು ಮಲ್ಟಿ ಪಾಯಿಂಟ್‌ನಲ್ಲಿ ಸೇರಿಸಬೇಕಾಗುತ್ತದೆ. ಆದರೆ ಮಲ್ಟಿ ಪಾಯಿಂಟ್‌ನ್ನು ಸಂಪೂರ್ಣವಾಗಿ ಕೈಬಿಟ್ಟರೆ ಸರ್ಕಾರದ ಆದಾಯಕ್ಕೆ ಪೆಟ್ಟು ಬೀಳುತ್ತದೆ. ಈ ಅಂಶವನ್ನು ನಾನು ಪದೇಪದೇ ಹೇಳುತ್ತಿದ್ದೇನೆ. ಮುಖ್ಯವಾಗಿ ಯಾವ ಯಾವ ವಸ್ತುಗಳ ಮೇಲೆ ಅಡ್ಮಿನಿಸ್ಟ್ರೇಷನ್ ಪಾಯಿಂಟ್ ಆಫ್ ವ್ಯೂನಿಂದ ಸಿಂಗಲ್ ಪಾಯಿಂಟ್ ಹಾಕುವುದಕ್ಕೆ ಸಾಧ್ಯವಿದೆಯೋ ಅಂತಹ ಎಲ್ಲ ಪದಾರ್ಥಗಳನ್ನು ಸಿಂಗಲ್ ಪಾಯಿಂಟ್‌ಗೆ ಸೇರಿಸುತ್ತೇವೆ. ಇನ್ನು ಫುಡ್ ಗ್ರೈನ್ಸ್ ಮೇಲಿನ ತೆರಿಗೆ ಬಗ್ಗೆ ಅಷ್ಟೊಂದು ವಾದ ಮಾಡಬೇಕಾಗಿಲ್ಲ. ಏಕೆಂದರೆ ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಕಡಿಮೆ ಇದೆ. ಈಗ ಒಂದೂವರೆ ಪರ್ಸೆಂಟ್ ಇವೆ. ಈ ಬಗ್ಗೆ ಸ್ಪೆಷಲ್ ಆಗಿ ರಿಯಾಯಿತಿ ಕೊಡಲಾಗಿದೆ. ಇದರಿಂದ ಸರ್ಕಾರಕ್ಕೆ ಕೇವಲ 5-6 ಕೋಟಿ ರೂಪಾಯಿಗಳ ಆದಾಯ ಬಂದರೂ ಸಹ ಅದನ್ನು ನಾವು ಸುಮ್ಮನೆ ಬಿಟ್ಟುಬಿಡುವುದಕಾಗುವುದಿಲ್ಲ. ಒಂದು ಪಕ್ಷ ತೆಗೆದರೂ ಸಹ ಆಹಾರಧಾನ್ಯಗಳ ಬೆಲೆ ಕಡಿಮೆಯಾಗುವುದಿಲ್ಲ. ಕಡಿಮೆಯಾಗುತ್ತದೆ ಎಂದು ಯಾರಾದರು ಜವಾಬ್ದಾರಿ ತೆಗೆದುಕೊಂಡರ ತೆಗೆದುಹಾಕೋಣ.

ಇನ್ನು ಚೆಕ್ ಪೋಸ್ಟ್‌ಗಳಲ್ಲಿ ಅಧಿಕಾರಿಗಳು ಮತ್ತು ವ್ಯಾಪಾರಸ್ಥರು ಒಂದಾಗಿ ಏನೇನೋ ಮಾಡುತ್ತಾರೆಂದು ಮಾನ್ಯ ಮಂಜುನಾಥ್ ಅವರು ಹೇಳಿದರು.

ಶ್ರೀ ಕೆ. ಎಚ್. ಹನುಮೇಗೌಡ.—ತಾವು ಒಂದು ಸಲ ಲಾರಿಯನ್ನು ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ನೋಡಬಹುದು; ಅಲ್ಲಿ ಯಾವ ರೀತಿ ಸುಲಿಗೆಯಾಗುತ್ತಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವು ವೇಶ ಬದಲಾಯಿಸಿಕೊಂಡು ಹೋಗಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಆಕ್ಟ್ರಾಯ್ ಚೆಕ್‌ಪೋಸ್ಟ್‌ನಲ್ಲಿ ತೊಂದರೆಯಾಗುತ್ತಿದೆ, ಆದರೆ ಸೇಲ್ಸ್ ಟ್ಯಾಕ್ಸ ಚೆಕ್‌ಪೋಸ್ಟ್‌ನಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿದೆ ಎಂದು ಕೆಲವರು ಅಭಿಪ್ರಾಯಪಟ್ಟರು. ಚೆಕ್‌ಪೋಸ್ಟ್‌ಗಳಲ್ಲಿ ಯಾವ ತೊಂದರೆಯೂ ಇಲ್ಲ ಎಂದು ನಾನು ಹೇಳುವುದಿಲ್ಲ. ಸ್ವಲ್ಪ ಮಟ್ಟಿಗೆ ಕರಪ್ಷನ್ ಇರಬಹುದು; ಅಲ್ಲಿ ಶೇಕಡ ನೂರರಷ್ಟು ಚೆನ್ನಾಗಿ ಕೆಲಸವಾಗುತ್ತಿದೆ ಎಂದು ನಾನು ಹೇಳುತ್ತಿಲ್ಲ; ಆದರೆ ಬೇರೆ ಆಲ್ಟರ್‌ನೇಟಿವ್ ಸಿಸ್ಟಮ್ ತಿಳಿಯುತ್ತಿಲ್ಲ; ಅದನ್ನು ತೆಗೆದುಬಿಟ್ಟರೆ ನಮ್ಮ ಆದಾಯ ಕಡಿಮೆಯಾಗುತ್ತದೆ ಎಂಬ ಅಭಿಪ್ರಾಯ ಇದೆ. ಈ ಮಾತನ್ನು ಎಕ್ಸ್‌ಪರ್ಟ್ಸ್ ಆದವರೂ ಸಹ ಹೇಳುತ್ತಾರೆ, ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಿಗೆ ಹೋಗಿ ಬಂದವರೂ ಸಹ ಈ ಮಾತನ್ನು ಹೇಳುತ್ತಿದ್ದಾರೆ. ಜೊತೆಗೆ ಈ ಮಾತನ್ನು ಕೇವಲ ಸ್ಕೂಲ್‌ನಲ್ಲಿ ಕಲಿತವರು ಮಾತ್ರ ಹೇಳುತ್ತಿಲ್ಲ, ಗ್ರಾಮದಲ್ಲಿ ವಾಸ ಮಾಡುವವರು ಸಹ ಹೇಳುತ್ತಾರೆ.

(ಶ್ರೀ ಎಂ. ವೈ. ಘೋರ್ಪಡೆ)

ಅದನ್ನು ನಾವು ಸಂಪೂರ್ಣವಾಗಿ ತೆಗೆದುಹಾಕಿದರೆ ಆಗ ಏನೂ ಗೊತ್ತಾಗುವುದಿಲ್ಲ. So, I admit that there may be certain amount of trouble, inconvenience and even corruption at Check Posts, which we should try to set right, but completely giving up the idea of Check Post is not feasible. If we try to do that, it will seriously affect the income of the State. If there are any suggestions, I am prepared to discuss. There is corruption in the Check Post ಅಂತ ಇಷ್ಟು ಮಾತ್ರ ಹೇಳಿದರೆ......

ಶ್ರೀ ಆರ್. ಗುಂಡೂರಾವ್.—ಚೆಕ್‌ಪೋಸ್ಟ್‌ಗಳಲ್ಲಿ ಲಾರಿಗಳನ್ನು ಅನ್‌ಲೋಡ್ ಮಾಡಬೇಕು ಎಂದು ಹೇಳುತ್ತಾರೆ. ಅದನ್ನು ತಪ್ಪಿಸಬೇಕು.

Sri M.Y GHORPADE.—I propose to go into it in greater detail. I wish to call the people concerned with it and discuss with them at some depth and see to what extent we can improve upon the existing procedures to minimise trouble. I am not denying it. Let us go to the next item.

ಆಮೇಲೆ ಕೆಲವು ಮಾನ್ಯ ಸದಸ್ಯರು ಪ್ಲಾಸ್ಟಿಕ್ ಕೈಬಳೆಗಳ ಮೇಲೆ ವಿಧಿಸಿರುವ ತೆರಿಗೆಯನ್ನು ತೆಗೆದುಹಾಕಬೇಕು ಎಂದು ಹೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡಿಸುತ್ತೇನೆ. ಸ್ಮಾಲ್ ಸೇವಿಂಗ್ಸ್ ಯೋಜನೆಗೆ ರೂರಲ್ ಪ್ರದೇಶಗಳಲ್ಲಿರತಕ್ಕ ಬಡ ಜನಗಳಿಂದ ವಸೂಲಾಗುತ್ತಿಲ್ಲ. ಈ ಸ್ಮಾಲ್ ಸೇವಿಂಗ್ ಯೋಜನೆ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟರಮಟ್ಟಿಗೆ ಹಬ್ಬಬೇಕಾಗಿತ್ತು ಅಷ್ಟು ಹಬ್ಬಿಲ್ಲ ಎನ್ನುವುದೇ ನನ್ನ ದುಃಖ.

ಶ್ರೀ ಕೆ. ಎಚ್. ಹನುಮೇಗೌಡ.—ಗ್ರಾಮಾಂತರ ಪ್ರದೇಶದ ಮಾಹಿತಿ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಇಲ್ಲ. ನೀವೇನೋ ಗ್ರಾಮಾಂತರ ಪ್ರದೇಶದ ಜನಗಳಿಗೆ ಮಾಡಬಾರದ ಅನುಕೂಲ ಮಾಡಿರುವ ಹಾಗೆ ಮಾತನಾಡುತ್ತಿದ್ದೀರಿ. ಇವೊತ್ತು ಅವರಿಗೆ ಒಂದು ಹೊತ್ತಿನ ಕೂಳು ಸಿಕ್ಕುತ್ತಿಲ್ಲ. ಹೀಗಿರುವಾಗ ಗ್ರಾಮಾಂತರ ಪ್ರದೇಶದ ಜನಗಳಿಂದ ಸ್ಮಾಲ್ ಸೇವಿಂಗ್ಸ್ ಯೋಜನೆಗೆ ಹಣ ಸರಿಯಾಗಿ ವಸೂಲಾಗುತ್ತಿಲ್ಲ ಎಂದು ಹೇಳುವುದಕ್ಕೆ ನಿಮಗೆ ನಾಚಿಕೆಯಾಗುವುದಿಲ್ಲವೇ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಏನೇನೋ ಮಾತನಾಡುತ್ತೀರಲ್ಲ.

Sri M. Y. GHORPADE.—I would like to know whether this type of speaking is consistent with the dignity of the House.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಹಳ್ಳಿಯವರ ಕಷ್ಟ ತಮಗೆ ಗೊತ್ತಿರುವುದರಲ್ಲಿ ಕಾಲುಭಾಗ ಕೂಡ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಗೊತ್ತಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ನೀವು ಸ್ಮಾಲ್ ಸೇವಿಂಗ್ಸ್ ಬಗ್ಗೆ ಪ್ರಚಾರ ಮಾಡುವುದಕ್ಕೆ ತಮಟೆ ತೆಗೆದುಕೊಂಡು ಹೋಗಿ ಅದರಲ್ಲೇ ಹೊಡೆದು ಕಳುಹಿಸುತ್ತಾರೆ.

MADAM SPEAKER.—Something is really wrong with the hon. member to-day. I will have to get the whole t ing expunged. ಮಾನ್ಯ ಸದಸ್ಯರು ಈ ರೀತಿ ಮಾತನಾಡುವುದು ಸರಿಯಲ್ಲ. ಅವರು ಮಾತನಾಡುವುದು ಸ್ವಲ್ಪವೂ ಚೆನ್ನಾಗಿಲ್ಲ.

M. Y. GHORPADE.—I would really like to be patient. I am conscious that we are in power but we have to be extremely patient. I wonder whether this style of speaking on the part of the hon. Member is really doing service to democracy and our State. I appeal to them; whatever the criticism, I think certain standards must be observed in the expressions.

ಶ್ರೀ ಕೆ. ಎಚ್. ಹನುಮೇಗೌಡ.—ಹಳ್ಳಿಯ ಚಿತ್ರ ಹೇಳಿದ ತಕ್ಷಣ ನನಗೆ ಒಂದು ರೀತಿ ಆಗುತ್ತದೆ.

ಎಂ. ವೈ. ಘೋರ್ಪಡೆ.—ಚುನಾವಣೆ ಬಂದಾಗ ಜನರು ಯಾರಿಗೆ ವೋಟು ಕೊಡಬೇಕು, ಯಾರನ್ನು ನಿರ್ನಾಮ ಮಾಡಬೇಕೆಂಬುದನ್ನು ತೀರ್ಮಾನ ಮಾಡುತ್ತಾರೆ.

ಲಾಟರಿಯ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಲಾಟರಿಯಲ್ಲಿ ಆದಾಯ ಕಡಿಮೆ ಆಗುತ್ತಿದೆ. ಈ ರೀತಿ ಆದಾಯ ಕಡಿಮೆ ಆದರೆ ಇದನ್ನು ಏತಕ್ಕೆ ಕೈಬಿಡಬಾರದು ಎನ್ನುವ ಅಭಿಪ್ರಾಯ ಇದೆ. ಆದರೆ ಈ ಬಗ್ಗೆ ಸರ್ಕಾರದವರು ಇನ್ನೂ ಯಾವ ಒಂದು ತೀರ್ಮಾನಕ್ಕೂ ಬಂದಿಲ್ಲ. ಈ ರೀತಿ ಇದರಲ್ಲಿ ಆದಾಯ ಕಡಿಮೆ ಆಗುವುದಕ್ಕೆ ಕೆಲವು ಕಾರಣಗಳು ಇವೆ. ಸೆಂಟ್ರಲ್ ಇನ್‌ಕಂ ಟ್ಯಾಕ್ಸ್ ಬದಲಾವಣೆ ಮಾಡಿದರು. ಇದರಿಂದಲೂ ಸ್ವಲ್ಪ ಆದಾಯ ಕಡಿಮೆಯಾಗುತ್ತಿದೆ. ಇದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಎಲ್ಲಾ ರಾಜ್ಯಗಳಲ್ಲಿಯೂ ಇದರಲ್ಲಿ ಆದಾಯ ಕಡಿಮೆಯಾಗುತ್ತಿದೆ. ಇದರ ಪಾಪ್ಯುಲಾರಿಟಿ ಕಡಿಮೆಯಾಗುತ್ತಿದೆಯೇನೋ ಎನ್ನುವ ಅನುಮಾನ ಬಂದು ಈ ಸಲ ಪ್ರೈಜ್ ಕೊಡುವ ವಿಧಾನವನ್ನು ಸ್ವಲ್ಪ ಬದಲಾವಣೆ ಮಾಡಿದ್ದೇವೆ. ಸ್ಮಾಲ್ ಡಿನಾಮಿನೇಷನ್ ಜಾಸ್ತಿ ಮಾಡಿದ್ದೇವೆ. ಸ್ವಲ್ಪ ಇನ್‌ಸೆಂಟೀವ್ ಬರಲಿ, ಜಾಸ್ತಿ ಜನಗಳಿಗೆ ಪ್ರೈಜ್ ಬರಲಿ ಎಂದು ಕೆಲವು ಕ್ರಮಗಳನ್ನು ಕೈಗೊಳ್ಳುತ್ತೇವೆ. ಇಷ್ಟೆಲ್ಲಾ ಆದ ಮೇಲೆ ಜನಪ್ರಿಯತೆಯನ್ನು ಕುಗ್ಗಿಸುವ ಪ್ರಯತ್ನ ಮುಂದುವರಿದರೆ, ಆದಾಯ ಕಡಿಮೆ ಆದರೆ ಈ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಆದರೆ ಈ ಬಗ್ಗೆ ಇನ್ನೂ ಯಾವ ತೀರ್ಮಾನವನ್ನೂ ಕೈಗೊಂಡಿಲ್ಲ.

ಪೆನ್‌ಷನ್ ಬಗ್ಗೆ ಬಹಳ ಕಳಕಳಿಯಿಂದ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ಏನು ಕೆಲವು ಕಡೆ ತೊಂದರೆಯಾಗುತ್ತಿದೆ ಆ ವಿಷಯದಲ್ಲಿ ನನಗೆ ಸಾಕಷ್ಟು ಮಾಹಿತಿ ಇದೆ. ಈ ತೊಂದರೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಅದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ ಪೆನ್‌ಷನ್ ರೆಕಾರ್ಡ್‌ನ್ನು ರಿಟೈರ್ ಆಗುವುದಕ್ಕೆ ಒಂದು ವರ್ಷ ಮುಂಚೆ ತಯಾರು ಮಾಡಬೇಕು ಎಂದು ಆಡಿಟರ್ ಜನರಲ್ ಅವರು ಏನಿದ್ದಾರೆ ಅವರ ಹತ್ತಿರ ಕೂಡ ಚರ್ಚೆಯಾಗಿ ಕೆಲವು ಪ್ರೊಸೀಜರನ್ನು ಬದಲಾಯಿಸುತ್ತಿದ್ದೇವೆ. ಆಲ್ ಇಂಡಿಯಾ ಪ್ರೊಸೀಜರ್ ಏನಿದೆ ಅದೇ ಪ್ರೊಸೀಜರ್ ನಮ್ಮ ರಾಜ್ಯದಲ್ಲಿಯೂ ಇದೆ. ಈ ಪ್ರೊಸೀಜರನ್ನು ಸುಲಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಸಾಕಷ್ಟು ಇದರ ಕಡೆ ಗಮನ ಕೊಟ್ಟಿದ್ದೇವೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೂಡ ಕೊಟ್ಟಿದ್ದೇವೆ. ಆದ್ದರಿಂದ ಪೆನ್‌ಷನರ್ಸ್ ಪೆನ್‌ಷನ್ ತೆಗೆದುಕೊಳ್ಳುವುದಕ್ಕೆ 5—10 ವರ್ಷ ಏನೂ ಆಗುವುದಿಲ್ಲ. ಈ ಬಗ್ಗೆ ಇನ್ನು ಮುಂದೆ ತೊಂದರೆಯಾಗುವುದಿಲ್ಲ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ.

ಇನ್‌ಫರ್‌ಮೇಷನ್ ಅಂಡ್ ಪಬ್ಲಿಸಿಟಿ ಬಗ್ಗೆ ಹೇಳುವುದಾದರೆ ಟೂರಿಜಮ್ ಬ್ರೈಫರ್‌ಕೇಟ್ ಮಾಡಿದ್ದೇವೆ. ಇದರ ಬಗ್ಗೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಡಾ. ನಟರಾಜ್ ಅವರ ಬಗ್ಗೆ ಕೆಲವು ವಿಷಯಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಮಾಹಿತಿ ತರಿಸಿದ್ದೇನೆ. ಅಂಥಾದ್ದು ಏನು ನಡೆಯಲಿಲ್ಲ ಎಂದು ಹೇಳಿದ್ದಾರೆ. I enquired as soon as the Hon. Memb r mentioned it. As far as the department says, no such release was distributed. We cannot rul out the possibility of his having made a useful statement. As far as I know, no release by Dr. Nataraj was distributed. If there is any evidence, you pass it on to me; then I will judge whether the material was of a sufficient standard or not.

ಶ್ರೀ ಎಚ್. ಡಿ. ದೇವೇಗೌಡ.—ಡಾ. ನಟರಾಜ್ ಅವರ ಪ್ರೆಸ್‌ಸ್ಟೇಟ್‌ಮೆಂಟ್ ಪತ್ರಿಕೆಗಳಿಗೆ ಹೋಗುವಾಗ ಪಬ್ಲಿಸಿಟಿ ಅಂಡ್ ಇನ್‌ಫರ್‌ಮೇಷನ್ ಸೀಲ್ ಇರುವ ಕವರ್‌ನಿಂದ ರಿಲೀಜ್ ಆಗಿದ್ದರೆ ಆ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಎಂ. ವೈ. ಘೋರ್ಪಡೆ.—ಅದನ್ನು ನೋಡಿಸುತ್ತೇನೆ.

ಅಡ್ವರ್ಟೈಜ್‌ಮೆಂಟ್ ಮೀಡಿಯಾ ಲಿಸ್ಟ್. ಈ ಪೇಪರ್ಸ್ ಬಗ್ಗೆ ಮೀಡಿಯಾ ಲಿಸ್ಟ್‌ನಲ್ಲಿ ಡಿಸ್ಕ್ರಿಮಿನೇಟರಿಯಾಗಿ ಕೊಡುವುದಿಲ್ಲ. ಅದಕ್ಕೂ ಒಂದು ಪದ್ಧತಿ ಇದೆ. ಮೀಡಿಯಾ ಲಿಸ್ಟ್ ಎಂದು ಮಾಡಿದ್ದಾರೆ. ಅದನ್ನು ನಾವೂ ಸಹ ಮಾಡುತ್ತಿದ್ದೇವೆ. ಇನ್ನು ಏನಾದರೂ ಇದರಲ್ಲಿ ಇಂಪ್ರೂವ್ ಮಾಡುವುದು ಇದ್ದರೆ ಅದನ್ನು ಮಾಡುತ್ತೇವೆ. This is the policy of the Government. We are trying to improve those procedures. We are trying to improve the media list.

6-00 P.M.

ಶ್ರೀ ಕೋಣಂದೂರು ಲಿಂಗಪ್ಪ.—ಅದನ್ನು ಡಿಸ್ಟ್ರಿಕ್ಟ್ ಲೆವಲ್ಲಿನಲ್ಲಿಯೂ ಮಾಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಸ್ಮಾಲ್ ಪೇಪರ್ಸ್ ಎಲ್ಲೆಲ್ಲಿ ಚೆನ್ನಾಗಿ ಕೆಲಸಮಾಡುತ್ತಿವೆ ಎಂಬುದನ್ನು ನೋಡುತ್ತೇವೆ. ಅದರಲ್ಲಿ ಯಾವುದು ಚೆನ್ನಾಗಿ ಪ್ರಿಂಟ್ ಆಗುತ್ತದೆ, ಯಾವುದು ರೆಗ್ಯುಲರ್ ಆಗಿದೆ, ಯಾವುದು ಇರ್ರೆಗ್ಯೂಲರ್, ಯಾವುದು ಸರಿಯಾಗಿ ಪ್ರಿಂಟ್ ಆಗುವುದಿಲ್ಲವೆಂದು ನೋಡುತ್ತೇವೆ. ಕೆಲವು ಪತ್ರಿಕೆಗಳಲ್ಲಿ ಬರೀ ಅಡ್ರೆಸ್ ಇರುತ್ತದೆ. ಪೇಪರ್ ಇರುವುದಿಲ್ಲ. ಅದಕ್ಕೆ ಅಡ್ವರ್ಟೈಜ್‌ಮೆಂಟ್ ಕೊಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಪೇಪರ್ಸ್ ಬಗ್ಗೆ ಒಂದು ರಿಜಿಸ್ಟರನ್ನು ಮೇಂಟೇನ್ ಮಾಡಬೇಕು. ಅಂಥಾದ್ದನ್ನು ಮಾಡಿದರೆ, ನಿಮಗೂ ಕೇವಲ ಒಂದು ವರ್ಷದಲ್ಲಿ ಎಲ್ಲವೂ ಗೊತ್ತಾಗುತ್ತದೆ. ಅದು ಸರ್ಕ್ಯುಲೇಟ್ ಆಗಬೇಕು. ಪ್ರತಿಯೊಂದು ಐಟಂನ್ನು ಪ್ರತಿದಿನವೂ ನೋಡಬೇಕು.

Sri M. Y. GHORPADE.—It is not the intention of the Government to increase the assistance to small and medium newspapers. ಆಮೇಲೆ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ನನ್ನ ವಿಷಯದಲ್ಲಿ ಬಹಳ ರಾಜಕೀಯವಾಗಿ ಮಾತನಾಡಿದ್ದಾರೆ. ನಾನು ಮಂತ್ರಿಯಾದ ಬಗ್ಗೆಯೂ ಮಾತನಾಡಿದ್ದಾರೆ, ನಾನು ಅದಕ್ಕಾಗಿ ಬಹಳ ಪ್ರಯಾಸಮಾಡಿದ್ದೇನೆಂದು ಹೇಳಿದರು. ನಾನು ಮಂತ್ರಿಯಾಗುವುದಕ್ಕೆ ನನ್ನ ತಾಲ್ಲೂಕಿನಲ್ಲಿ ಬಹಳ ಪ್ರಯತ್ನಗಳನ್ನು ಮಾಡುತ್ತಿದ್ದರೆಂದು ಹೇಳಿದ್ದಾರೆ. ಅಂತಹ ಶಬ್ದಗಳನ್ನು ಈ ಚರ್ಚೆಯಲ್ಲಿ ಉಪಯೋಗಿಸುವುದು ಸರಿಯಲ್ಲ. ಆ ರೀತಿಯಾಗಿ ಇಲ್ಲಿ ಉಪಯೋಗಿಸಿರುವುದು ಎಲ್ಲಾ ರಾಜಕೀಯವಾಗುತ್ತದೆ. ಗುಲ್ಬರ್ಗಾ ಚುನಾವಣೆಯಾದನಂತರ ವಿರೋಧಪಕ್ಷದವರ ಗಮನ ನನ್ನ ಕಡೆಗೆ ಬಹಳ ಜಾಸ್ತಿಯಾಗಿದೆ. ಕೆಲವು ಸಂದರ್ಭಗಳಲ್ಲಿ ನನ್ನ ಬಗ್ಗೆ ಪ್ರಶಂಸೆ ಮಾಡುತ್ತಾರೆ. ಒಟ್ಟಿನಲ್ಲಿ ಅವರಿಗೆ ಗುಲ್ಬರ್ಗಾ ಚುನಾವಣೆಯಾದನಂತರ ಸ್ವಲ್ಪ ನನ್ನ ವಿಷಯದಲ್ಲಿ ಬದಲಾವಣೆಯಾದಂತಿದೆ.

ಶ್ರೀ ಎಚ್. ಡಿ. ದೇವೇಗೌಡ.—ಗುಲ್ಬರ್ಗಾ ಚುನಾವಣೆಯ ಬಗ್ಗೆ ನಾವು ಯಾರ ಮೇಲೂ ಆಪಾದನೆ ಮಾಡುವುದಿಲ್ಲ. ನೀವು ಅಲ್ಲಿ ಇದ್ದರೇನು ? ಮಾನ್ಯ ಮುಖ್ಯಮಂತ್ರಿಗಳು ಅಲ್ಲಿದ್ದರೇನು?

Sri M. Y. GHORPADE.—I noticed the change in the tone and use of words, after the Gulbarga election.

ಶ್ರೀ ಕೋಣಂದೂರು ಲಿಂಗಪ್ಪ.—ಗುಲ್ಬರ್ಗಾ ಚುನಾವಣೆಗೂ, ಸೋಷಿಯಲಿಸ್ಟ್ ಪಕ್ಷಕ್ಕೂ ಯಾವ ಸಂಬಂಧವೂ ಇಲ್ಲ. ನಮ್ಮ ಕಡೆಯವರು ಅಲ್ಲಿರಲಿಲ್ಲ. ಅದಕ್ಕಾಗಿ ನಿಮ್ಮ ಬಗ್ಗೆ ಯಾವ ಟೋನ್ ಚೇಂಜ್ ಮಾಡುವ ಅಗತ್ಯವೂ ನಮಗೆ ಇಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರೊಬ್ಬರು ಸೇಲ್ಸ್‌ಟ್ಯಾಕ್ಸ್ ಅಸೆಸ್‌ಮೆಂಟ್ ಬಗ್ಗೆ ಎಷ್ಟು ಪೆಂಡಿಂಗ್ ಇದೆಯೆಂದು ಕೇಳಿದರು. ಅದರ ಬಗ್ಗೆ ನಾನು ಕೆಲವು ಅಂಕಿಅಂಶಗಳನ್ನು ಕೊಡುತ್ತೇನೆ. 1972-73ನೇ ಸಾಲಿನ ಅಂತ್ಯಕ್ಕೆ ಅಸೆಸ್‌ಮೆಂಟ್ ಪೆಂಡಿಂಗ್ ಆಗಿದ್ದುದು—94 ಸಾವಿರ ರೂಪಾಯಿ. 1973-74ನೇ ಸಾಲಿನ ಅಂತ್ಯಕ್ಕೆ ಅಸೆಸ್‌ಮೆಂಟ್ ಪೆಂಡಿಂಗ್ ಇರುವುದು—63 ಸಾವಿರ ರೂಪಾಯಿ. ಆದರೆ ಅಸೆಸ್‌ಮೆಂಟ್ ಡಿಸ್‌ಪೋಜ್ ಆದುದು ಬಹಳ ಜಾಸ್ತಿಯಾಗಿದೆ. 1972-73ನೇ ಸಾಲಿನಲ್ಲಿ ಅಸೆಸ್‌ಮೆಂಟ್ ಡಿಸ್‌ಪೋಜ್ ಆದುದು—1 ಲಕ್ಷ 17 ಸಾವಿರ ರೂಪಾಯಿ. 1973-74ನೇ ಸಾಲಿನಲ್ಲಿ ಅಸೆಸ್‌ಮೆಂಟ್ ಡಿಸ್‌ಪೋಸ್ ಆದುದು 1 ಲಕ್ಷ 53 ಸಾವಿರ ರೂಪಾಯಿ. ಅಂದಮೇಲೆ ಅಸೆಸ್‌ಮೆಂಟ್ ಡಿಸ್‌ಪೋಸಲ್ ರೇಟ್ ಜಾಸ್ತಿಯಾಗಿದೆ. ಪೆಂಡಿಂಗ್ ಅಸೆಸ್‌ಮೆಂಟ್ ನಂಬರ್ ಬಹಳ ಕಡಿಮೆಯಾಗಿದೆ. ಆದ್ದರಿಂದ ಸಿ.ಟಿ.ಓ. ಮತ್ತು ಎ.ಸಿ.ಟಿ.ಓ.ಗಳ ಸಂಖ್ಯೆಯನ್ನು ಜಾಸ್ತಿಮಾಡಿ, ಈಗಿರತಕ್ಕ ವರ್ಕ್‌ಲೋಡ್ ಕಡಿಮೆಮಾಡಿ ಅಲ್ಲಿನ ಕೆಲಸಗಳನ್ನು ಮುಂದುವರಿಸಬೇಕೆಂಬುದಾಗಿ ನಮ್ಮ ಆಲೋಚನೆ ಇದೆ. ಅದರ ಪ್ರಕಾರ ಈಗಾಗಲೇ ಅವರ ಸಂಖ್ಯೆಯನ್ನು ಅಲ್ಲಿನ ವರ್ಕ್‌ಲೋಡ್ ಬಹಳ ಜಾಸ್ತಿ ಇರುವುದರಿಂದ ಹೆಚ್ಚುವರಿ ಮಾಡಲಾಗಿದೆ.

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿನ ಬಗ್ಗೆ ಯಾವುದೋ ಒಂದು ನ್ಯೂಯಾರ್ಕ್ ಟೈಮ್ಸ್ ಎಂಬ ಪತ್ರಿಕೆಯಿಂದ ಒಂದು ಪ್ಯಾರಾಗ್ರಾಫನ್ನು ಇಲ್ಲಿ ಓದಿ, ಅದನ್ನು ರಾಜಕೀಯವಾಗಿ ಹೇಳಿದರು. ಅದೇನೂ ತಪ್ಪು ಅಲ್ಲ. ಬರ್ನಾರ್ಡ್ ವಿನ್‌ರಾಬ್ ಅವರು ನ್ಯೂಯಾರ್ಕ್ ಟೈಮ್ಸ್‌ನಲ್ಲಿ ನಮ್ಮ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಫಾರಿನ್ ಪ್ರೆಸ್‌ನಲ್ಲಿ ನಮ್ಮ ಬಗ್ಗೆ ಏನು

ಬರೆಯುತ್ತಾರೋ ಅದರ ಒಂದು ಎಕ್ಸ್‌ಟ್ರಾಕ್ಟ್ ಇಲ್ಲಿನ ವಾರ್ತಾ ಇಲಾಖೆಯ ಪೇಪರ್‌ನಲ್ಲಿ ಪಬ್ಲಿಷ್ ಆದರೆ, ಅದನ್ನು ಕರ್ನಾಟಕಕ್ಕೂ ಮತ್ತು ಯಾವುದೋ ಒಂದು ಜಾತಿಯ ವಾದಕ್ಕೆ ಏಕೆ ಹೊಂದಿಸಬೇಕೋ ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಎಂದು ನಾನು ಒಂದು ಸುದ್ದಿಯನ್ನು ಕೊಡುತ್ತೇನೆ. ಅದನ್ನು ನಾನು ಕೊಟ್ಟಹಾಗೆ ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸುವ ಅಭಿಪ್ರಾಯವನ್ನು ಹೊಂದಿದ್ದೀರಾ ?

Sri M. Y. GHORPADE.—At the time of changing the name of our Karnataka our Chief Minister said : "Now we are finally doing it ; it is the revival of the renowned name of our State" ಎಂದು ಹೇಳಿದ್ದಾರೆ. The man who has written the article in the foreign press has absolutely no intention of supporting casteism. It is unfortunately we, in this House who are trying to give a caste meaning to it.

ಶ್ರೀ ಎಚ್. ಡಿ. ದೇವೇಗೌಡ.—ಆ ರೀತಿಯಾಗಿ ತಾವು ಸಮರ್ಥನೆ ಮಾಡಿಕೊಂಡಿದ್ದೀರಿ. ವಿದೇಶೀ ಪತ್ರಿಕೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಹಿಂದೆ 15 ವರ್ಷಗಳವರೆಗೆ ಲಿಂಗಾಯಿತರ ರಾಜ್ಯಾಡಳಿತ ಇತ್ತೆಂದು ಹೇಳಿದ್ದೀರಿ. ಹಿಂದೆ ಈ ರಾಷ್ಟ್ರದ ಆಡಳಿತ 25 ವರ್ಷಗಳು ಬ್ರಾಹ್ಮಣರ ಕೈಲಿತ್ತೆಂದು ಏಕೆ ಹೇಳಬಾರದು ?

Sri M. Y. GHORPADE.—That is the view point. It is not with an intention to rouse casteism. This is only an extract of an article written by a foreign writer.

ಶ್ರೀ ಎಚ್. ಡಿ. ದೇವೇಗೌಡ.—ಆ ರೀತಿ ಅವರಿಗೆ ಬರೆಯಲು ಅವಕಾಶ ಕೊಟ್ಟಿದ್ದೇ ತಪ್ಪು. ಯಾವುದೇ ಒಂದು ರಾಜಕೀಯ ಕ್ಷೇತ್ರಕ್ಕೆ ಜಾತೀಯ ಬಣ್ಣ ಕಟ್ಟಿ ಇಂತಹ ವಾತಾವರಣವನ್ನು ಈಗ ಮುಂದುವರಿಸುವುದಕ್ಕೆ ಇವರು ಹೋಗಬಾರದಾಗಿತ್ತು.

Sri M. Y. GHORPADE.—I want to make it very clear. The Editor must have certain freedom in these things. Otherwise, papers will lose their freedoms.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ವಾದವೇ ಬೇರೆ.

ಶ್ರೀ ಎಂ. ವೈ. ಘೋರ್ಪಡೆ.—ಸರ್ವೇಸಾಮಾನ್ಯವಾಗಿ ಎಲ್ಲರೂ ಕರ್ನಾಟಕ ಕಟ್ಟುವುದರಲ್ಲಿ ಶ್ರಮಪಟ್ಟಿದ್ದಾರೆ. ಇದು ನಮ್ಮ ಧೋರಣೆ. ಯಾವುದೋ ಒಂದು ಜಾತಿಯವರಿಂದ ಇದನ್ನು ಕಟ್ಟಿರುವುದು ಎಂಬುದಾಗಿ ಈ ಸರ್ಕಾರದ ವತಿಯಿಂದ ಎಂದಿಗೂ ಮಾತನಾಡುತ್ತಿಲ್ಲ. ಇದು ಜಾತಿಗೆ ಸಂಬಂಧವಿಲ್ಲ.

Sri H. D. DEVEGOWDA.—You cannot go to that extent to defend an Officer. It is not a private paper. Please don't go to that extent. ಇಂತಹ ವಿಷಯವನ್ನು ನೀವು ಅಚ್ಚು ಹಾಕುವುದಕ್ಕೆ ನಾಲಾಯಕ್ಕಾಗಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಯಾವುದೋ ಒಂದು ವಿಷಯವನ್ನು ಕೊಡುತ್ತೇನೆ. ಅದನ್ನು ನಾನು ಕೊಟ್ಟಹಾಗೆಯೇ ಛಾಪಿಸುತ್ತೀರಾ ?

Sri M. Y. GHORPADE.—All that I want to say is that there is nothing objectionable ; there is nothing offensive to anybody.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿರತಕ್ಕ ಅಧಿಕಾರಿ ನೀವು ಕೊಡತಕ್ಕ ಸಂಬಳದಿಂದ ಅಲ್ಲಿರುವಾಗ ಅವನು ಒಬ್ಬ ಗುಲಾಮನೆಂದು ನೀವು ಹೇಳಬೇಕಾಗುತ್ತದೆ.

Sri KAGODU THIMMAPPA.—I say that it is offensive. You are damaging the image of the State. ಬೇರೆಯವರೂ ಕೂಡ ಇನ್ನೊಂದು ದೃಷ್ಟಿಕೋನದಿಂದ ಏನಾದರೂ ಒಂದು ಅಭಿಪ್ರಾಯವನ್ನು ಕೊಡುತ್ತಾರೆ ಅದನ್ನೂ ಸಹ ಛಾಪಿಸುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ನಾನು ಇನ್ನೊಂದು ವಿಷಯವನ್ನು ಹೇಳುತ್ತೇನೆ. ಎಷ್ಟು ವರ್ಷ ಬ್ರಾಹ್ಮಣರು ಈ ರಾಜ್ಯದ ಆಡಳಿತವನ್ನು ಅವರ ಕೈಕೆಳಗೆ ತಗೆದುಕೊಂಡಿದ್ದರು ?

ಶ್ರೀ ಕೋಣಂದೂರು ಲಿಂಗಪ್ಪ.—ಈ ರಾಜ್ಯದ ಅಧಿಕೃತವಾದ ಪತ್ರಿಕೆಯಲ್ಲಿ ಯಾವ ರೀತಿ ಬಂದರೂ ಅದು ದಾಖಲೆಯಾಗುತ್ತದೆ.

(At this stage, Sri Konandur Lingappa, Sri Kagodu Thimmappa and Sri K. H. Hanume Gowda stood up)

Sri M. Y. GHORPADE.—All that I want say is that certain views have been expressed in the foreign paper. It is not the views of the Government. Those views appeared in the foreign press have been reproduced in our March of Karnataka.

(ಸಭೆಯಲ್ಲಿ 4-5 ಜನ ಸದಸ್ಯರುಗಳು ಒಟ್ಟಿಗೆ ನಿಂತು ಮಾತನಾಡುತ್ತಿದ್ದರು)

ಶ್ರೀ ಬಿ. ಪುಟ್ಟಸ್ವಾಮಯ್ಯ. ಇಲ್ಲಿ ಸಚಿವರುಗಳು ಹೇಳುವುದೇ ಒಂದು ಅವರು ಮಾಡುವುದೇ ಒಂದು...

Sri M. Y. GHORPADE.—It is not our views. It is written by a foreign citizen. When a view in written in foreign papers like 'Times' or 'Statesman' what can we do? We cannot direct them nor we request them.

ಶ್ರೀ ಕಾಗೋಡು ತಿಮ್ಮಪ್ಪ.—ಈ ರಾಜ್ಯಕ್ಕೆ 'ಕರ್ಣಾಟಕ' ಎಂಬ ಹೆಸರನ್ನು ನಾಮಕರಣ ಮಾಡತಕ್ಕ ಬಗ್ಗೆ ಶ್ರೀಮಾನ್ ದೇವರಾಜ ಅರಸರುರವರು ವಿರೋಧಾಭಿಪ್ರಾಯ ಹೊಂದಿದ್ದರೆಂಬುದು ಇತಿಹಾಸ ಪ್ರಸಿದ್ಧವಾಗಿದೆ. ಆದುದರಿಂದ ಅದನ್ನೂ ಇದರಲ್ಲಿ ಛಾಪಾ ಹಾಕಿಸುತ್ತೀರಾ ?

Sri M. Y. GHORPADE.—I am appealing to you all not to take things out of proportion.

ಶ್ರೀ ಎಚ್. ಡಿ. ದೇವೇಗೌಡ.—ಭಾರತ ದೇಶದಲ್ಲಿ ಮೈಸೂರು ರಾಜ್ಯ ಎಂಬುದು ಒಂದು ಸಣ್ಣ ರಾಜ್ಯ. ಆದಾಗ್ಯೂ ಇಲ್ಲಿ ಜಾತಿವೈಷಮ್ಯಗಳು ಎಷ್ಟರಮಟ್ಟಿಗೆ ಕೆಲಸಮಾಡುತ್ತಿವೆ ಎಂಬುಧನ್ನು ಅವರು ಆ ನ್ಯೂಯಾರ್ಕ್ ಪತ್ರಿಕೆಯಲ್ಲಿ ಬರೆಸುವುದಕ್ಕೆ ಹೊರಟಿದ್ದಾರೆ. ಆದರೆ ಇಂಥ ಯುಕ್ತಿಗಳಿಂದ ಈ ಪಕ್ಷ ಕೆಲವು ಕಾಲದವರೆಗೆ ಲಾಭ ಪಡೆಯಬಹುದೇ ವಿನಾ ಯಾವಾಗ್ಯೂ ಲಾಭ ಪಡೆಯುವುದಕ್ಕಾಗುವುದಿಲ್ಲ.

Sri M. Y. GHORPADE.—America is a big nation. They won't go to that extent. It is you who create all such things. So, my request is not to do such things. Regarding expression of opinion, the Editor of that journal has got certain freedom, according to that he has done it.

Sri KAGODU THIMMAPPA.—This Information Department is controlled by the Government. You can't use it as you please. You must use the information properly without giving room for any Controversy.

Sri M. Y. GHORPADE.—It is high time to mature ourself intellectually and politically, without getting exieited. We are not living in a tribal society; we are living in a civilised society. There are so many social institutions which are at liberty to give their opinions.

Sri KAGODU THIMMAPPA.—I am going to give one such information. Are you going to publish such views in that paper ?

Sri M. S. KRISHNAN.—I would like to give one example. ಇಷ್ಟು ವಿವಾದತ್ಮಕವಾಗಿರತಕ್ಕ ವಿಷಯುವನ್ನು ಏಕೆ ಪ್ರಿಂಟ್‌ಮಾಡಿಸುವುದಕ್ಕೆ ಹೋದರು ? Supposing there is an article critical of Government policies, are you prepared to publish it ?

Sri M. Y. GHORPADE.—It is not like that...

Sri M. S. KRISHNAN.—This may give a twisted impression.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಸರ್ಕಾರದವರ ವಿರುದ್ಧವಾಗಿ ಮಾತನಾಡಿದರೆ ಅದನ್ನೂ ಈ ಪತ್ರಿಕೆಯಲ್ಲಿ ಹಾಕಿಸುತ್ತೀರಾ ? I would like to know from the Hon'ble Minister about the policy of the Government in these matters Is there any principle to be a dopted so far aspublication inthe Government papers is concerned ?

Sri M. Y. GHORPADE.—As long as I am handling that Department I do believe in giving certain amount of freedom to its Editor unless it is anti-social or anti-national one.

Sri KAGODU THIMMAPPA.—If that is so, I want to know whether you allow that Editor to publish any information in my favour ?

Sri M. S KRISHNAN.— I want to know whether your 'March of Karan taka' will publish any article which is critical of the Govern ment policies ?

Sri KONANDUR LINGAPPA.—Is this a 'News paper' or 'Views paper'? ಸರ್ಕಾರ ಹೀಗೆ ಮನಸೋ ಇಚ್ಛೆ ಇಷ್ಟಬಂದುದಕ್ಕೆ ಹಣವನ್ನು ಖರ್ಚುಮಾಡಬಹುದೇ?.

Sri M. Y. GHORPADE.—There are certain scopes for expressing views of eminent people. We cannot mould it to suit our convenience or favour.

Sri KAGODU THIMMAPPA.—This type of argument holds good so far as private agencies are concerned. Then you say that this is the policy of the Government.

Sri M. Y. GHORPADE.—This is not the policy of the Government. I said that there should be freedom for the press, and even all communities have contributed to the creation of Karnataka.

ಶ್ರೀ ಎಸ್. ಬಂಗಾರಪ್ಪ.—ಭಾರತದಲ್ಲಿ ಹಾವುಗಳು ಜಾಸ್ತಿ ಇವೆ. ಇಲ್ಲಿಯ ಜನರು ಹೊಟ್ಟೆಗಿಲ್ಲದೆ ನಾಯಿಗಳಂತೆ ಅರೆಯುತ್ತಿದ್ದಾರೆ. ಈ ವಿಷಯವನ್ನೂ ಅಮೆರಿಕಾ ದೇಶದ ನ್ಯೂಯಾರ್ಕ್ ಪತ್ರಿಕೆಯಲ್ಲಿ ಹಾಕಿಸುತ್ತೀರಾ ?

Sri KAGODU THIMMAPPA.—You must use this Department properly.

Sri M. Y. GHORPADE.—Madam, I will now come to the points raised by hon. Members. With regard to the unclaimed lottery prizes, the following figures will show the correct picture.

ವಿರೋಧಪಕ್ಷದ ಸದಸ್ಯರಲ್ಲಿ ಕೆಲವರು ಅನ್‌ಕ್ಲೈಂವ್ಡ್ ಲಾಟರಿ ಹಣ ಎಷ್ಟಿದೆ ಎಂದು ಕೇಳಿದ್ದಾರೆ. ಅದರ ಬಗ್ಗೆ ಅಂಕಿಅಂಶಗಳನ್ನು ಕೊಡಬಯಸುತ್ತೇನೆ. 1—4—1971 ರಿಂದ 1—4—1974ರವರೆಗೆ ಸುಮಾರು 89 ಲಕ್ಷ ರೂಪಾಯಿ ಉಳಿದಿರುತ್ತದೆ. 1971 – 72ಕ್ಕೆ 37 ಲಕ್ಷ; 1972—73ಕ್ಕೆ 33 ಲಕ್ಷ ಮತ್ತು ಈ ಸಾಲಿಗೆ 19 ಲಕ್ಷ ರೂಪಾಯಿ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದ ಬಗ್ಗೆ ಏನು ಸಮಾಚಾರ ಬೇಕಾದರೂ ಇವರ ಆ ಸೇಲ್ಸ್ ಇಂಟರ್‌ನ್ಯಾಷನಲ್ಸ್ ಸಂಸ್ಥೆಯಲ್ಲಿದ್ದಾರಲ್ಲ ಅವರನ್ನು ಕೇಳಿದರೆ ಗೊತ್ತಾಗುತ್ತದೆ. ಅವರು ಕೊಡತಕ್ಕ ಮಾಹಿತಿಯನ್ನೇ ಇಲ್ಲಿವರು ನಮಗೆ ಹೇಳುತ್ತಾರೆ.

Sri M. Y. GHORPADE.—Another point was mada by the Leader of the Opposition that the prize were denied to some winnieg tickets· ಇಂಥದ್ದು ನನ್ನ ಗಮನಕ್ಕೆ ಯಾವುದೂ ಬಂದಿಲ್ಲ. There may be some cases of prizes which were not claimed in time·

Sri H. D. DEVE GOWDA.—Subsequently it was paid.

Sri M. Y. GHORPADE.—Mr. Kagodu Thimmappa mentioned about Manganese ore. I must point out that it is run by the Government of India under the Mineral Development Act and hence there is no question of getting any rayalty from it. ರಾಯಲ್ಟಿ ಅಧಿಕಾರಿ ನಮ್ಮ ಕಡೆ ಇಲ್ಲ. ಸೇಲ್ಸ್ ಟ್ಯಾಕ್ಸ್ ಹಾಕಿಲ್ಲ ಎಕ್ಸ್‌ಪೋರ್ಟಿಗೆ ಸೇಲ್ಸ್‌ಟ್ಯಾಕ್ಸ್ ಅನ್ವಯಿಸುವುದಿಲ್ಲ. That is the factual position.

ಗುಂಡೂರಾಯರು ಕಾಫಿ ಬಗ್ಗೆ ಹೇಳಿರುವುದು ಸ್ವಾಭಾವಿಕ. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಸೇಕಡ 80ರಷ್ಟು ಕಾಫಿಯಿಂದ ಬರುವುದು ನಿಜ. ಆದಕಾರಣ ಕಾಫಿ ಬೆಳವಣಿಗೆ ವಿಚಾರಕ್ಕೆ ಗಮನಕೊಡಬೇಕೆಂದು ಹೇಳಿರುವುದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಈ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ.

ಬಂಗಾರಪ್ಪನವರು ಫಿಲಂ ಸಿಬ್ಸಿಡಿಯ ಬಗ್ಗೆ ಹೇಳಿದರು, ನಾವು ಫಿಲಂ ಬಗ್ಗೆ ಸಬ್ಸಿಡಿ ಕೊಡುವುದಿಲ್ಲ, 50 ಸಾವಿರ ರೂಪಾಯಿ ಕೊಡುತ್ತೇವೆ, ಇದನ್ನು ಜಾಸ್ತಿ ಮಾಡಬೇಕೆಂದು ಕೇಳಿದ್ದಾರೆ. ಈ ವಿಚಾರ ಸರಕಾರದ ಪರಿಶೀಲನೆಯಲ್ಲಿದೆ. We give it to some films which have aesthetic value and which normally find it difficult to become a cemmercial success. ಕಮರ್ಷಿಯಲ್ಲಾಗಿ ಸಕ್ಸೆಸ್ ಆಗುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಬಲವಾದವರು ಹೇಳಿದರೆ ಒಂದು ರೀತಿ ಇಂಟರ್‌ಪ್ರಿಟ್ ಮಾಡುವರು. ಮಾಡಿ ಮಡಿದವರು ಎಂಬ ಚಿತ್ರಕ್ಕೆ ತೆರಿಗೆಯಿಂದ ವಿನಾಯತಿ ನೀಡಬೇಕು, ಸ್ವಾತಂತ್ರ್ಯ ಹೋರಾಟದ ಸಂಬಂಧದಲ್ಲಿರುವ ಈ ಫಿಲಂ ಯೋಗ್ಯವಾದ ಫಿಲಂ.

ಶ್ರೀ ಕೋಣಂದೂರು ಲಿಂಗಪ್ಪ.—ಅದರ ಕಥೆಯನ್ನು ಬಸವರಾಜ ಕಟ್ಟೀಮನಿಯವರು ಬರೆದಿದ್ದಾರೆ, ಇದರಲ್ಲಿ ಯಾವ ಪ್ರೈವೇಟ್ ಮೋಟಿವ್ ಸಹ ಇಲ್ಲ. ಕೇವಲ ಸ್ವಾತಂತ್ರ್ಯದ ವಿಷಯಕ್ಕೆ ಇದು ಸಂಬಂಧಪಟ್ಟದೆ. ಕಾಡು ಚಿತ್ರಕ್ಕೆ ವಿನಾಯಿತಿ ತೋರಿಸಿದ್ದಾರೆ.

Sri M. Y. GHORPADE.—'Kadu' film has got aesthetic value and it is not a commercial success. The principle for tax exemption for any film and also for Kannada films is that they should have aesthetic value and it is not a commercial success. I go out of my way to help Kannada films. All that I can say is we try to apply these rules as sympatheticaily as possible. But you cannot expect me to answer on the merits or demerits of a particular film in a debate like this.

ಶ್ರೀ ಕಾಗೋಡು ತಿಮ್ಮಪ್ಪ.—ಫಿಲಂ ಡೆವಲಪ್‌ಮೆಂಟ್ ಕಾರ್ಪೋರೇಷನ್ನನ್ನು ಸರಕಾರ ತೆಗೆದುಕೊಳ್ಳುವ ವಿಚಾರ ಹೇಳಿ.

ಶ್ರೀ ಎಂ. ವೈ. ಘೋರ್ಪಡೆ.—ಇದರಲ್ಲಿ ಸರಕಾರದ ಷೇರ್ ಕ್ಯಾಪಿಟಲ್ 20 ಲಕ್ಷ ರೂಪಾಯಿದೆ, 14 ಲಕ್ಷ ರೂಪಾಯಿ ಪಬ್ಲಿಕ್ ಕಾಂಟ್ರಿಬ್ಯೂಷನ್ ಇದೆ. ಸೇಕಡ 49ರಷ್ಟು ಸರಕಾರದ ಷೇರ್ ಕ್ಯಾಪಿಟಲ್ ಇದೆ, ಇದನ್ನು ಸೇಕಡ 51ಕ್ಕೆ ಏರಿಸಬೇಕೆಂದು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯು ಶಿಫಾರಸು ಮಾಡಿದೆ, ಇದು ಒಳ್ಳೆಯ ಅಭಿಪ್ರಾಯ ಅನ್ನಿಸುವುದು. ಇದರಲ್ಲಿ ನಾಮಿನೇಟೆಡ್ ಡೈರೆಕ್ಟರುಗಳಿದ್ದಾರೆ, ಹನುಮಾನ್— ಹೋಂ ಸೆಕ್ರೆಟರಿ, ಶಂಕರನಾರಾಯಣ - ಜಾಯಿಂಟ್ ಸೆಕ್ರೆಟರಿ ಫೈನಾನ್ಸ್ ಮತ್ತು ಕೆಂಪರಾಜ್—ಈ ಮೂರು ಜನರನ್ನು ಮೊದಲು ನಾಮಿನೇಟ್ ಮಾಡಿದ್ದಾರೆ.

Sri H. D. DEVE GOWDA.—The hon. Member Sri Bangarappa has made severe charges that Mr. Kemparaj Urs was a dnclared insolvent by Tamil Nadu High Court and he was nominated as a Director. We want to know the circumstances under which he was appointed as a Director ?

Sri M. Y. GHORPADE.—All that I can say is Government has powers to nominated three persons and they have nominated.

ಶ್ರೀ ಕಾಗೋಡು ತಿಮ್ಮಪ್ಪ.—ಇನ್‌ಸಾಲ್ವೆಂಟ್ ಆದವರು ಎಲೆಕ್ಷನ್ನಿಗೆ ನಿಲ್ಲುವುದಕ್ಕೆ ಬರುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹಾರಿಕೆ ಉತ್ತರ ಕೊಟ್ಟರೆ ಕಷ್ಟವಾಗುತ್ತದೆ. ಡೈರೆಕ್ಟರುಗಳನ್ನು ನೇಮಕ ಮಾಡುವುದಕ್ಕೆ ಮುಂಚೆ ಅವರ ಹಿನ್ನಲೆಯನ್ನು ಪರೀಕ್ಷಿಸಿ ಅವರ ಹಿಂದಿನ ಚರಿತ್ರೆಯನ್ನು ನೋಡಿ ಮಾಡಬೇಕು.

Sri M. Y. GHORPADE.—I have already said Government has power to nominate. If certain things are said about one of these Directors I will get it examined and bring to the notice of the Chief Minister.

ಶ್ರೀ ಎಸ್. ಬಂಗಾರಪ್ಪ.—ಮುಖ್ಯ ಕಾರ್ಯದರ್ಶಿಗಳಾಗಿದ್ದ ರೆಬೆಲೋರವರ ರಾಜೀನಾಮೆ ಪಡೆದು ಅವರ ಜಾಗದಲ್ಲಿ ಒಬ್ಬರನ್ನು ನೇಮಕ ಮಾಡಿದರು. ಹಾಗೆ ಮಾಡುವಾಗ ಮುಖ್ಯಮಂತ್ರಿಗಳ ಸಂಬಂಧಿಗಳನ್ನು ಹಾಕಿದ್ದಾರೆ, ಇದು ಸ್ವಜನ ಪಕ್ಷಪಾತ. ಎರಡನೆಯದು he is a declared insolvent by the High Court of Madras. ನಾನು ಜಡ್ಜ್‌ಮೆಂಟ್ ಕಾಪಿಯಿಂದ ನಂಬರ್ ವಗೈರೆ ಎಲ್ಲಾ ಕೋಟ್ ಮಾಡಿದ್ದೇನೆ. ಕೇಸ್ ನಂಬರನ್ನು ಕೋಟ್ ಮಾಡಿದ್ದೇನೆ, ಒರಿಜಿನಲ್ ಸೂಟ್ ನಂಬರು ಮುಂತಾದುದನ್ನು ಹೇಳಿದೆ. ಅನಂತರ ಫಿಗರ್ಸ್ ಹೇಳಿದೆ. ಈ ಹಿನ್ನೆಲೆಯಿರುವ ವ್ಯಕ್ತಿಯನ್ನು ಫಿಲಂ ಕಾರ್ಪೊರೇಷನ್ನಿಗೆ ಹಾಕಿರುವುದರ ಔಚಿತ್ಯವಾದರೂ ಏನು ? ಇದಕ್ಕೆ ಉತ್ತರ ಬರಬೇಕು. ನಾನು ಮಾಡಿರುವ ಆಪಾದನೆ ನಿಜವೆಂದು ಕಂಡರೆ ಸತ್ಯವೆಂದು ತೋರಿದರೆ ಡೈರೆಕ್ಟರ್‌ಷಿಪ್‌ನಿಂದ ಅವರನ್ನು ತೆಗೆದುಹಾಕಬೇಕು.

Sri M. Y. GHORPADE.—The point is these three Directors were nominated beforc this portfolio came to me. I cannot be expected to go into the logic of these appointments. I can only say that Government has the power to nominate and if there is anything worng I will get it examined.

Sri S. BANGARAPPA.—I want to know what the Government is going to do if the allegations are proved true ?

Sri M. Y. GHORPADE.—The dscision to appoint these Directors was taken earlier. If something fresh is said about it I will get it examined.

Sri S. BANGARAPPA.—I have not questioned the powers of the Government to nominate. But my point is whether a declared insolvent could be nominated as a Direetor by the Government ?

6-30 P. M.

Sri M. S. KRISHNAN.—We are not questioning the right of the Government to nominate or to appoint. Some facts have now been brought to the notice of the Hon'ble Miuister, and he says that he would get it examined. Is it not the bounden duty of the Government to have examined and applied their mind even before nomination or appointment ? Have the Government not failed in their duty if that

(SRI M. S. KRISHNAN)

is the position ? I would like to know if the Hon'ble Minister is going to correct it and assure this House that the Director (Sri D. Kemparaj Urs) will be removed if the statement of my friend Sri Bangarappa is true ?

Sri KAGODU THIMMAPPA.—Once a man becomes insolvent he is not entitled to hold any position or office of profit as per law, that too under the Government. ವಿಚಾರ ಮಾಡಿದಾಗ ಇನ್‌ಸಾಲ್ವೆಂಟ್ ಹೌದು ಎಂದು ಗೊತ್ತಾದರೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತಾರೆ ?

ಶ್ರೀ ಕೆ. ಎಚ್. ಹನುಮೇಗೌಡ.—ಇನ್‌ಸಾಲ್ವೆಂಟ್ ಆದರೆ ಬೇರೆ ಕಡೆ ಜಾಗವಿಲ್ಲ ಎಂದು ಜನ ತಿಳಿದುಕೊಂಡಿದ್ದರು. ಇನ್‌ಸಾಲ್ವೆಂಟ್ ಆದರೂ ಒಂದು ಸಂಸ್ಥೆಯಲ್ಲಿ ಜಾಗ ಸಿಕ್ಕುತ್ತದೆ ಎಂದರೆ ನಾವು ಇನ್‌ಸಾಲ್ವೆಂಟ್ ಆಗಿದ್ದೇವೆ ನಮ್ಮ ಹೆಸರನ್ನು ಸಿಫಾರಸು ಮಾಡಿ ಎಂದು ಬರುವವನ್ನು ಕಳುಹಿಸಿಕೊಟ್ಟರೆ ಅವರ ಹೆಸರುಗಳನ್ನೂ ಪರ್ಯಾಲೋಚನೆ ಮಾಡುತ್ತಾರೆಯೇ ?

Sri M. Y. GHORPADE.—I can only say that I cannot express any opinion on the charges made by the Opposition without having it duly examined.

ಶ್ರೀ ಕಾಗೋಡು ತಿಮ್ಮಪ್ಪ.—ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬೈಲಾಗಳ ಪ್ರಕಾರ ಇನ್‌ಸಾಲ್ವೆಂಟ್ ಆದವರು ಡೈರೆಕ್ಟರಾಗಬಹುದೇ ಇಲ್ಲವೇ ?

MADAM SPEAKER.—Let the Hon'ble Minister get it examined.

ಶ್ರೀ ಕಾಗೋಡು ತಿಮ್ಮಪ್ಪ.—ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬೈಲಾ ಪ್ರಕಾರ ಇನ್‌ಸಾಲ್ವೆಂಟ್ ಆದವರು ಡೈರೆಕ್ಟರಾಗಬಹುದೇ ?

Madam SPEAKER.—The hon. members must believe the Government. Now I will put the Demands to the vote of the House.

The question is :—

"That the respective sums not exceeding the amounts mentioned in the list of Demands be granted to Government to defray the charges which will come in course of payment during the financial year for the period ending with 31st day of March 1975, in respect of Demand Nos. 4, 8, 11, 14, 22, 23, 32 and 61".

The motion was adopted and the grants were voted.

As ordered by the Chair the motion for Demands for grants adopted by the House are reproduced below.

MINISTER FOR FINANCE AND INFORMATION—

Demand No. 4—Collection of Taxes on Income and Expenditure

"That a sum not exceeding Rs. 12,98,000 inclusive of the sum granted 'on account' be granted to the Government

to defray the charges which will come in course of payment during the financial year ending 31st day of March 1975 in respect of "Collection of Taxes on Income and Expenditure".

Demand No. 8— Sales Tax

"That a sum not exceeding Rs. 1,85,98,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Sales Tax".

Demand No. 11—Small Savings

"That a sum not exceeding Rs. 16,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Small Savings".

Demand No. 14—Treasury and Accounts Administration

"That a sum not exceeding Rs. 1,25,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Treasury and Accounts Administration".

Demand No. 22—Other Administrative and General Services

"That a sum not exceeding Rs. 2,84,65,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Other Administrative and General Services".

Demand No. 23—Pension and Other Retirement Benefits

"That a sum not exceeding Rs. 9,26,72,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Pension and Other Retirement Benefits".

(MADAM SPEAKER)

Demand No. 32—Information and Publicity

"That a sum not exceeding Rs. 1,21,16,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Information and Publicity".

Demand No. 61—Loans to Government Servants and Miscellaneous Loans.

"That a sum not exceeding Rs. 1,00,25,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Loans to Government Servants and Miscellaneous Loans".

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಚಿವರು ನಾಳೆಯಾದರೂ ಲೀಗಲ್ ಪ್ರೊವಿಷನ್ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳುತ್ತೇನೆ.

Sri M. Y. GHORPADE.—I require two days.

ಅಧ್ಯಕ್ಷರು.—ನಾಳೆ ಬೆಳಿಗ್ಗೆ 9 ಗಂಟೆಯಿಂದ 12 ಗಂಟೆಯವರೆಗೆ ಒಂದು ಸಿಟಿಂಗ್ ಮತ್ತು ಒಂದು ಗಂಟೆಯಿಂದ ಮಾಮೂಲು ಸಿಟಿಂಗ್ ಇದೆ. ಬೆಳಿಗ್ಗೆ ಟ್ಯಾಕ್ಸೇಷನ್ ಬಿಲ್ಸ್ ತೆಗೆದುಕೊಳ್ಳುತ್ತೇವೆ ಮತ್ತು ಮಧ್ಯಾಹ್ನ ಬೇಡಿಕೆಗಳನ್ನು ತೆಗೆದುಕೊಳ್ಳುತ್ತೇವೆ. The House stands adjourned to meet again tomorrow at 9-00 A. M.

The House adjourned at Thirty-five Minutes past Six of the Clock to meet again at Nine of the Clock on Tuesday the 30th April 1974.